"ಮೇಲುಕೋಟೆಯ ಪರಿಸರದಲ್ಲಿನ ಜಲಸಂಗ್ರಹಗಳು"
ಒಂದು ಅಧ್ಯಯನ

(ಇತಿಹಾಸ ವಿಷಯದ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ನಿಬಂಧ)

ಸಂಶೋಧಕಿ
ಆರ್.ಎನ್.ರಶ್ಮಿ

ಮಾರ್ಗದರ್ಶಕರು
ಡಾ. ಟಿ.ವಿ.ನಾಗರಾಜ

ಕರ್ನಾಟಕ ಸಂಘ (ರಿ), ಮಂಡ್ಯ.
ಎಂ.ಎಲ್.ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
೨೦೦೭-೦೮

[illegible]

“ಮೇಲುಕೋಟೆಯ ಪರಿಸರದಲ್ಲಿನ ಜಲಸಂಗ್ರಹಗಳು”
ಒಂದು ಅಧ್ಯಯನ

(ಇತಿಹಾಸ ವಿಷಯದ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ನಿಬಂಧ)

ಸಂಶೋಧಕಿ
ಆರ್.ಎನ್.ರಶ್ಮಿ

ಮಾರ್ಗದರ್ಶಕರು
ಡಾ. ಟಿ.ವಿ.ನಾಗರಾಜ

ಕರ್ನಾಟಕ ಸಂಘ (ರಿ), ಮಂಡ್ಯ.
ಎಂ.ಎಲ್.ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
೨೦೦೭–೦೮

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೭–೦೮ನೇ ಸಾಲಿಗೆ ಇತಿಹಾಸ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಮೇಲುಕೋಟೆ ಪರಿಸರದಲ್ಲಿನ ಜಲಸಂಗ್ರಹಗಳು" ಒಂದು ಅಧ್ಯಯನ ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಟಿ.ವಿ.ನಾಗರಾಜರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಯಾವುದೇ ಅಧ್ಯಾಯಗಳನ್ನಾಗಲಿ, ಬೇರೆ ಯಾವುದೇ ಗ್ರಂಥಗಳು ಹಾಗೂ ನಿಯತ ಕಾಲಿಕಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ. ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ದಿನಾಂಕ: 9-9-2008
ಸ್ಥಳ: ಮಂಡ್ಯ.

ಅಭ್ಯರ್ಥಿಯ ಸಹಿ
(ಆರ್.ಎನ್.ರಶ್ಮಿ)
ಇತಿಹಾಸ ವಿಭಾಗ
ಕರ್ನಾಟಕ ಸಂಘ, ಮಂಡ್ಯ.

ಮಾರ್ಗದರ್ಶಕರ ಪ್ರಮಾಣ ಪತ್ರ

"ಮೇಲುಕೋಟೆ ಪರಿಸರದಲ್ಲಿನ ಜಲಸಂಗ್ರಹಗಳು" ಒಂದು ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಎಂ.ಫಿಲ್. ಪದವಿಗಾಗಿ ಆರ್.ಎನ್. ರಶ್ಮಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 9/9/2008.
ಸ್ಥಳ: ಮಂಡ್ಯ

T.V. Nagaraj
ಡಾ.ಟಿ.ವಿ.ನಾಗರಾಜ
ಆಯ್ಕೆ ಶ್ರೇಣಿ
ಇತಿಹಾಸ ಉಪನ್ಯಾಸಕರು
ಸರ್ಕಾರಿ ಕಲಾ ಕಾಲೇಜು
ಬೆಂಗಳೂರು.

"ಮೇಲುಕೋಟೆ ಪರಿಸರದಲ್ಲಿನ ಜಲಸಂಗ್ರಹಗಳು"

– ಒಂದು ಅಧ್ಯಯನ.

ಪರಿವಿಡಿ

ನಕ್ಷೆಗಳು ಮತ್ತು ಛಾಯಾಚಿತ್ರಗಳು

ನಕ್ಷೆಗಳು

1. ಮಂಡ್ಯ ಜಿಲ್ಲಾ ನಕ್ಷೆ
2. ಪಾಂಡವಪುರ ತಾಲ್ಲೂಕು ನಕ್ಷೆ
3. ಮೇಲುಕೋಟೆ ನಕ್ಷೆ
4. ಮೇಲುಕೋಟೆ ಪರಿಸರದಲ್ಲಿನ ಜಲಸಂಗ್ರಹಗಳ ಒಂದು ಪಕ್ಷಿ ನೋಟದ ನಕ್ಷೆ

ಛಾಯಾಚಿತ್ರಗಳು

1. ಕಲ್ಯಾಣಿ
2. ಅಕ್ಕ-ತಂಗಿ ಕೊಳಗಳು (ಚಲುವೆಅರಸಿನ ಕೊಳಗಳು)
3. ವೇದಪುಷ್ಕರಣಿ
4. ಧನುಷ್ಕೋಟಿ
5. ಯಾದವತೀರ್ಥ
6. ದರ್ಭತೀರ್ಥ
7. ಪಲಾಶತೀರ್ಥ
8. ಪದ್ಮತೀರ್ಥ
9. ಮೈತ್ರೇಯತೀರ್ಥ

10. ನಾರಾಯಣತೀರ್ಥ

11. ತೊಟ್ಟಿಲಮಡು (ವೈಕುಂಠಗಂಗೆ)

12. ಚಕ್ರಕಟ್ಟೆ

13. ಹೊಸಬಾವಿ

14. ಕಾಟೇರಿ

15. ಒಕ್ಕರಣೆ

16. ದಳವಾಯಿಕೆರೆ

17. ಹೊಸಕೆರೆ

18. ಹುಳಿಗೆರೆಕೆರೆ

19. ತೊಣ್ಣೂರು ಕೆರೆಯ ಹಿನ್ನೀರಿನ ಒಂದು ನೋಟ

20. ರಾಮಸಿಂಗನಕಟ್ಟೆ

21. ಸಿಗಡಿಕಟ್ಟೆ

ಅಧ್ಯಾಯ– 1

1.1 ಪೀಠಿಕೆ

1.2 ಭೌಗೋಳಿಕ ಹಿನ್ನೆಲೆ

1.3 ಐತಿಹಾಸಿಕ ಹಿನ್ನೆಲೆ

1.4 ಅಧ್ಯಯನದ ಮಹತ್ವ

1.5 ಅಧ್ಯಯನದ ಉದ್ದೇಶಗಳು

1.6 ಅಧ್ಯಯನದ ವ್ಯಾಪ್ತಿ

1.7 ಸಂಶೋಧನ ವಿಧಾನ

1.8 ಆಧಾರಗಳು

1.9 ಅಧ್ಯಯನದ ವರ್ಗೀಕರಣ

ಅಡಿಟಿಪ್ಪಣಿಗಳು.

1.1 ಪೀಠಿಕೆ:

"ನೀರಿಲ್ಲದ ಮಾನವನ ಜೀವನ ಊಹಿಸಲಸಾಧ್ಯ" ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ನೀರು ಸಹ ಒಂದಾಗಿದೆ. ಇದು ಮಾನವನಿಗಷ್ಟೇ ಅಲ್ಲ ಪ್ರತಿಯೊಂದು ಜೀವಸಂಕುಲಗಳಿಗೂ ಅತ್ಯಂತ ಮುಖ್ಯವಾದುದ್ದಾಗಿದೆ. ಮಾನವನ ದೈನಂದಿನ ಚಟುವಟಿಕೆಯಲ್ಲಿ ನೀರು ಹಾಸುಹೊಕ್ಕಾಗಿದ್ದು, ಮಾನವನ ದೈನಂದಿನ ಬದುಕು ನೀರಿನಿಂದ ಆರಂಭವಾಗಿ ನೀರಿನಿಂದಲೇ ಮುಕ್ತಾಯವಾಗುತ್ತದೆ. ಭೂಮಿಯ ಸುಮಾರು 3/4 ಭಾಗವನ್ನು ನೀರು ಆವರಿಸಿದೆ. ಇತ್ತೀಚಿನ ವರ್ಷಗಳಲ್ಲಿ ತೀವ್ರಗತಿಯ ಜನಸಂಖ್ಯಾ ಬೆಳವಣಿಗೆ ಮತ್ತು ಆರ್ಥಿಕ ಪ್ರಗತಿಯಿಂದಾಗಿ ನೀರಿನ ಬಳಕೆಯ ಪ್ರಮಾಣವು ಹೆಚ್ಚಾಗಿದೆ. ವಿವಿಧ ಉದ್ದೇಶಗಳಿಗಾಗಿ ಅವಿರತವಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ನೀರಿನ ಸಮರ್ಪಕ ಬಳಕೆ, ನಿರ್ವಹಣೆ ಮತ್ತು ಸಂರಕ್ಷಣೆ ಮಹತ್ವ ಪಡೆಯುತ್ತದೆ.

ಒಂದು ಸಂಸ್ಕೃತಿಯ ಉಗಮ ಮತ್ತು ವಿಕಾಸಕ್ಕೆ ನೀರೇ ತಳಹದಿಯಾಗಿದೆ. ಪ್ರಪಂಚದಲ್ಲಿನ ಎಲ್ಲಾ ನಾಗರೀಕತೆಗಳು ನದಿ ತೀರಗಳಲ್ಲಿ ಉಗಮ ಹಾಗು ಬೆಳವಣಿಗೆ ಯಾಗಿರುವುದು ಸರ್ವವಿದಿತ. ಜನವಸತಿಯ ನೆಲೆಗಳ ಜೊತೆಗೆ ಜಲಸಂಗ್ರಹಗಳನ್ನು ನಿರ್ಮಿಸಲಾಗುತ್ತದೆ. ಪ್ರತಿಯೊಂದು ಗ್ರಾಮವು ಕೆರೆ, ಕಟ್ಟೆ, ಕುಂಟೆ, ಕೊಳ ಹಾಗೂ ಬಾವಿ ಮೊದಲಾದ ಜಲಸಂಗ್ರಹದ ಮೂಲಗಳನ್ನು ಅವಲಂಬಿಸಿಯೇ ಇರುತ್ತದೆ. ಮಾನವನ ಆರ್ಥಿಕ, ಸಾಮಾಜಿಕ, ಧಾರ್ಮಿಕತೆಯ ಉನ್ನತೀಕರಣಕ್ಕೆ ನೀರು ದ್ಯೋತಕವಾಗಿದೆ.

ಭಾರತವು ಪ್ರಮುಖವಾಗಿ ಕೃಷಿ ಆಧಾರಿತ ರಾಷ್ಟ್ರವಾಗಿದ್ದು, ಇಂದಿಗೂ ಭಾರತೀಯರ ಪ್ರಮುಖ ವೃತ್ತಿ ವ್ಯವಸಾಯವೇ ಆಗಿದೆ. ಮಾನವನು ಮೊದಲಿಗೆ ವ್ಯವಸಾಯವನ್ನು ಪ್ರಾರಂಭಿಸಿದಾಗ ಅವನು ಮಳೆಯನ್ನೇ ನಂಬಿದ್ದು, ನಂತರ ವಿಫುಲವಾಗಿ ನೀರು ಸಿಗುವ ತಾಣವಾಗಿದ್ದ ನದಿಯನ್ನು ಆಶ್ರಯಿಸಿದ್ದನು. ಪರಿಸರದಲ್ಲಿ ಆಗುತ್ತಿದ್ದ ಬದಲಾವಣೆಗಳು ಮತ್ತು ಮಳೆಯಲ್ಲಿನ ವೈಪರೀತ್ಯತೆಯಿಂದಾಗಿ ಮಾನವನು ನೀರಿನ ಸೂಕ್ತ

ಉಪಯೋಗವನ್ನು ಸಕಾಲಕ್ಕೆ ಪಡೆಯದಾದನು. ಈ ಅಂಶವನ್ನು ಗಮನಿಸಿದ ಮಾನವ ಬಿದ್ದ ಮಳೆಯ ನೀರನ್ನು ಸಂಗ್ರಹ ಮಾಡಿಕೊಳ್ಳಲು ತನ್ನ ಸಾಮರ್ಥ್ಯಕ್ಕೆ ಅನುಗುಣವಾದ ಜಲಸಂಗ್ರಹಗಳನ್ನು ನಿರ್ಮಿಸುತ್ತಾ ಬಂದನು. ಮಳೆಯು ಕೆಲವು ಮಾಸಗಳು ಮಾತ್ರ ಇರುತ್ತಿದ್ದು, ನದಿಯಿಂದ ಇಡೀ ಭೂಪ್ರದೇಶಕ್ಕೆಲ್ಲಾ ನೀರನ್ನು ಒದಗಿಸಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಅವನು ಎಲ್ಲಾ ಮೂಲಗಳಿಂದ ನೀರನ್ನು ಸಂಗ್ರಹಿಸಿಟ್ಟುಕೊಂಡು, ಅಗತ್ಯ ಬಿದ್ದಾಗ ಅತ್ಯಂತ ಸಮರ್ಪಕವಾಗಿ ಬಳಸಿಕೊಳ್ಳಲು ಕೃತಕ ಜಲಸಂಗ್ರಹಗಳಾದ ಕೆರೆಗಳು, ಕಟ್ಟೆಗಳು, ಕುಂಟೆಗಳು, ಬಾವಿಗಳು ಹಾಗು ಕೊಳಗಳನ್ನು ನಿರ್ಮಿಸಿಕೊಂಡನು.

ಪ್ರಾಚೀನ ಕಾಲದಲ್ಲಿ ಕೆರೆ, ಕಟ್ಟೆ, ಕೊಳ, ಕುಂಟೆ, ಸಮುದ್ರ, ಡೊಣೆ ಹಾಗೂ ಪುಷ್ಕರಣಿ ಇತ್ಯಾದಿಯಾಗಿ ನೀರಾವರಿ ಆಶ್ರಯಗಳನ್ನು ಕುರಿತು ಕರ್ನಾಟಕದ ಪ್ರಾಚೀನ ಶಾಸನಗಳಲ್ಲಿ ಉಲ್ಲೇಖಿಸಿದೆ. ಹಾಗೆಯೇ ನೀರಾವರಿ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವ ಶಾಸನಗಳು ಸಹ ವಿಫುಲವಾಗಿವೆ. ಅರಸರು, ಅರಸಿಯರು, ಅರಸನ ಅಧಿಕಾರಿಗಳು ಮತ್ತು ಶ್ರೀಮಂತರು ದೇವಸ್ಥಾನವನ್ನು ಕಟ್ಟಲು ತೋರಿಸಿದ ಭಕ್ತಿ_ಭಾವದಿಂದಲೇ ಕೆರೆ, ಕಟ್ಟೆ, ಕೊಳ ಹಾಗೂ ಬಾವಿ ಮೊದಲಾದ ಜಲಸಂಗ್ರಹಗಳನ್ನು ಪುಣ್ಯದ ಕೆಲಸವೆಂದು ಕಟ್ಟಿಸುತ್ತಿದ್ದರು.

ಮೇಲುಕೋಟೆಯು ಎತ್ತರವಾದ ಬೆಟ್ಟ ಪ್ರದೇಶವಾಗಿದ್ದು, ಇದು ತನ್ನ ತಪ್ಪಲಿನ ಸುತ್ತಲೂ ಕದಲಗೆರೆ, ಕಾಡೇನಹಳ್ಳಿ, ಬಳಿಘಟ್ಟ, ಹೊಸಳ್ಳಿ, ಹುಳಿಗೆರೆ ಮೊದಲಾದ ಗ್ರಾಮಗಳನ್ನು ಒಳಗೊಂಡಿದೆ. ಇವುಗಳು ಮಳೆಯ ನೀರನ್ನೇ ಆಶ್ರಯಿಸಿದ್ದು, ಯಾವುದೇ ನದಿ ಮೂಲದ ಕಾಲುವೆಗಳ ನೀರಿನ ವ್ಯವಸ್ಥೆ ಇಲ್ಲವಾದರೂ, ಬೆಟ್ಟ ಗುಡ್ಡಗಳು ಹಾಗು ತನ್ನ ಸುತ್ತಲಿನ ಎತ್ತರವಾದ ಪ್ರದೇಶದಲ್ಲಿ ಬಿದ್ದ ಮಳೆಯ ನೀರನ್ನು ತಗ್ಗಾದ ಭಾಗದಲ್ಲಿ ಸಂಗ್ರಹಿಸುವ ಉದ್ದೇಶದಿಂದ ಅಲ್ಲಲ್ಲಿ ಸರಣಿಯೋಪಾದಿಯಲ್ಲಿ ಕೊಳ, ಕಟ್ಟೆ, ಬಾವಿ, ಕೆರೆ ಮೊದಲಾದ ಜಲಸಂಗ್ರಹಗಳನ್ನು ಮಳೆಕೊಯ್ಲಿನಂತೆ ನಿರ್ಮಿಸಿಕೊಂಡಿದ್ದಾರೆ. ಇದರಿಂದಾಗಿ ಅಲ್ಲಿನ ಜನರು ನೀರನ್ನು ಸಂಪೂರ್ಣ ಸದ್ಬಳಕೆ ಮಾಡಿಕೊಂಡು ಕೃಷಿ ಚಟುವಟಿಕೆಗಳನ್ನು

ಕೈಗೊಂಡಿರುವುದು ಕಂಡು ಬಂದಿದೆ. ಮಳೆಗಾಲದಲ್ಲಿ ಮೇಲುಕೋಟೆಯ ಸೊಬಗನ್ನು ವರ್ಣಿಸಲು ಅಸಾಧ್ಯ. ಮಧ್ಯದಲ್ಲಿ ಎತ್ತರವಾದ ಬೆಟ್ಟ, ಅದರಲ್ಲಿ ಜಿನುಗುತ್ತಿರುವ ಝರಿಯ ನೀರು, ಸುತ್ತಲು ಮಟ್ಟಸವಾದ ಪ್ರದೇಶ, ಅಲ್ಲಲ್ಲಿ ಜಲಸಂಗ್ರಹಗಳು, ಬೆಳೆದು ನಿಂತ ಹಚ್ಚಹಸಿರು ನೋಡುಗರ ಮನಸ್ಸಿಗೆ ಮುದ ನೀಡುತ್ತದೆ.

1.2 ಭೌಗೋಳಿಕ ಹಿನ್ನೆಲೆ:

ಪ್ರಮುಖ ಶ್ರೀವೈಷ್ಣವ ಕ್ಷೇತ್ರವಾದ ಮೇಲುಕೋಟೆಯು 12° $40'$ ಉತ್ತರ ಅಕ್ಷಾಂಶ ಮತ್ತು 76° $43'$ ಪೂರ್ವ ರೇಖಾಂಶಕ್ಕಿದೆ.[1] ಇದೊಂದು ಹೋಬಳಿ ಕೇಂದ್ರವಾಗಿದ್ದು, ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿದೆ. ಈ ಸ್ಥಳವು ಮೈಸೂರಿನಿಂದ ಸುಮಾರು 50 ಕಿ.ಮೀ. ಹಾಗೂ ತಾಲ್ಲೂಕು ಕೇಂದ್ರದಿಂದ ಸುಮಾರು 26 ಕಿ.ಮೀ. ದೂರದಲ್ಲಿದ್ದು, ಇದು ಸಮುದ್ರ ಮಟ್ಟಕ್ಕಿಂತ 1,031 ಮೀ. ಎತ್ತರದಲ್ಲಿದೆ.[2] ಇದೊಂದು ಸುಂದರ ತಾಣವಾಗಿದ್ದು, ಶ್ರೀವೈಷ್ಣವರ ಯಾತ್ರಾಸ್ಥಳವು, ಧಾರ್ಮಿಕ ಕ್ಷೇತ್ರವು, ಪ್ರವಾಸಿ ತಾಣವು, ಐತಿಹಾಸಿಕ ಸ್ಥಳವೂ ಆಗಿದೆ. ಈ ಗ್ರಾಮವು ಕ್ರಿ.ಶ. 1981ರಲ್ಲಿ 2685 ಜನಸಂಖ್ಯೆಯನ್ನು ಹೊಂದಿದ್ದಿತ್ತು.[3] ಈ ಗ್ರಾಮವು ಪ್ರಸ್ತುತದಲ್ಲಿ 7960 ಜನಸಂಖ್ಯೆಯನ್ನು ಹಾಗೂ ಸುಮಾರು 1000 ಮನೆಗಳನ್ನು ಹೊಂದಿದೆ.[4] ಈ ಪ್ರದೇಶವು ಎತ್ತರವಾದ ಪ್ರದೇಶವಾಗಿರುವುದರಿಂದ ಬೇಸಿಗೆ ಕಾಲದಲ್ಲಿ ಹವಾಮಾನ ಬಹಳ ತಂಪಾಗಿರುತ್ತದೆ. ಇದು ಉತ್ತರದಿಂದ ದಕ್ಷಿಣಕ್ಕೆ ಸುಮಾರು 4.5 ಕಿ.ಮೀ., ಪೂರ್ವದಿಂದ ಪಶ್ಚಿಮಕ್ಕೆ 0.75 ಕಿ.ಮೀ. ದೂರವಿದೆ.[5]

ಗ್ರಾಮದ ಸುತ್ತಲೂ ಇಂದಿಗೂ ಶಿಥಿಲವಾದ ಕೋಟೆಗೋಡೆಯನ್ನು ಕಾಣಬಹುದು. ಈ ಗ್ರಾಮದ ಪೂರ್ವದಲ್ಲಿ ಮೂರುಕಡೆಗಳಲ್ಲೂ, ಪಶ್ಚಿಮದಲ್ಲಿ ಎರಡು ಕಡೆಗಳಲ್ಲೂ ಹಾಸುಗಲ್ಲಿನ ಮೆಟ್ಟಿಲುಗಳ ದಾರಿಗಳಿವೆ. ಇತ್ತೀಚೆಗೆ ವಾಹನ ಸಂಚಾರಕ್ಕೆ ಪೂರ್ವದ ಕಣಿವೆಯ, ಉತ್ತರದ ಕೊನೆಯಿಂದ ಮೇಲಕ್ಕೆ ಬರಲು ಡಾಂಬರೀಕರಣದ

ರಸ್ತೆಯನ್ನು ಮಾಡಿದ್ದಾರೆ. ಪ್ರಸ್ತುತದಲ್ಲಿ ಗ್ರಾಮದ ದಕ್ಷಿಣಕ್ಕೆ ಹೊಸದಾಗಿ ರಸ್ತೆಯೊಂದು ನಿರ್ಮಾಣವಾಗುತ್ತಿದ್ದು, ಇದು ಕೆರೆತೊಣ್ಣೂರು ಮೂಲಕ ಶ್ರೀರಂಗಪಟ್ಟಣಕ್ಕೆ ನೇರವಾಗಿ ಸಂಪರ್ಕವನ್ನುಂಟು ಮಾಡುವ ಯೋಜನೆಯಾಗಿದೆ.

ಜಕ್ಕನಹಳ್ಳಿಯಿಂದ ಮೇಲುಕೋಟೆಗೆ ಪ್ರಯಾಣ ಬೆಳೆಸಿದರೆ, ಊರಿಗೇರಿ ಬರುವಾಗ ಉತ್ತರದ ದಿಕ್ಕಿನ ಕೊನೆಯಲ್ಲಿ ಮೊದಲು 'ಹೊಸಕೆರೆ' ಎಂಬ ಕೆರೆಯು ಸಿಗುತ್ತದೆ. ಹಾಗೆಯೇ ಸ್ವಲ್ಪದೂರ ಮುಂದೆ ಬಂದರೆ ಪೂರ್ವದ ಕಣಿವೆಯ ರಸ್ತೆಯ ಪಕ್ಕಕ್ಕೆ 'ತೊಟ್ಟಿಲಮಡು' ಎಂಬ ಕಣಿವೆ ತೊರೆಯ ರಮ್ಯ ಪ್ರದೇಶವಿದೆ. ನಂತರ ಮುಂದುವರಿದು ಊರ ದಾರಿಯಲ್ಲಿ ಸಾಗಿದರೆ ಎಸ್.ಇ.ಟಿ. ಪಾಲಿಟೆಕ್ನಿಕ್ ಕಾಲೇಜಿನ ಪಕ್ಕಕ್ಕೆ ಶನೇಶ್ವರ ದೇವಸ್ಥಾನವು, ಇದರ ಮುಂಭಾಗದಲ್ಲಿ ಕಾಳಮ್ಮನ ದೇವಸ್ಥಾನವು ಸಿಗುತ್ತದೆ. ನಂತರ ಮುಂದುವರಿದರೆ, ಊರ ಒಳಗೆ ರಸ್ತೆಯ ಎಡಬದಿಗೆ 'ಕಲ್ಯಾಣಿ' ಎಂಬ ಪುಷ್ಕರಣಿಯು ಸಿಗುತ್ತದೆ. ಈ ಪುಷ್ಕರಣಿಯ ಸುತ್ತಲೂ ಅಳಹಿಯಮನವಾಳಮಠ, ಅಹೊಬಲಮಠ, ಜ್ಞಾನಾಶ್ವತ್ಥವೆಂಬ ಪುರಾತನ ಅರಳಿಮರ, ಭುವನೇಶ್ವರಿಮಂಟಪ, ನಾಮಕಲ್ಲುತೊಟ್ಟಿ ಎಂಬ ಕಲ್ಯಾಣಮಂಟಪ, ಗಜೇಂದ್ರವರದ ಸನ್ನಿಧಿ, ನಾಗವಲ್ಲಿಮಂಟಪ, ವರಾಹಕ್ಷೇತ್ರ, ಬಿಂದುಮಾಧವನ ಸನ್ನಿಧಿ ಮೊದಲಾದವುಗಳಿವೆ. ಈ ಪುಷ್ಕರಣಿಯ ಪೂರ್ವಕ್ಕೆ ಯೋಗಾನರಸಿಂಹಸ್ವಾಮಿ ಬೆಟ್ಟವಿದೆ.

ಕಲ್ಯಾಣಿ ತೀರ್ಥದ ಈಶಾನ್ಯಕ್ಕೆ ಬಂಡೆಕಲ್ಲು ಗಣಪತಿ, ಉತ್ತರಕ್ಕೆ ಮೈತ್ರೇಯ ತೀರ್ಥ, ನಾರಾಯಣತೀರ್ಥ ಮತ್ತು ಪಾಂಡವರ ಗುಹೆಗಳಿವೆ. ಅಂಗಡಿ ಬೀದಿಯಲ್ಲಿ ದೇವಸ್ಥಾನಕ್ಕೆ ಬರುವ ಮಧ್ಯದಲ್ಲಿ ರಸ್ತೆಯ ಎಡಬದಿಗೆ ತೆಪ್ಪಕೊಳ ಸಿಗುತ್ತದೆ. ಹಾಗೆಯೇ ಬಲಭಾಗಕ್ಕೆ ಆಂಜನೇಯ ದೇವಸ್ಥಾನವಿದೆ. ಇದೇ ಬೀದಿಯಲ್ಲಿ ಮುಂದುವರಿದರೆ ಚಲುವನಾರಾಯಣಸ್ವಾಮಿ ದೇವಾಲಯವು ಸಿಗುತ್ತದೆ. ದೇವಾಲಯದ ಮುಂಭಾಗದಲ್ಲಿ ಮುಂದೆ ಸಾಗಿದರೆ ರಾಯಗೋಪುರ ಸಿಗುತ್ತದೆ. ಇದನ್ನು ಬಿಟ್ಟು ಮುಂದುವರಿದರೆ,

ಸಂಸ್ಕೃತ ಸಂಶೋಧನ ಸಂಸತ್ ಸಿಗುತ್ತದೆ. ದೇವಾಲಯದ ಹಿಂಭಾಗದಲ್ಲಿನ ರಸ್ತೆಯಲ್ಲಿ ಬಂದರೆ ಅಕ್ಕ–ತಂಗಿ (ಚಲುವೆಅರಸಿನ ಕೊಳಗಳು) ಎಂಬ ಎರಡು ಅವಳಿ ಕೊಳಗಳು ಸಿಗುತ್ತವೆ. ಇಲ್ಲಿಂದ ದಕ್ಷಿಣಕ್ಕೆ ಮತ್ತೆ ಸಾಗಿದರೆ 'ವೇದಪುಷ್ಕರಣಿ' ಎಂಬ ಅಷ್ಟತೀರ್ಥದ ಕೊಳ ಸಿಗುತ್ತದೆ. ಇಲ್ಲಿಂದ ಮುಂದೆ ಸ್ವಲ್ಪ ದೂರ ಸರಿದರೆ 'ಧನುಷ್ಕೋಟಿ' ಸಿಗುತ್ತದೆ.

ರಾಯಗೋಪುರದ ಕೋಟೆಯ ಬಾಗಿಲಿನ ಹತ್ತಿರವಿರುವ ಹಾಸುಗಲ್ಲಿನ ಮೆಟ್ಟಿಲನ್ನು ಇಳಿದು ದಕ್ಷಿಣಕ್ಕೆ ನಡೆದರೆ, ಕೀಳುಚಿಕ್ಕಯ್ಯನ ಕೊಳ ಮತ್ತು ಅದರ ದಂಡೆಯಲ್ಲಿ ಶ್ರೀನಿವಾಸ ದೇವರ ಗುಡಿ ಸಿಗುತ್ತದೆ. ಇದನ್ನು ಬಿಟ್ಟು ಮುಂದುವರೆದು ಕಾಲುದಾರಿಯಲ್ಲಿ ಪ್ರದಕ್ಷಣೆಯಾಗಿ ಬೆಟ್ಟವನ್ನು ಬಲಕ್ಕೆ ಬಿಡುತ್ತಾ ಬಂದರೆ ಪಶ್ಚಿಮ ಕಣಿವೆ ಸಿಗುತ್ತದೆ. ಈ ಕಣಿವೆಯಲ್ಲಿ ಉತ್ತರ ದಿಕ್ಕಿಗೆ ನಡೆದರೆ 'ಯಾದವತೀರ್ಥ' ಎಂಬ ಕೊಳವು ಹಾಗೂ ಪಕ್ಕದಲ್ಲಿ 'ಯಾದವಿನದಿ' ಎಂಬ ತೊರೆಯು ಸಿಗುತ್ತದೆ. ಈ ಕೊಳವು ಅಷ್ಟತೀರ್ಥಗಳಲ್ಲಿ ಒಂದಾಗಿದೆ. ಇದನ್ನು ಬಿಟ್ಟು ಉತ್ತರಕ್ಕೆ ಸ್ವಲ್ಪ ದೂರದಲ್ಲಿ 'ದರ್ಭತೀರ್ಥ' ಎಂಬ ಮತ್ತೊಂದು ಅಷ್ಟತೀರ್ಥವು ಸಿಗುತ್ತದೆ. ಇದಕ್ಕೆ ಸ್ವಲ್ಪ ದೂರದಲ್ಲಿ ಉತ್ತರಕ್ಕೆ 'ಪಲಾಶತೀರ್ಥ'ವೆಂಬ ಮತ್ತೊಂದು ಅಷ್ಟತೀರ್ಥ ಸಿಗುತ್ತದೆ. ಹಾಗೆಯೇ ಈ ತೀರ್ಥವನ್ನು ಬಿಟ್ಟು ಮತ್ತೆ ಸ್ವಲ್ಪ ದೂರ ಉತ್ತರಕ್ಕೆ ಸಾಗಿದರೆ 'ಪದ್ಮತೀರ್ಥ'ವೆಂಬ ಮತ್ತೊಂದು ಅಷ್ಟತೀರ್ಥ ಸಿಗುತ್ತದೆ. ಇದಾದನಂತರ ಇದರ ಉತ್ತರಕ್ಕೆ 'ದಳವಾಯಿಕೆರೆ' ಎಂಬ ಕೆರೆಯು ಸಿಗುತ್ತದೆ.

ಮೇಲುಕೋಟೆಯ ಬೆಟ್ಟದ ಸುತ್ತಲೂ ಕದಲಗೆರೆ, ಕಾಡೇನಹಳ್ಳಿ, ಹೊಸಳ್ಳಿ, ಹುಳಿಗೆರೆ, ಬಳಿಘಟ್ಟ ಮೊದಲಾದ ಗ್ರಾಮಗಳು ಸಿಗುತ್ತವೆ. ಇಲ್ಲೆಲ್ಲ ಹಲವು ಜಲಸಂಗ್ರಹಗಳ ತಾಣಗಳನ್ನು ಕಾಣಬಹುದಾಗಿದ್ದು, ಇವುಗಳು ಅಧ್ಯಯನ ವ್ಯಾಪ್ತಿಗೆ ಸೇರುತ್ತವೆ.

1.3 ಐತಿಹಾಸಿಕ ಹಿನ್ನೆಲೆ:

ಇಂದು ಹೋಬಳಿ ಕೇಂದ್ರ ಮತ್ತು ಚುನಾವಣಾ ಕ್ಷೇತ್ರವಾಗಿರುವ ಮೇಲುಕೋಟೆಯು, ಹಿಂದಿನಿಂದ ತನ್ನನ್ನು ಹಲವಾರು ನಾಮಗಳಿಂದ ಗುರುತಿಸಿಕೊಂಡಿದೆ. ಹೊಯ್ಸಳ ಶಾಸನಗಳಲ್ಲಿ ಈ ಗ್ರಾಮವು 'ಯಾದವಗಿರಿ', 'ತಿರುನಾರಾಯಣಪುರ', 'ಮೇಲುಕೋಟೆ' ಎಂದು ಉಲ್ಲೇಖಿತಗೊಂಡಿದ್ದು, 'ವೈಕುಂಠವರ್ಧನಕ್ಷೇತ್ರ' ಎಂಬ ವಿಶೇಷಣವನ್ನು ಹೊಂದಿತ್ತು. ವಿಜಯನಗರ ಕಾಲದ ಶಾಸನಗಳಲ್ಲಿ 'ಘಟಿಕಾಸ್ಥಾನ ಮೇಲುಕೋಟೆ' (ದೇವಲಾಪುರ ಕ್ರಿ.ಶ.1472) ಅನಾದಿಮಹಾಸ್ವಾಮಿ ಸ್ಥಾನ, ವೈಕುಂಠ ವರ್ಧನಕ್ಷೇತ್ರ, ಭೂಲೋಕವೈಕುಂಠ, ಜ್ಞಾನಮಂಟಪ, ದಕ್ಷಿಣಬದರಿಕಾಶ್ರಮ ಎಂಬ ವಿಶೇಷಣಗಳನ್ನು ಹೊಂದಿದ್ದು, ಮೈಸೂರು ಅರಸರ ಕಾಲದಲ್ಲೂ ಅದೇ ಹೆಸರು ಮುಂದುವರಿಯಿತು.[6]

'ದಕ್ಷಿಣಬದರಿಕಾಶ್ರಮ'ವೆಂದು ಪ್ರಸಿದ್ಧಿ ಪಡೆದ ಮೇಲುಕೋಟೆಯು ನಾರಾಯಣನಿಗೆ ವೈಕುಂಠಕ್ಕಿಂತಲೂ ಅತ್ಯಂತ ಪ್ರಿಯವಾದ ಸ್ಥಳವಾಗಿದ್ದು, 'ವೈಕುಂಠವರ್ಧನಕ್ಷೇತ್ರ' ಎಂಬ ಹೆಸರನ್ನು ಪಡೆದುಕೊಂಡಿದೆ. ಹಿಂದೆ ಬ್ರಹ್ಮನು ಈ ಗಿರಿಯಲ್ಲಿಯೆ ತಪಸ್ಸು ಮಾಡಿ ನಾರಾಯಣನನ್ನು ಮೆಚ್ಚಿಸಿ ವರ ಪಡೆದನು ಎಂಬ ಪ್ರತೀತಿ ಇದೆ! ಕೃತಯುಗದಲ್ಲಿ ಆದಿಶೇಷನು ತಪಸ್ಸನ್ನಾಚರಿಸಿ ಸಿದ್ಧಿಯನ್ನು ಪಡೆದನೆಂದು, ಪೂರ್ವದಲ್ಲಿ ದತ್ತಾತ್ರೇಯರು ಈ ಪರ್ವತದಲ್ಲಿ ವೇದಗಳನ್ನು ಪ್ರವಚನ ಮಾಡಿದರೆಂದು, ಇದರಿಂದ ಇದಕ್ಕೆ 'ವೇದಪರ್ವತ' ಎಂತಲೂ, ನಾರಾಯಣನು ಇಲ್ಲಿ ನೆಲೆಸಿದ ಮೇಲೆ 'ನಾರಾಯಣಾದ್ರಿ' ಎಂತಲೂ ಹೆಸರುಗಳು ಬಂದಿವೆ. ತ್ರೇತಾಯುಗದಲ್ಲಿ ಶ್ರೀರಾಮ-ಲಕ್ಷ್ಮಣರು ಬಂದು ಅಲ್ಲಿಯ ನಾರಾಯಣನನ್ನು ಪೂಜಿಸಿದರು. ಅಲ್ಲದೆ ದ್ವಾಪರ ಯುಗದಲ್ಲಿ ಬಲರಾಮ ಕೃಷ್ಣರು ಬಂದು ಪೂಜಿಸಿದುದರಿಂದ ಆ ಗಿರಿಗೆ 'ಯಾದವಗಿರಿ'

ಎಂಬ ಹೆಸರು ಬಂದಿದೆ. ತಿರುನಾರಾಯಣನಿರುವ ಪುರವಾದ್ದರಿಂದ 'ತಿರುನಾರಾಯಣ ಪುರ' ಎಂದೂ, ಬೆಟ್ಟದ ಮೇಲೆ ಕೋಟೆ ಇರುವುದರಿಂದ 'ಮೇಲುಕೋಟೆ' ಎಂದು ಕರೆಯಲ್ಪಟ್ಟಿದೆ. ಕಲಿಯುಗದಲ್ಲಿ ಯತಿಗಳಾದ ರಾಮಾನುಜರು ಬಂದು ಈ ಸ್ಥಳವನ್ನು ಜೀರ್ಣೋದ್ಧಾರ ಮಾಡಿದುದರಿಂದ 'ಯತಿಶೈಲ'ವೆಂದೂ ಹೆಸರಿರುವುದಾಗಿ ತಿಳಿದು ಬರುತ್ತದೆ.[7]

ಗ್ರಾಮಕ್ಕೆ 'ಮೇಲುಕೋಟೆ' ಎಂಬ ಹೆಸರು ಬರಲು ಕಾರಣವಾಗಿರುವ ಇಲ್ಲಿಯ ಕೋಟೆಯು ಗಿರಿದುರ್ಗವಾಗಿದ್ದು, ಸುಮಾರು 15 ಕಿ.ಮೀ. ಪ್ರದೇಶವನ್ನು ಆವರಿಸಿದೆ, ರಕ್ಷಣಾ ಆಯಕಟ್ಟಿನಿಂದಾಗಿ ಇದು ಹೊಯ್ಸಳರ ಕಾಲದಲ್ಲಿ ಸೈನಿಕ ತುಕಡಿಯನ್ನಿರಿಸಿದ ದಂಡು ಸ್ಥಳವಾಗಿದ್ದಂತೆ ತೋರುತ್ತದೆ.[8]

ಮೇಲುಕೋಟೆಯ ಬಂಡೆಯೊಂದರ ಮೇಲೆ ಇತ್ತೀಚೆಗೆ ಪತ್ತೆಯಾಗಿರುವ ರೇಖಾಚಿತ್ರ ಹಾಗೂ ಬೆಟ್ಟ ಸಾಲಲ್ಲಿರುವ ಪಾಂಡವರಗವಿ ಮುಂತಾದವನ್ನು ಆಧರಿಸಿ, ಹಿಂದೆ ಇದು ಬೃಹತ್ ಶಿಲಾಯುಗದ ಮಾನವ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿತ್ತೆಂಬ ಅಭಿಪ್ರಾಯವಿದೆ.[9] ಅಲ್ಲದೆ ಸುಮಾರು ಕ್ರಿ.ಶ. 930ರಲ್ಲಿ ಜೀವಿಸಿದ್ದ ನಾಥಮುನಿಯನ್ನು ತಿರುನಾರಾಯಣಪುರದ ಶ್ರೀವೈಷ್ಣವರು ತಮಿಳುನಾಡಿನ ವೀರನಾರಾಯಣಪುರದಲ್ಲಿ ಸಂದಿಸಿದ್ದರೆಂಬ ಹೇಳಿಕೆಯು, ಮೇಲುಕೋಟೆಯ ಪ್ರಾಚೀನತೆಯನ್ನು ಅಷ್ಟು ಹಿಂದಕ್ಕೆ ಕೊಂಡೊಯ್ಯುತ್ತದೆಂಬ ಅಭಿಪ್ರಾಯವಿದೆ.[10] ಮೇಲುಕೋಟೆಯ ಅಧಿಕೃತ ಇತಿಹಾಸ ಆಚಾರ್ಯರಾಮಾನುಜರ ಆಗಮನದೊಂದಿಗೆ ಆರಂಭವಾಗುತ್ತಾದರೂ, ಪೂರ್ಣಯ್ಯನ ಹೊಂಡದ ಸಮೀಪವಿರುವ ಗಂಗರ ಕಾಲದ ಸಿಂಹಸ್ತಂಭಗಳು ಮತ್ತು ನರಸಿಂಹನ ಬೆಟ್ಟದ ವಾಯುವ್ಯ ತಪ್ಪಲಿನಲ್ಲಿರುವ ಎರಡಂತಸ್ತಿನ ಗುಹಾಂತರ ದೇವಾಲಯ ರಚನಾ ಪ್ರಯತ್ನವನ್ನು ಆಧರಿಸಿ ಗಂಗರ ಕಾಲದಲ್ಲೂ ಇಲ್ಲಿ ವಾಸ್ತುಶಿಲ್ಪ ಚಟುವಟಿಕೆ ನಡೆದಿತ್ತೆಂಬ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ.[11]

ಮೇಲುಕೋಟೆಯ ಇತಿಹಾಸವು ರಾಮಾನುಜಾಚಾರ್ಯರಿಂದ ಹೆಚ್ಚು ಪ್ರಸಿದ್ಧತೆಯನ್ನು ಪಡೆಯಿತು. ಈ ಮೊದಲು ಇಲ್ಲಿ ಜನರು ವಾಸವಾಗಿದ್ದ ವಿಚಾರದ ಬಗ್ಗೆ ಸ್ಪಷ್ಟವಾದ ಮಾಹಿತಿ ತಿಳಿಯುವುದಿಲ್ಲ. ಅಂದರೆ ಕ್ರಿ.ಶ. ಹನ್ನೊಂದನೆಯ ಶತಮಾನಕ್ಕೂ ಪೂರ್ವ ಇತಿಹಾಸ ಸ್ಪಷ್ಟವಾಗಿ ಗೋಚರವಾಗುವುದಿಲ್ಲ. ರಾಮಾನುಜಾಚಾರ್ಯರು ಅರಣ್ಯ ಪ್ರದೇಶವಾಗಿದ್ದ ಇಲ್ಲಿ, ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ ಮೇಲೆ ಮರಗಳನ್ನು ಕಡಿದು ನೆಲಸಮ ಮಾಡಿ, ಬೀದಿವಾಡ ಮಾಡಿ ಊರುಕಟ್ಟಿದರು ಎಂಬುದನ್ನು 'ಶ್ರೀ ಯಾದವಗಿರಿ ಜೀರ್ಣೋದ್ಧಾರ' ಎಂಬ ಗ್ರಂಥದಲ್ಲಿ ಉಲ್ಲೇಖವಾಗಿದೆ.[12]

ಹೊಯ್ಸಳರ ನಂತರ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ವಿಜಯನಗರದ ಅರಸರು ಸಹ ಮೇಲುಕೋಟೆಯನ್ನು ಜೀರ್ಣೋದ್ಧಾರ ಮಾಡಿದ ಬಗ್ಗೆ ಮೇಲುಕೋಟೆಯ ಶಾಸನಗಳಿಂದ ತಿಳಿಯಬಹುದಾಗಿದೆ. ಹದಿನಾಲ್ಕನೆಯ ಶತಮಾನದಲ್ಲಿ ಮುಸಲ್ಮಾನರು ಈಗಿನ ಹಳೇಬೀಡನ್ನು ಜಯಿಸಲು ಬಂದಾಗ ಅಲ್ಲಿನ ಹೊಯ್ಸಳ ರಾಜ ತೊಂಡನೂರಿಗೆ ಓಡಿ ಬಂದನು. ಆತನನ್ನು ಬೆನ್ನಟ್ಟಿ ಬಂದ ಮುಸಲ್ಮಾನರು ಮೇಲುಕೋಟೆಯನ್ನು ದೋಚಿದರು, ಗುಡಿಗೆ ಹಾನಿಯುಂಟಾಯಿತು. ಇದರಿಂದಾಗಿ ಸಂಪೂರ್ಣವಾಗಿ ಪಾಳಾಗಿದ್ದ ಮೇಲುಕೋಟೆಯನ್ನು ಪ್ರೌಢರಾಯನ ಮಂತ್ರಿಯೂ, ನಾಗಮಂಗಲದ ಒಡೆಯನೂ ಆದ, ತಿಮ್ಮಣ್ಣ ನಾಯಕನು ಅಭಿಮಾನದಿಂದ ಊರು ಮತ್ತು ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದನು. ಇದರಿಂದಾಗಿ ವಿಜಯನಗರದ ಅರಸರ ಕಾಲದಲ್ಲಿ ತಿರುನಾರಾಯಣಪುರವು ಪುನಃ ಚೇತರಿಸಿಕೊಂಡು ಸಾಂಸ್ಕೃತಿಕ ನೆಲೆಯಾಗಿಯೂ ಮಹತ್ವ ಪಡೆಯಿತು.[13]

ವಿಷ್ಣುವರ್ಧನ ಮತ್ತು ವಿಜಯನಗರ ಸಾಮಂತರಂತೆಯೇ, ಮೈಸೂರು ಒಡೆಯರೂ ಸಹ ಮೇಲುಕೋಟೆಯನ್ನು ತುಂಬ ಮಮತೆಯಿಂದ ಕಂಡರು. ರಾಜ ಒಡೆಯರ್‌ರವರು ತಮಗೆ ವಿಜಯನಗರದ ಅರಸರಿಂದ ಉಂಬಳಿಯಾಗಿ ಬಂದ ಮುತ್ತಿಗೆರೆಗ್ರಾಮ ಮತ್ತು ಅದರ ಐವತ್ತು ಉಪಗ್ರಾಮಗಳನ್ನು ಇಲ್ಲಿನ ದೇವಸ್ಥಾನಕ್ಕೂ, ಬ್ರಾಹ್ಮಣರಿಗೂ ಕೊಟ್ಟರು ಹಾಗೂ ಬ್ರಾಹ್ಮಣರಿಗೆ ಗೃಹದಾನ ಮಾಡಿದರು. ವೈರಮುಡಿ

ಕಿರೀಟದಂತೆಯೇ, ಇನ್ನೊಂದು ಕಿರೀಟವನ್ನು ಚಲುವರಾಯಸ್ವಾಮಿಗೆ ಮಾಡಿಸಿಕೊಟ್ಟು, ಅನೇಕ ರತ್ನಾಭರಣಗಳನ್ನು ಸಮರ್ಪಿಸಿ, ಗುಡಿಯ ಮುಂದೆ ದೊಡ್ಡ ಮಂಟಪವನ್ನು ಕಟ್ಟಿಸಿದರು.[14]

ಕ್ರಿ.ಶ. 1575ರಿಂದ ಕ್ರಿ.ಶ. 1612ರ ವರೆಗಿನ ಕಾಲಘಟ್ಟದಲ್ಲಿ ಶ್ರೀಯತಿರಾಜ ಮಠಾಧಿಪತಿಗಳಿಗೆ ವಿಘಾತ ಉಂಟಾದುದೂ ಮತ್ತು ರಾಜ್ಯಾಂಗದಲ್ಲಿ ಶ್ರೀರಂಗರಾಜರ ಪ್ರಾಬಲ್ಯವು ಕಡಿಮೆಯಾದುದೇ ಮೊದಲಾದ ಕಾರಣದಿಂದ, ದೇವಸ್ಥಾನದ ಅಧಿಕಾರವರ್ಗ ಕೈಂಕರ್ಯಪರರಲ್ಲಿ ಅಸೂಯೇ ಸ್ವಲಾಭಾಪೇಕ್ಷೆಗಳಿಂದ ನಿರಂಕುಶಾಧಿಕಾರದರ್ಪವು ಉಂಟಾಗಿ, ಸುಮಾರು 35 ವರ್ಷಗಳ ಕಾಲ ನಡೆದು ಬಂದ ಮೇಲೆ ಆಗ ರಾಜ್ಯಭಾರವನ್ನು ನಡೆಸುತ್ತಿದ್ದ ರಾಜಒಡೆಯರಿಗೆ ವಿಷಯಗಳು ತಿಳಿಸಲ್ಪಟ್ಟು, ಸುಮಾರು ಕ್ರಿ.ಶ. 1612ರಲ್ಲಿ ದೇವಸ್ಥಾನದ ಸರ್ವಾಧಿಕಾರವನ್ನು ಅರಮನೆಯವರೇ ವಿಚಾರಣೆ ಮಾಡಿ, ದೇವತಾ ಸೇವೆಯನ್ನು ಚೆನ್ನಾಗಿ ನಡೆಸುವಂತೆ ಏರ್ಪಾಡಾಯಿತು. ದೇವಸ್ಥಾನದ ಸಕಲ ಅಧಿಕಾರವು ಅರಮನೆಗೆ ಸೇರಿದುದರಿಂದ, ಇನ್ನು ದೇವಸ್ಥಾನದ ಸ್ವತ್ತುಗಳಿಗೆ ಲೋಪವಿಲ್ಲವೆಂದು ತಿಳಿದು, ರಾಜಒಡೆಯರವರು ಅಮೂಲ್ಯ ರತ್ನಗಳಿಂದ ಚಲುವರಾಯಸ್ವಾಮಿಗೆ ತಮ್ಮ ಹೆಸರಿನಲ್ಲಿ 'ರಾಜಮುಡಿ' ಎಂಬ ಕಿರೀಟವನ್ನು, ಹಾಗೂ ಅನೇಕ ಆಭರಣಗಳನ್ನು ಮಾಡಿಸಿ, ವೈರಮುಡಿ ಉತ್ಸವವಾದ ಮೇಲೆ ವೈರಮುಡಿ ಸಹಿತವಾಗಿ ಆಭರಣಗಳೆಲ್ಲವೂ ಶ್ರೀರಂಗಪಟ್ಟಣದ ಭಂಡಾರಕ್ಕೆ ತೆಗೆದುಕೊಂಡು ಬರುವಂತೆ ಏರ್ಪಾಟುಮಾಡಿದರು. ತದಾರಭ್ಯ ಮೈಸೂರು ಮಹಾರಾಜರ ಶ್ರೀರಂಗಪಟ್ಟಣದ ಅರಮನೆಯಲ್ಲಿ ವೈರಮುಡಿಯು ಸೇರಿತು.[15] ಪ್ರಸ್ತುತ ಮಂಡ್ಯದ ಸರ್ಕಾರಿ ಖಜಾನೆಯಲ್ಲಿ ಇರಿಸಲಾಗಿದೆ.

ರಾಜಒಡೆಯರ್‌ರವರ ಕಾಲದಲ್ಲಿ ಅಷ್ಟತೀರ್ಥೋತ್ಸವವನ್ನು ಪ್ರಾರಂಭಿಸಿದರು. ನಂತರ ಹತ್ತನೆಯ ಚಾಮರಾಜಒಡೆಯರ್ ಕಲ್ಯಾಣಿಕೊಳಕ್ಕೆ ಸೋಪಾನವನ್ನು ಕಟ್ಟಿಸಿದರು. ಚಿಕ್ಕದೇವರಾಜ ಒಡೆಯರ್‌ರವರು ಪ್ರತಿಯೊಂದು ಅಷ್ಟತೀರ್ಥಕ್ಕೂ ಮಂಟಪವನ್ನು ಕಟ್ಟಿಸಿದರು. ಹಾಗೆಯೇ ಕಲ್ಯಾಣಿಯ ಉತ್ತರಕ್ಕೆ ಗಜೇಂದ್ರಮೋಕ್ಷ ಮಂಟಪವನ್ನು

ನಿರ್ಮಿಸಿದರು. ಕಂಠೀರವಒಡೆಯರ್‌ರವರು ಕಲ್ಯಾಣಿಯ ದಕ್ಷಿಣಭಾಗದಲ್ಲಿ ಬಿಂದುಮಾಧವ ದೇವಸ್ಥಾನವನ್ನು ನಿರ್ಮಿಸಿದರು.[16]

ಕ್ರಿ.ಶ. 1771ರಲ್ಲಿ ಮತ್ತೊಮ್ಮೆ ಮೇಲುಕೋಟೆಯು ದಾಳಿಗೆ ಒಳಗಾಯಿತು. ಮರಾಠಿ ಸೈನ್ಯವು ಚಿನಕುರಳಿಯನ್ನು ಜಯಿಸಿ, ಯದುಶೈಲದ ದಕ್ಷಿಣ ಪಾರ್ಶ್ವದಲ್ಲಿ ಬೀಡುಬಿಟ್ಟಿರುವಾಗ, ಊರು ಕಣ್ಣಿಗೆ ಬಿದ್ದು ಲೋಭವನ್ನು ಹುಟ್ಟಿಸಿತು. ಅಲ್ಲಿನ ಬ್ರಾಹ್ಮಣರೆಲ್ಲರೂ ಅಂಜಿ ಊರನ್ನು ಬಿಟ್ಟು ಹೋದರು. ಮರಾಠರು ಸಿಕ್ಕಿದ್ದನ್ನೆಲ್ಲ ಕೊಳ್ಳೆ ಹೊಡೆದರಲ್ಲದೆ, ಅಲ್ಲಿನ ತೇರುಗಳಿಗೆ ಬೆಂಕಿ ಇಟ್ಟು, ಅವುಗಳ ಕಬ್ಬಿಣವನ್ನು ತೆಗೆದುಕೊಂಡು ಹೋದರು.[17] ಅನಂತರ ಟಿಪ್ಪುಸುಲ್ತಾನನು ಕ್ರಿ.ಶ. 1785ರಲ್ಲಿ ಮೇಲುಕೋಟೆಯ ದೇವಾಲಯಗಳಿಗೆ ಕೆಲವು ಆಭರಣಗಳನ್ನು, ನಗಾರಿಯನ್ನು, ಆನೆಗಳನ್ನು ಕೊಟ್ಟು ಉದಾರವಾಗಿ ನಡೆದುಕೊಂಡನು, ಇದರಿಂದಾಗಿ ಊರು ತನ್ನ ವೈಭವವನ್ನು ಮತ್ತೆ ಪಡೆಯಿತು.[18]

ಮುಮ್ಮಡಿ ಕೃಷ್ಣರಾಜಒಡೆಯರ್‌ರವರು (ಕ್ರಿ.ಶ. 1810–1868) ಗುಡಿಯ ಜೀರ್ಣೋದ್ಧಾರವನ್ನು ಮಾಡಿಸಿ, 'ಕೃಷ್ಣರಾಜಮುಡಿ' ಎಂಬ ನವರತ್ನ ಖಚಿತ ಕಿರೀಟವನ್ನು, ಪದಕವನ್ನು, ಅನೇಕ ದಿವ್ಯಾಭರಣಗಳನ್ನು ಸ್ವಾಮಿಗೆ ಸಮರ್ಪಿಸಿ, ದ್ವಿತೀಯ ಬ್ರಹ್ಮೋತ್ಸವವನ್ನು ಏರ್ಪಡಿಸಿದರು. ಅಲ್ಲದೆ ಮುಮ್ಮಡಿ ಕೃಷ್ಣರಾಜಒಡೆಯರ್‌ರವರು ಕಲ್ಯಾಣಿಯ ಉತ್ತರಕ್ಕೆ ಅಷ್ಟಭುಜಾಕೃತಿಯ ಹದಿನಾರು ಕಂಬಗಳುಳ್ಳ ಭುವನೇಶ್ವರಿ ಮಂಟಪ ಮತ್ತು ಧಾರಾಮಂಟಪವನ್ನು ನಿರ್ಮಿಸಿದ್ದಾರೆ. ಹಾಗೆಯೇ ಕೃಷ್ಣರಾಜಒಡೆಯರ್ ಕಾಲದಲ್ಲಿ ಸರ್ವಾಧಿಕಾರಿ ಪ್ರಧಾನದಂಡನಾಯಕರಾಗಿದ್ದ ದಳವಾಯಿ ನಂಜರಾಜಯ್ಯನು ಮೇಲುಕೋಟೆಯ ಪಶ್ಚಿಮ ದಿಕ್ಕಿಗೆ ದೊಡ್ಡದಾದ ಕೆರೆಯನ್ನು ನಿರ್ಮಿಸಿದನು.[19]

ಒಂದು ಅರಣ್ಯ ಪ್ರದೇಶವಾಗಿದ್ದ ಮೇಲುಕೋಟೆಗೆ ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ರಾಮಾನುಜಾಚಾರ್ಯರು ಬಂದು, ಹೊಯ್ಸಳ ರಾಜನ ಸಹಾಯದೊಂದಿಗೆ

ನಾರಾಯಣಸ್ವಾಮಿಯವರನ್ನು ಪುನಃ ಪ್ರತಿಷ್ಠಾಪನೆ ಮಾಡಿ, ಊರನ್ನು ಕಟ್ಟಿ ಬೆಳೆಸಿದರು. ಇಲ್ಲಿಂದ ಮುಂದೆ ಬಂದ ವಿಜಯನಗರ ಮತ್ತು ಮೈಸೂರು ಅರಸು ಮನೆತನದವರು ಹೊಯ್ಸಳರಂತೆಯೇ ಮೇಲುಕೋಟೆಯನ್ನು ಅಭಿವೃದ್ಧಿಪಡಿಸಿ ಇತಿಹಾಸದ ಪುಟಗಳಲ್ಲಿ ಚಿರಸ್ಮರಣೀಯವಾಗುವಂತೆ ಮಾಡಿದರು.

1.4 ಅಧ್ಯಯನದ ಮಹತ್ವ:

ಮೇಲುಕೋಟೆಯ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯಲ್ಲಿ ಜಲಸಂಗ್ರಹಗಳು ನಿರ್ವಹಿಸುತ್ತಿರುವ ಪಾತ್ರ ಅತ್ಯಂತ ಮಹತ್ವಪೂರ್ಣವಾದದು. ಹೀಗಾಗಿ ಅವುಗಳ ನಿರ್ಮಾಣ, ನಿರ್ವಹಣೆ ಹಿಂದಿರಬಹುದಾದ ಆಶಯಗಳು ಪ್ರಸ್ತುತ ಅಧ್ಯಯನದಲ್ಲಿ ಮಹತ್ವ ಪಡೆಯುತ್ತವೆ. ಪಾರಂಪರಿಕವಾಗಿ ಕೆರೆ, ಕಟ್ಟೆ, ಬಾವಿ, ಕೊಳಗಳ ನಿರ್ಮಾಣ, ನಿರ್ವಹಣೆ, ದುರಸ್ತಿ ಮುಂತಾದ ಕಾಮಗಾರಿಗಳನ್ನು ಧಾರ್ಮಿಕ ಮಹೋನ್ನತಿಯ ಹಿನ್ನೆಲೆಯಲ್ಲಿ ಕೈಗೊಳ್ಳಲಾಗುತ್ತಿತ್ತು. ಇಂತಹ ಕಾರ್ಯಗಳನ್ನು ಕೈಗೊಂಡವರಿಗೆ ಪುಣ್ಯಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯೇ ಪ್ರಧಾನ ಆಶಯವಾಗಿದ್ದಿತು. ಈ ಹಿನ್ನೆಲೆಯಲ್ಲಿ ಒಂದು ಧಾರ್ಮಿಕ ನೆಲೆಯಾದ ಮೇಲುಕೋಟೆಯಲ್ಲಿ ವಿವಿಧ ಬಗೆಯ, ವೈವಿಧ್ಯಮಯವಾದ ಜಲಸಂಗ್ರಹಗಳು ಅಪಾರ ಪ್ರಮಾಣದಲ್ಲಿ ನಿರ್ಮಾಣಗೊಂಡಿರುವುದು ಮಹತ್ವ ಪಡೆಯುತ್ತವೆ.

ಮೇಲುಕೋಟೆ ಪರಿಸರದ ಬಹುತೇಕ ಜಲಸಂಗ್ರಹಗಳು ವಿವಿಧ ಕಾಲಘಟ್ಟಗಳಿಗೆ ಹರಡಿಕೊಂಡಿದ್ದರೂ ಸಹ ಹೊಯ್ಸಳ–ವಿಜಯನಗರ–ಒಡೆಯರ ಕಾಲದಲ್ಲಿ, ರಾಜ್ಯ ಪ್ರಾಯೋಜಿತ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಪೂರಕವಾಗಿ ಪರಿಣಮಿಸಿವೆ. ಪ್ರಸ್ತುತ ಅಧ್ಯಯನ ಪ್ರಾಯೋಜಕತ್ವದ ಆಶಯಗಳನ್ನು ಗುರುತಿಸುವ, ವಿಶ್ಲೇಷಿಸುವ ಹಿನ್ನೆಲೆಯಲ್ಲಿ ಮಹತ್ವ ಪಡೆಯುತ್ತವೆ. ಅಲ್ಲದೆ ಇಲ್ಲಿನ ಬಹುತೇಕ ಜಲಸಂಗ್ರಹಗಳು ಕೃಷಿ ಚಟುವಟಿಕೆ, ಉತ್ಪಾದನೆ, ಆರ್ಥಿಕಾಭಿವೃದ್ಧಿಗಾಗಿಯೂ

ಬಳಕೆಯಾಗುತ್ತಾ ಬಂದಿದ್ದು, ಆ ಭಾಗದ ಜನಜೀವನ, ಸಂಸ್ಕೃತಿಯ ಅವಲೋಕನ ಸಹ ಮಹತ್ವ ಪಡೆಯುತ್ತದೆ.

ಅಧ್ಯಯನದಲ್ಲಿ ಅನೇಕ ಐತಿಹ್ಯ, ಜಾನಪದ, ಮೌಖಿಕ ಪರಿಕಲ್ಪನೆಗಳು ಹುಟ್ಟಿಕೊಂಡಿರುವ ಹಿನ್ನೆಲೆಯಲ್ಲಿ ಚಾರಿತ್ರಿಕ ವಿಶ್ಲೇಷಣೆಗೆ ಸ್ಪಷ್ಟತೆ ಹಾಗೂ ಹೊಸ ಆಯಾಮಗಳನ್ನು ಹೊಂದಲು ಸಾಧ್ಯವಾಗುವ ಹಿನ್ನೆಲೆಯಲ್ಲಿ ಮಹತ್ವ ಹೊಂದಿದೆ.

1.5 ಅಧ್ಯಯನದ ಉದ್ದೇಶಗಳು:

ಪ್ರಸ್ತುತ ಉದ್ದೇಶಿತ ಸಂಶೋಧನೆಯ ಅಡಿಯಲ್ಲಿ ಪ್ರಮುಖ ಧಾರ್ಮಿಕ ಕ್ಷೇತ್ರವು, ಯಾತ್ರಾಸ್ಥಳವು ಆದ ಮೇಲುಕೋಟೆಯು ಹೆಚ್ಚು ಪ್ರವಾಸಿಗರಿಂದ ಕೂಡಿದ್ದು, ಇದೊಂದು ಬೆಟ್ಟಪ್ರದೇಶವಾಗಿರುವುದರಿಂದ, ಪಾರಂಪರಿಕವಾಗಿ ಈ ನೆಲೆಯ ಜಲಸಂಗ್ರಹಗಳು ಹೇಗೆ ರೂಪ ಪಡೆದವು, ನಿರ್ವಹಿಸಲ್ಪಟ್ಟವು ಮತ್ತು ಪ್ರಸ್ತುತ ಅವುಗಳ ಅಗತ್ಯ–ಅನಿವಾರ್ಯತೆಗಳ ಮಹತ್ವ ಅರಿಯುವುದಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಮೇಲುಕೋಟೆ ಪರಿಸರದಲ್ಲಿನ ಜಲಸಂಗ್ರಹಗಳನ್ನು ಪತ್ತೆ ಹಚ್ಚುವುದು, ಅವುಗಳ ನಿರ್ಮಾತೃರು, ಆಶಯ, ಕಾರ್ಯವಿಧಾನ ಅರಿಯುವ ಉದ್ದೇಶವನ್ನು ಒಳಗೊಂಡಿದೆ. ಇಲ್ಲಿನ ಜಲಸಂಗ್ರಹಗಳ ನಿರ್ಮಾಣ (ರಚನೆ), ನಿರ್ವಹಣೆ, ಕೃಷಿಗೆ ಹೇಗೆ ಪೂರಕವಾಗಿದ್ದವು, ಜಲಸಂಗ್ರಹಗಳ ಸ್ಥಿತಿಗತಿ, ಸಮುದಾಯಗಳ ಆಶಕ್ತಿ, ನಿರ್ಲಕ್ಷ್ಯಕ್ಕೆ ಒಳಪಟ್ಟಿದೆಯೇ? ಶಿಥಿಲವಾಗಿದ್ದರೆ ಶಿಥಿಲತೆಗೆ ಕಾರಣ? ಇವುಗಳನ್ನು ಕುರಿತು ಚರ್ಚಿಸುವುದಾಗಿದೆ.

ಮೇಲುಕೋಟೆ ಪರಿಸರದಲ್ಲಿನ ಜಲಸಂಗ್ರಹಗಳು, ಜಲಸಂಪನ್ಮೂಲ ಕ್ರೋಢೀಕರಣಕ್ಕೆ ಇತರ ಬೆಟ್ಟಪ್ರದೇಶಗಳಿಗೆ ಮಾದರಿಯಾಗಬಲ್ಲದೇ? ಮೇಲುಕೋಟೆ

ಪರಿಸರದಲ್ಲಿನ ಜಲಸಂಗ್ರಹಗಳ ನೈಜ ಚಿತ್ರಣವನ್ನು ಬಿಂಬಿಸುವುದು ಈ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

1.6 ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಅಧ್ಯಯನದ ವ್ಯಾಪ್ತಿ ಮೇಲುಕೋಟೆ ಮತ್ತು ಅದರ ಪರಿಸರದ ಜಲಸಂಗ್ರಹಗಳಿಗೆ ಸೀಮಿತವಾಗಿದೆ. ಭೌಗೋಳಿಕ ಚೌಕಟ್ಟಿನ ಹಿನ್ನೆಲೆಯಲ್ಲಿ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಗುರುತಿಸಿಕೊಂಡು, ಅಲ್ಲಿ ರೂಪುಗೊಂಡು ಬಂದಿರುವ ಜಲಸಂಗ್ರಹಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮೇಲುಕೋಟೆ ಪಾಂಡವಪುರ ತಾಲ್ಲೂಕಿನ ಆಡಳಿತ ಘಟಕದ ಒಂದು ಭಾಗವಾಗಿದ್ದರೂ ಸಹ, ಇಲ್ಲಿ ಪಾಂಡವಪುರ ತಾಲ್ಲೂಕನ್ನು ವ್ಯಾಪ್ತಿಯ ಪರಿಧಿಯಲ್ಲಿ ಪರಿಗಣಿಸಿಲ್ಲ. ಮೇಲುಕೋಟೆಯನ್ನು ಕೇಂದ್ರವಾಗಿರಿಸಿಕೊಂಡು, ಅದರ ಸುತ್ತಮುತ್ತಲಿನ ಕೆರೆ, ಕಟ್ಟೆ, ಕೊಳ, ಬಾವಿ ಮುಂತಾದ ಜಲಸಂಗ್ರಹಗಳು ಮೇಲುಕೋಟೆಯಲ್ಲಿ ಸಾಂಸ್ಕೃತಿಕ ಪರಂಪರೆಯಲ್ಲಿ ಅವು ನಿರ್ವಹಿಸುತ್ತಾ ಬಂದಿರುವ ಪಾತ್ರವನ್ನ ಅಧ್ಯಯನದ ವ್ಯಾಪ್ತಿಗೆ ಗುರುತಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಕಾಲಘಟ್ಟವನ್ನು ನಿರ್ದಿಷ್ಟ ಪಡಿಸಿಕೊಳ್ಳದಿದ್ದರೂ, ಚಾರಿತ್ರಿಕ ಕಾಲಘಟ್ಟದಲ್ಲಿ ಬೆಳವಣಿಗೆಯನ್ನು ಪರಿಗಣಿಸಲಾಗಿದೆ. ಹೀಗಾಗಿ ಪ್ರಸ್ತುತ ಅಧ್ಯಯನದ ಚೌಕಟ್ಟು, ಪರಿಸರದ ಹಿನ್ನೆಲೆಯಲ್ಲಿ ಮೇಲುಕೋಟೆ ಕೇಂದ್ರವಾಗಿ, ತನ್ನ ಸುತ್ತಲಿನ ಜಲಸಂಗ್ರಹಗಳನ್ನು ಒಳಗೊಂಡಿದೆ.

1.7 ಸಂಶೋಧನಾ ವಿಧಾನ:

ಪ್ರಸ್ತುತ ಅಧ್ಯಯನದಲ್ಲಿ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಕಾರ್ಯವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಮಂಡ್ಯಜಿಲ್ಲೆಯ ಮೇಲುಕೋಟೆಯು ಪ್ರಮುಖ ಧಾರ್ಮಿಕ ಕೇಂದ್ರ ಹಾಗೂ ಬೆಟ್ಟ ಪ್ರದೇಶವೆಂದು

ಪರಿಗಣಿಸಿ, ಜಲಸಂಗ್ರಹಗಳ ನಿರ್ಮಾಣ ಮತ್ತು ನಿರ್ವಹಣೆಯ ಸೂಕ್ಷ್ಮ ಅಧ್ಯಯನಕ್ಕೆ ಪ್ರಾಮುಖ್ಯತೆ ನೀಡಲಾಗಿದೆ. ತುಂಬಿ ಹರಿಯುವ ನದಿಗಳಿಲ್ಲದ, ಭಾರಿ ನೀರಾವರಿ ಯೋಜನೆಗಳಿಗೆ ಪೂರಕ ಅವಕಾಶಗಳಿಲ್ಲದ ಕೊಳ, ಬಾವಿ, ಕೆರೆ ಮತ್ತು ಕಟ್ಟೆಗಳೇ ಅಧಿಕವಾಗಿರುವ ಮೇಲುಕೋಟೆ ಪರಿಸರದ ಒಂದು ಪ್ರದೇಶವನ್ನು ಸೂಕ್ಷ್ಮ ಅಧ್ಯಯನದ ಚೌಕಟ್ಟಿಗೆ ಒಳಪಡಿಸಲಾಗಿದೆ.

ಮೇಲುಕೋಟೆ ಒಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ನೆಲೆಯಾಗಿದ್ದು, ಪಾರಂಪರಿಕವಾಗಿ ಮುಂದುವರಿದು ಬಂದಿದೆ. ಈ ಹಿನ್ನೆಲೆಯಲ್ಲಿ ಆ ಪರಿಸರವನ್ನು ಒಂದು ಪ್ರಾದೇಶಿಕ ನೆಲೆಯಾಗಿ ಗುರುತಿಸಿಕೊಂಡು ಪ್ರಾದೇಶಿಕ ಅಧ್ಯಯನ ಚೌಕಟ್ಟಿಗೆ ಒಳಪಡಿಸಲಾಗಿದೆ.

ಈ ವಿಷಯ ಕುರಿತಾದ ಅಧ್ಯಯನಗಳು ಇಂದಿನವರೆಗೆ ಆಗಿಲ್ಲ. ಅಷ್ಟತೀರ್ಥಗಳು, ಕಲ್ಯಾಣಿ, ಅಕ್ಕ–ತಂಗಿ ಕೊಳಗಳಿಗೆ ಸಂಬಂಧ ಪಟ್ಟಂತೆ ಮಾತ್ರ ಕೆಲವು ಲೇಖನಗಳು ಬಿಡಿಯಾಗಿ ಪ್ರಕಟಿತವಾಗಿವೆ.[20] ಇಲ್ಲಿನ ಜಲಸಂಗ್ರಹಗಳು ಚಾರಿತ್ರಿಕ ವಾದವುಗಳಾಗಿದ್ದು, ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಮೇಲುಕೋಟೆಗೆ ಸಂಬಂಧಿಸಿದ ಸಂಶೋಧನಾ ಕೃತಿ, ಕಿರುಲೇಖನಗಳು, ಪತ್ರಿಕೆ, ನಿಯತಕಾಲಿಕ ಪತ್ರಿಕೆಗಳು, ಗೆಜೆಟಿಯರ್‌ಗಳು, ಮತ್ತು ಶಾಸನಗಳಿಂದಲೂ ಮಾಹಿತಿಯನ್ನು ಸಂಗ್ರಹ ಮಾಡಲಾಗಿದೆ. ಅಲ್ಲದೆ ಕ್ಷೇತ್ರಕಾರ್ಯಕ್ಕೆ ಹೋದಾಗ ಅಲ್ಲಿನ ಚಿತ್ರಣವನ್ನು ಛಾಯಾಚಿತ್ರದ ಮೂಲಕ ಸೆರೆಹಿಡಿಯಲಾಗಿದೆ. ಇಲ್ಲಿನ ಜಲಸಂಗ್ರಹಗಳ ಬಗ್ಗೆ ಮಾಹಿತಿ ತಿಳಿಯಲು ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ.

ಸಣ್ಣ ನೀರಾವರಿ ಇಲಾಖೆ, ಲೋಕೋಪಯೋಗಿ ಇಲಾಖೆ, ಕಂದಾಯ ಇಲಾಖೆ ಮತ್ತು ಗ್ರಾಮಪಂಚಾಯಿತಿಗಳ ಸಹಕಾರದೊಂದಿಗೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಆಕರಗಳ ಸಂಗ್ರಹ, ಕ್ಷೇತ್ರಕಾರ್ಯ, ಸಂದರ್ಶನ ಮಾಡುವುದರ ಮೂಲಕ, ಮೌಖಿಕ

ನೆಲೆಯಲ್ಲಿ ಚರಿತ್ರೆ ಕಟ್ಟುವ ಪ್ರಕ್ರಿಯೇ ವಿಧಾನವನ್ನು ಅನುಸರಿಸಿ ಸಂಶೋಧನಾ ಪ್ರಬಂಧವನ್ನು ಮಂಡಿಸಲಾಗಿದೆ.

1.8 ಆಧಾರಗಳು:

ಪ್ರಸ್ತುತ ಅಧ್ಯಯನಕ್ಕೆ ಐತಿಹಾಸಿಕ ಹಿನ್ನೆಲೆ ಒದಗಿಸುವುದರಲ್ಲಿ ಶಾಸನಗಳು ಪ್ರಮುಖ ಪಾತ್ರವಹಿಸಿವೆ. ಎಪಿಗ್ರಾಫಿಯ ಕರ್ನಾಟಿಕ ಸಂಪುಟ ಆರು, ಸಂಸ್ಕೃತ ಸಂಶೋಧನಾ ಸಂಸ್ಥೆಯ ಗ್ರಂಥಾಲಯ, ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ನಿರ್ದೇಶನಾಲಯ, ಗೆಜೆಟಿಯರ್‌ಗಳು, ಮೇಲುಕೋಟೆಗೆ ಸಂಬಂಧಿಸಿದ ಪ್ರಕಟಿತ ಗ್ರಂಥಗಳು, ಸಣ್ಣ ನೀರಾವರಿ ಇಲಾಖೆ, ಕಂದಾಯ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ಗ್ರಾಮ ಪಂಚಾಯ್ತಿಯ ಕಡತಗಳು ಪ್ರಧಾನವಾಗಿ ನೀಡಿದ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದು ಬಂದ ನೈಜ ವಿಚಾರಗಳು, ಸಂದರ್ಶನದಲ್ಲಿ ಮೂಡಿಬಂದ ಸ್ಥಳೀಯ ಮಾಹಿತಿಗಳು, ಕೃತಿಗಳು, ಪತ್ರಿಕೆಗಳು, ನಿಯತಕಾಲಿಕೆಗಳು, ಬಿಡಿಲೇಖನಗಳು ಹಾಗೂ ನಕ್ಷೆಗಳನ್ನು ಪೂರಕ ಮಾಹಿತಿಗಾಗಿ ಬಳಸಿಕೊಳ್ಳಲಾಗಿದೆ.

1.9 ಅಧ್ಯಾಯಗಳ ವಿಭಾಗೀಕರಣ:

ಅಧ್ಯಯನದ ಅನುಕೂಲಕ್ಕಾಗಿ ಪ್ರಸ್ತುತ ಈ ನಿಬಂಧವನ್ನು ಐದು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಮೊದಲನೆಯ ಅಧ್ಯಾಯವು ಪೀಠಿಕೆ, ಭೌಗೋಳಿಕ ಹಿನ್ನೆಲೆ, ಐತಿಹಾಸಿಕ ಹಿನ್ನೆಲೆ, ಅಧ್ಯಯನದ ಮಹತ್ವ, ಅಧ್ಯಯನದ ಉದ್ದೇಶಗಳು, ಅಧ್ಯಯನದ ವ್ಯಾಪ್ತಿ, ಸಂಶೋಧನ ವಿಧಾನ, ಆಕರಗಳನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯದಲ್ಲಿ ಧಾರ್ಮಿಕ ನೆಲೆಯಲ್ಲಿ ಮೇಲುಕೋಟೆ-ಮೇಲುಕೋಟೆಯಲ್ಲಿ ರಾಮಾನುಜಾಚಾರ್ಯ, ಚಲುವನಾರಾಯಣಸ್ವಾಮಿ ದೇವಾಲಯ, ಯೋಗಾನರಸಿಂಹಸ್ವಾಮಿ ದೇವಾಲಯ, ಧಾರ್ಮಿಕ ಆಚರಣೆಗಳ ಬಗ್ಗೆ ಪರಿಚಯ ಮಾಡಿಕೊಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮೇಲುಕೋಟೆಯ ನೀರಿನ ಆಶ್ರಯ ತಾಣಗಳು-ಕೊಳಗಳು ಹಾಗೂ ಬಾವಿಗಳ ಬಗ್ಗೆ ಸ್ಥಳೀಯರೊಡನೆ ಸಂದರ್ಶನ ನಡೆಸಿ, ದಾಖಲೆಗಳನ್ನು ಪರಿಶೀಲಿಸಿ ಅವುಗಳ ನಿರ್ಮಾತೃರು, ಆಶಯ, ರಚನೆ, ನಿರ್ವಹಣೆ ಮೊದಲಾದವುಗಳ ವಿವರಣೆ ನೀಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮೇಲುಕೋಟೆ ಪರಿಸರದ ಕೆರೆ-ಕಟ್ಟೆಗಳನ್ನು ಕುರಿತು ಸ್ಥಳೀಯರೊಡನೆ ಸಂದರ್ಶನ ಮಾಡಿ, ಶಾಸನಗಳ ಉಲ್ಲೇಖದೊಂದಿಗೆ, ಸಣ್ಣ ನೀರಾವರಿ ಇಲಾಖೆ, ಕಂದಾಯ ಇಲಾಖೆ ಇತರೆ ದಾಖಲೆಗಳ ಮಾಹಿತಿಯನ್ನು ಅನುಸರಿಸಿ ಸ್ಥೂಲವಾಗಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಉಪಸಂಹಾರ ರೂಪದಲ್ಲಿ ಪ್ರಸ್ತುತ ನಿಬಂಧದಿಂದ ಗ್ರಹಿಸಿದ ಪ್ರಮುಖ ವಿವರಗಳನ್ನು ಸಂಗ್ರಹವಾಗಿ ಕ್ರೋಢಿಕರಿಸಲಾಗಿದೆ.

ಅಡಿಟಿಪ್ಪಣಿಗಳು:

1. ಟೋಫೋಗ್ರಾಫಿ ಸೀಟ್ : 57 D/10

2. ಹೆಚ್.ಎಂ. ನಾಗರಾಜು : "ಯದುಗಿರಿಯನಾಡು" ಪು. 91

3. ಆರ್. ವಸಂತ : "ದ ನಾರಾಯಣಸ್ವಾಮಿ ಟೆಂಪಲ್ ಅಟ್ ಮೇಲುಕೋಟೆ" ಪು. 1

4. ಗ್ರಾಮ ಪಂಚಾಯ್ತಿಯ ಮಾಹಿತಿ.

5. ಹೆಚ್. ಎಮ್. ನಾಗರಾಜು : ಪೂರ್ವೋಕ್ತ, ಪು. 91

6. ಪಾರ್ಥಸಾರಥಿ (ಸಂ) : ಮಂಡ್ಯ ಗ್ಯಾಸೆಟಿಯರ್ ಪು. 957

7. ಎಂ.ಪಿ.ಮಂಜಪ್ಪಶೆಟ್ಟಿ (ಸಂ) : "ಯಾದವಗಿರಿ ಮಾಹಾತ್ಮ್ಯಂ" ಪು. 8–9

8. ಪಾರ್ಥಸಾರಥಿ (ಸಂ) : ಪೂರ್ವೋಕ್ತ, ಪು. 958

9. ಅದೇ, ಪು. 957

10. ಅಸೂರಿ ಸಂಪತ್ಕುಮಾರಾಚಾರ್ಯರು, ಅಸೂರಿ ಶ್ರೀನಿವಾಸಯ್ಯಂಗಾರ್ಯರು : "ಶ್ರೀ ಯಾದವಗಿರಿ ಜೀರ್ಣೋದ್ಧಾರ" ಪು. 4–5

11. ಪಾರರ್ಥಸಾರಥಿ (ಸಂ) : ಪೂರ್ವೋಕ್ತ, ಪು. 957

12. ಅಸೂರಿ ಸಂಪತ್ಕುಮಾರಾಚಾರ್ಯರು, ಅಸೂರಿ ಶ್ರೀನಿವಾಸಯ್ಯಂಗಾರ್ಯರು : ಪೂರ್ವೋಕ್ತ, ಪು. 9

13. ಎಂ.ಪಿ.ಮಂಜಪ್ಪಶೆಟ್ಟಿ (ಸಂ) : ಪೂರ್ವೋಕ್ತ, ಪು. 42

14. ಪು.ತಿ.ನ : "ಮೇಲುಕೋಟೆ" ಪು. 10

15. ಅಸೂರಿ ಸಂಪತ್ಕುಮಾರಾಚಾರ್ಯರು, ಅಸೂರಿ ಶ್ರೀನಿವಾಸಯ್ಯಂಗಾರ್ಯರು : ಪೂರ್ವೋಕ್ತ, ಪು. 27

16. ಪ್ರೊ. ಪ್ರಭಾಕರ ಪಿ.ಆಪ್ಟೆ ಮತ್ತು ರವೀಂದ್ರನಾಥ್ ಆರ್.ಕರಣಿಕ್ : "ಮೇಲುಕೋಟೆ ಥ್ರೂ ದ ಏಜಸ್ " ಪು. 84–85

17. ಪು.ತಿ.ನ : ಪೂರ್ವೋಕ್ತ, ಪು. 9–10

18. ಹೆಚ್.ಎಂ.ನಾಗರಾಜು : ಪೂರ್ವೋಕ್ತ, ಪು. 100

19. ಪ್ರೊ. ಪ್ರಭಾಕರ ಪಿ.ಆಪ್ಟೆ ಮತ್ತು ರವೀಂದ್ರನಾಥ್ ಆರ್.ಕರಣಿಕ್ : ಪೂರ್ವೋಕ್ತ, ಪು. 84–85

20. ಯದುಗಿರಿ ಮಾಸ ಪತ್ರಿಕೆಗಳು, ಮೇಲುಕೋಟೆ ಪರಿಚಯ, ಯಾದವಗಿರಿ ಮಾಹಾತ್ಮ್ಯಂ ಮೊದಲಾದವುಗಳು.

ಅಧ್ಯಾಯ – 2

“ಧಾರ್ಮಿಕ ನೆಲೆಯಲ್ಲಿ ಮೇಲುಕೋಟೆ”

2.1 ಮೇಲುಕೋಟೆಯಲ್ಲಿ ರಾಮಾನುಜಾಚಾರ್ಯ

2.2 ಚಲುವನಾರಾಯಣಸ್ವಾಮಿ ದೇವಾಲಯ

2.3 ಯೋಗಾನರಸಿಂಹಸ್ವಾಮಿ ದೇವಾಲಯ

2.4 ಮೇಲುಕೋಟೆಯ ಧಾರ್ಮಿಕ ಆಚರಣೆಗಳು

ಪಾರಂಪರಿಕವಾಗಿ ಧಾರ್ಮಿಕ ನೆಲೆಯಾಗಿ ಬೆಳೆದು ಬಂದಿರುವ ಮೇಲುಕೋಟೆ ಮತ್ತು ಅದರ ಸುತ್ತಲಿನ ಪರಿಸರದ ನೂರಾರು ಜಲಸಂಗ್ರಹಗಳು ಭೌಗೋಳಿಕ ಚೌಕಟ್ಟಿನಲ್ಲಿ ತನ್ನದೇ ಆದ ವೈಶಿಷ್ಟ್ಯಪೂರ್ಣ ಪಾತ್ರವಹಿಸುತ್ತಿದೆ. ಈ ಹಿನ್ನೆಲೆಯಲ್ಲಿ ಮೇಲುಕೋಟೆಯ ನೆಲೆಯಲ್ಲಿನ ಧಾರ್ಮಿಕ ಆಚರಣೆಗಳನ್ನ ಸ್ಥೂಲವಾಗಿ ವಿವರಿಸಲಾಗಿದೆ.

ಮೇಲುಕೋಟೆಯು ಶ್ರೀವೈಷ್ಣವರ ಧಾರ್ಮಿಕ ಕೇಂದ್ರವೂ, ಯಾತ್ರಾಸ್ಥಳವು ಆಗಿದ್ದು ಹೆಚ್ಚು ಪ್ರಸಿದ್ಧತೆಯನ್ನು ಪಡೆದಿದೆ. ರಾಮಾನುಜರು ಇಲ್ಲಿಗೆ ಬರುವುದಕ್ಕೆ ಪೂರ್ವದಲ್ಲಿ ಸಹ ಅದು ಪ್ರಸಿದ್ದ ವೈಷ್ಣವ ಕ್ಷೇತ್ರವಾಗಿದ್ದು, ರಾಜಕೀಯ ವಿಪ್ಲವಕ್ಕೆ ಒಳಗಾಗಿ ಅವನತಿಯ ಹಾದಿಹಿಡಿದಿದ್ದಿತು. ಅದೃಷ್ಟವಶಾತ್ ಆಗಮಿಸಿದ ರಾಮಾನುಜರಿಂದ ಪುನರುದ್ಧರಣಗೊಂಡು, ಶ್ರೀವೈಷ್ಣವ ಮತದ ಮುಖ್ಯ ಕೇಂದ್ರವಾಗಿ ಪರಿಣಮಿಸಿತು. ಹದಿನಾಲ್ಕನೆಯ ಶತಮಾನದ ನಂತರ ಮೇಲುಕೋಟೆಯು ಧಾರ್ಮಿಕ ಕೇಂದ್ರವಾಗಿ ಹೆಚ್ಚಿನ ಪ್ರಾಮುಖ್ಯತೆ ಪಡೆದು ಪ್ರಮುಖ ವೈಷ್ಣವ ಕೇಂದ್ರಗಳಲ್ಲಿ ಒಂದಾಗಿದೆ.

ಇಲ್ಲಿನ ಚಲುವನಾರಾಯಣಸ್ವಾಮಿ ಮತ್ತು ಯೋಗಾನರಸಿಂಹಸ್ವಾಮಿ ದೇವಾಲಯಗಳನ್ನು ಹೊಯ್ಸಳರು, ವಿಜಯನಗರದ ಅರಸರು ಹಾಗೂ ಮೈಸೂರಿನ ಒಡೆಯರು ಅಭಿವೃದ್ಧಿಪಡಿಸುವುದರೊಂದಿಗೆ ಹಲವು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬಂದರು. ಚಲುವನಾರಾಯಣಸ್ವಾಮಿ ದೇವಾಲಯದಲ್ಲಿ ಹಲವು ಧಾರ್ಮಿಕ ಆಚರಣೆಗಳನ್ನು ವರ್ಷದ ಬಹುದಿನಗಳು ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು, ದೈವಭಕ್ತರಿಗೆ ಅಚ್ಚುಮೆಚ್ಚಿನ ಧಾರ್ಮಿಕ ಸ್ಥಳವಾಗಿದೆ.

2.1 ಮೇಲುಕೋಟೆಯಲ್ಲಿ ರಾಮಾನುಜಾಚಾರ್ಯ:

ಕರ್ನಾಟಕದಲ್ಲಿ ವೈಷ್ಣವ-ಶ್ರೀವೈಷ್ಣವ ತತ್ವಗಳನ್ನು ಪ್ರಚಾರ ಮಾಡಿ ಅದನ್ನು ಒಂದು ಸುವ್ಯವಸ್ಥಿತ ಧರ್ಮಪಂಥವಾಗಿ ನೆಲೆಗೊಳಿಸಿದ ಕೀರ್ತಿ ಶ್ರೀರಾಮಾನುಜರಿಗೆ

ಸಲ್ಲಬೇಕು. ತಮಿಳುನಾಡಿನ ಶೈವಪಂಥದ ಚೋಳ ಅರಸನ ಕಿರುಕುಳಕ್ಕೆ ಒಳಗಾಗಿ ಆ ಪ್ರದೇಶವನ್ನು ಬಿಟ್ಟು ಕರ್ನಾಟಕಕ್ಕೆ ಬಂದರು. ಕಾವೇರಿ ನದಿಯ ಗತಿಯನ್ನು ಅನುಸರಿಸಿ ಮಿಥಿಲಾ–ಸಾಲಿಗ್ರಾಮಗಳ ಮೂಲಕ ತೊಂಡನೂರಿಗೆ ಬಂದು ಅಲ್ಲಿನ ನರಸಿಂಹ ದೇವಾಲಯದಲ್ಲಿ ವಾಸ್ತವ್ಯ ಹೂಡಿದರು.[1] ರಾಮಾನುಜಾಚಾರ್ಯರು ತೊಂಡನೂರಿಗೆ ಆಗಮಿಸಿದ ಸಂದರ್ಭದಲ್ಲಿ, ಈ ಪ್ರದೇಶವು ಹೊಯ್ಸಳ ಅರಸನಾದ ವಿಠ್ಠಲದೇವರಾಯನ ಉಪರಾಜಧಾನಿಯ ನೆಲೆವೀಡು ಆಗಿದ್ದಿತು. ಇಲ್ಲಿ ವಿಠ್ಠಲದೇವರಾಯನು ಆಚಾರ್ಯರಿಗೆ ಆಶ್ರಯ ನೀಡಿ, ಅವರ ವಿದ್ವತ್ತು ಮತ್ತು ಪಾಂಡಿತ್ಯದಿಂದ ಆಕರ್ಷಿತನಾಗಿ ವೈಷ್ಣವ ಪಂಥವನ್ನು ಸ್ವೀಕರಿಸಿದನು. ಈತನಿಗೆ ಆಚಾರ್ಯರು 'ವಿಷ್ಣುವರ್ಧನ'ನೆಂಬ ಹೆಸರನ್ನಿತ್ತರು.

ಆಚಾರ್ಯರಿಗೆ ಬಿಳಿಯನಾಮಕ್ಕೆ ಬೇಕಾದ ತಿರುಮಣ್ಣಿನ ಅವಶ್ಯಕತೆ ಉಂಟಾಯಿತು. ಇದೇ ಸಂದರ್ಭದಲ್ಲಿ ಮೇಲುಕೋಟೆಯ ನಾರಾಯಣದೇವರು ಆಚಾರ್ಯರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಅವರು ಮೇಲುಕೋಟೆಗೆ ಹೋಗಬೇಕೆಂದೂ, ಅಲ್ಲಿ ಅವರಿಗೆ ತಿರುಮಣ್ ದೊರಕುವುದೆಂದೂ ಆದೇಶ ನೀಡಿದರಂತೆ. ಅದರ ಫಲವಾಗಿ ಶ್ರೀ ರಾಮಾನುಜಾಚಾರ್ಯರು ಮೇಲುಕೋಟೆಗೆ ಹೋದರು.[2]

ಶ್ರೀರಾಮಾನುಜಾಚಾರ್ಯರು ಮೇಲುಕೋಟೆಯಲ್ಲಿ ಹರಿಜನರ ಸಹಾಯದಿಂದ ಹುತ್ತವೊಂದರಲ್ಲಿದ್ದ ತಿರುನಾರಾಯಣಸ್ವಾಮಿಯವರ ವಿಗ್ರಹವನ್ನು ತಂದು ದೇವಾಲಯ ಕಟ್ಟಿ ಪ್ರತಿಷ್ಠಾಪನೆ ಮಾಡಿದರು. ಐತಿಹ್ಯದ ಪ್ರಕಾರ, ದೆಹಲಿಯ ಮುಸ್ಲಿಂ ಮುಖ್ಯಸ್ಥನ ಕುವರಿಯ ಬಳಿ ಇದ್ದ ಚೆಲುವರಾಯ ಅಥವಾ ರಾಮಪ್ರಿಯ ಉತ್ಸವಮೂರ್ತಿಯನ್ನು ಕರೆತಂದು ಸ್ಥಾಪಿಸಿದರು. ತಮಗೆ ಸಹಾಯ ಮಾಡಿದ್ದ ಪಂಚಮರಿಗೆ ಅಪಾರ ಅನುಕಂಪ, ಕೃತಜ್ಞತೆ ಹಾಗೂ ವಾತ್ಸಲ್ಯತೋರಿ ಅವರನ್ನು ಮಮತೆಯಿಂದ 'ತಿರುಕುಲತ್ತಾರ್' ಶ್ರೀ, ಅಂದರೆ ಲಕ್ಷ್ಮೀದೇವಿಯ ಕುಲದವರು ಪವಿತ್ರರು ಎಂಬುದಾಗಿ ಕರೆದರು.[3] ಅವರೆಲ್ಲರಿಗೂ ತಮ್ಮ ಧರ್ಮವನ್ನು ಬೋಧಿಸಿದರಲ್ಲದೆ, ದೇವಸ್ಥಾನವನ್ನು ಪ್ರವೇಶಿಸಿ ಭಗವಂತನ ದರ್ಶನ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರು. ಸಂಕುಚಿತ ಜಾತಿವ್ಯವಸ್ಥೆಯ ಬಿಗಿಹಿಡಿತವಿದ್ದ

ಅತಿ ಸಂಪ್ರದಾಯಬದ್ಧವಾಗಿದ್ದ ಆ ಕಾಲದ ಸಮಾಜದಲ್ಲಿ ಪಂಚಮರ ಬಗ್ಗೆ ಶ್ರೀರಾಮಾನುಜರು ತೋರಿದ ಹೃದಯ ವೈಶಾಲ್ಯತೆ ಗಮನಾರ್ಹ.

ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ಆಚಾರ್ಯರು ಮೇಲುಕೋಟೆಯಲ್ಲಿ ಸುಮಾರು ಹನ್ನೆರಡು ವರ್ಷಗಳಕಾಲ ಇದ್ದು, ಚಲುವನಾರಾಯಣನನ್ನು ಪುನಃ ಪ್ರತಿಷ್ಠಾಪಿಸಿ, ದೇವಾಲಯವನ್ನು ಜೀರ್ಣೋದ್ಧಾರ ಮಾಡಿ, ಮುಂದಿನ ಜೀರ್ಣೋದ್ಧಾರಕ್ಕಾಗಿ ಯತಿರಾಜಮಠವನ್ನು ಸ್ಥಾಪಿಸಿ, ಮೇಲುಕೋಟೆಯನ್ನು ಶ್ರೀವೈಷ್ಣವ ಕ್ಷೇತ್ರವಾಗಿ ಮಾಡುವುದರ ಜೊತೆಗೆ ಶ್ರೀವೈಷ್ಣವ ಧರ್ಮವು ಕರ್ನಾಟಕದಾದ್ಯಂತ ಪ್ರಸರಣಗೊಳ್ಳುವಂತೆ ಮಾಡಿದರು.

ಹದಿನಾಲ್ಕನೆಯ ಶತಮಾನದ ನಂತರ ಮೇಲುಕೋಟೆಯು ಧಾರ್ಮಿಕ ಕೇಂದ್ರವಾಗಿ ಹೆಚ್ಚಿನ ಪ್ರಾಮುಖ್ಯತೆ ಪಡೆಯಿತು. ವಿಜಯನಗರ ಸಾಮ್ರಾಜ್ಯದ ಹಲವು ಅರಸರು ವಿಷ್ಣು ಭಕ್ತರಾಗಿದ್ದರು. ಅವರಲ್ಲಿ ಕೆಲವರು ಶ್ರೀವೈಷ್ಣವ ಧರ್ಮಾನುಯಾಯಿ ಗಳಾಗಿದ್ದರು. ಅವರ ಆಳ್ವಿಕೆಯ ಕಾಲದಲ್ಲಿ ತಿರುಪತಿ, ಶ್ರೀರಂಗ, ಕಾಂಚೀಪುರ ಮುಂತಾದವುಗಳು, ಶ್ರೀವೈಷ್ಣವ ಕ್ಷೇತ್ರಗಳಾಗಿ ರಾಜಾಶ್ರಯವನ್ನು ಪಡೆದವು. ಇವುಗಳ ಜೊತೆಗೆ ಮೇಲುಕೋಟೆಯೂ ಸೇರಿತು. ರಾಮಾನುಜಾಚಾರ್ಯರಿಗೆ ಸಂಬಂಧಿಸಿದ ಪ್ರಮುಖ ಶ್ರೀವೈಷ್ಣವರ ಕ್ಷೇತ್ರವೆಂದು ಇದು ಆ ವೇಳೆಗೆ ಪರಿಗಣಿಸಲ್ಪಟ್ಟಿತ್ತು.[4]

ವಿಜಯನಗರ ಸಾಮ್ರಾಜ್ಯದ ನಂತರ ಸ್ವತಂತ್ರರಾದ ಮೈಸೂರು ಅರಸರು ಸಹ, ಮೇಲುಕೋಟೆಯ ಚಲುವನಾರಾಯಣನ ಭಕ್ತರಾಗಿದ್ದು, ಮೇಲುಕೋಟೆಯ ಜೀರ್ಣೋದ್ಧಾರಕ್ಕೆ ಅಪಾರವಾಗಿ ಶ್ರಮಿಸಿದ್ದು ಕಂಡುಬಂದಿದೆ.

2.2 ಚಲುವನಾರಾಯಣಸ್ವಾಮಿ ದೇವಾಲಯ:

ಪ್ರಾಚೀನ ಶಾಸನಗಳಲ್ಲಿ 'ನಾರಾಯಣದೇವರು', 'ತಿರುನಾರಾಯಣ', 'ಸಂಪತ್ಕುಮಾರ ನಾರಾಯಣ', 'ಚೆಲ್ಲ(ಶೆಲ್ವ)ಪಿಳ್ಳೆರಾಯ', 'ಚಲುವನಾರಾಯಣ' ಎಂದೆಲ್ಲಾ ಉಲ್ಲೇಖಿತಗೊಂಡಿರುವ ಇಲ್ಲಿಯ ನಾರಾಯಣನನ್ನು ಕೃತಯುಗದಲ್ಲಿ ಸನತ್ಕುಮಾರರು, ತ್ರೇತಾಯುಗದಲ್ಲಿ ದತ್ತಾತ್ರೇಯ-ರಾಮರೂ, ದ್ವಾಪರಯುಗದಲ್ಲಿ ಬಲರಾಮ-ಕೃಷ್ಣರು ಮುಂತಾದವರು ಆರಾಧಿಸಿದರೆಂಬ ಪೌರಾಣಿಕ ಐತಿಹ್ಯವಿದ್ದು, ಕಲಿಯುಗದಲ್ಲಿ ಆಚಾರ್ಯ ರಾಮಾನುಜರಿಂದಲೂ ಆರಾಧಿಸಲ್ಪಟ್ಟ ಈ ದೇವಾಲಯವು ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ನಿರ್ಮಾಣವಾದುದಾಗಿದೆ.

ಪೂರ್ವಾಭಿಮುಖವಾಗಿರುವ ಈ ವಿಶಾಲ ದೇವಾಲಯದ ಗರ್ಭಗೃಹದಲ್ಲಿ ಸ್ಥಾನಿಕ ಭಂಗಿಯಲ್ಲಿರುವ ಚತುರ್ಭುಜಧಾರಿ ನಾರಾಯಣನ ಸುಂದರ ಶಿಲ್ಪವು ಶಂಖ, ಚಕ್ರ, ಗದಾ, ಅಭಯಹಸ್ತಧಾರಿಯಾಗಿ ಸರ್ವಾಭರಣಭೂಷಿತನಾಗಿದ್ದು, ಪದತಳದಲ್ಲಿ ಚತುರ್ಭುಜೆಲಕ್ಷ್ಮಿ ಇದ್ದು, ಮುಂದಿರುವ ಅಂತರಾಳಕ್ಕೆ ದ್ವಾರಪಾಲಕ ಜಯ-ವಿಜಯರಿದ್ದಾರೆ. ಇದರ ವಿಮಾನವು ವೇಸರ ಮಾದರಿಯಲ್ಲಿದೆ. ನವರಂಗವನ್ನು ಪ್ರವೇಶಿಸಲು ಮೂರು ದಿಕ್ಕುಗಳಲ್ಲಿ ದ್ವಾರಗಳಿದ್ದು, ನವರಂಗದಲ್ಲಿ ಉತ್ತರಾಭಿಮುಖವಾಗಿರುವ ಕಿರುಗರ್ಭ ಗೃಹದಲ್ಲಿ ಉಭಯ-ನಾಚ್ಚಿಯಾರರನ್ನು (ಶ್ರೀದೇವಿ-ಭೂದೇವಿ) ಒಳಗೊಂಡ ಚಲುವನಾರಾಯಣನ ಉತ್ಸವಮೂರ್ತಿಯನ್ನು ಇಡಲಾಗಿದೆ. ಈ ದೇವಾಲಯದ ಪ್ರಾಕಾರದ ಸುತ್ತಲು, ಚಕ್ರತ್ತಾಳ್ವಾರ, ಯದುಗಿರಿ ಅಮ್ಮನ ಸನ್ನಿಧಿ, ಗಜೇಂದ್ರವರದರಾಜ, ಕೂರತ್ತಾಳ್ವಾರ್ ಹಾಗೂ ರಾಮಾನುಜಾಚಾರ್ಯರ ಸನ್ನಿಧಿಗಳಿವೆ. ಪ್ರಾಕಾರದ ಮಹಾದ್ವಾರಕ್ಕೆ ಆಕರ್ಷಕವಾದ ಗೋಪುರವಿದೆ. ದೇವಾಲಯದ ಮುಂಭಾಗದಲ್ಲಿ ಗರುಡಗಂಭವನ್ನು ಕಾಣಬಹುದಾಗಿದ್ದು, ಇದು ಕಾರ್ತಿಕೇಯ ದೀಪಸ್ತಂಭವೂ ಆಗಿದೆ.

2.3 ಯೋಗಾನರಸಿಂಹಸ್ವಾಮಿ ದೇವಾಲಯ:

ಕಲ್ಯಾಣಿ ತೀರದಲ್ಲಿ ಇರುವ ಬೆಟ್ಟವೇ ಯೋಗಾನರಸಿಂಹಸ್ವಾಮಿಬೆಟ್ಟ. ಈ ಬೆಟ್ಟದ ಮೇಲೆ ಯೋಗಾನರಸಿಂಹನ ದೇವಾಲಯ ಇರುವುದರಿಂದ 'ಯೋಗಾನರಸಿಂಹ ಸ್ವಾಮಿಬೆಟ್ಟ' ಎಂದು ಕರೆಯುತ್ತಾರೆ. ಈ ಬೆಟ್ಟಕ್ಕೆ ಮೂನ್ನುರು ಒಂದು ಮೆಟ್ಟಿಲುಗಳಿದ್ದು, ಅಲ್ಲಲ್ಲಿ ಮಂಟಪಗಳು ಸಿಗುತ್ತವೆ. ನಡುವೆ ಬಲ ಪಕ್ಕದಲ್ಲಿ ಕೊಳವೊಂದಿದ್ದು ಅದನ್ನು 'ಬೆಟ್ಟದತೀರ್ಥ' ಅಥವಾ 'ನರಸಿಂಹತೀರ್ಥ' ಎಂದು ಕರೆಯುತ್ತಾರೆ.

ಈ ದೇವಾಲಯಕ್ಕೆ ಐದಂತಸ್ತಿನ ದೊಡ್ಡ ಗೋಪುರವಿದ್ದು, ಪ್ರವೇಶ ದ್ವಾರವು ಪಶ್ಚಿಮಕ್ಕಿದೆ. ಅದರ ಒಳಗೆ ಹೋದರೆ ಮತ್ತೊಂದು ಪ್ರವೇಶದ್ವಾರವಿದ್ದು, ಇದು ದಕ್ಷಿಣಕ್ಕಿದೆ. ಈ ದ್ವಾರದ ಮೂಲಕ ದೇವಾಲಯದ ಒಳಗೆ ಪ್ರವೇಶಿಸಲು ಒಂಭತ್ತು ಮೆಟ್ಟಿಲುಗಳಿವೆ. ಇಲ್ಲಿ ಹಿತ್ತಾಳೆಯ ತಗಡಿನಲ್ಲಿ ಉಬ್ಬಚ್ಚಿನ ವಿಧಾನದಲ್ಲಿ ಕೊರೆದ ದಶಾವತಾರದ ಪ್ರತಿಮೆಗಳು, ನಡುವೆ ಯೋಗಾನರಸಿಂಹನ ಮೂರ್ತಿಯೂ ಕಂಗೊಳಿಸುತ್ತದೆ. ಇಲ್ಲಿನ ಪ್ರಾಕಾರವನ್ನು ಪ್ರದಕ್ಷಿಣೆ ಮಾಡಿದ ನಂತರ ಎರಡು ದ್ವಾರವುಳ್ಳ ನವರಂಗ ಸಿಗುತ್ತದೆ. ಗರ್ಭಗುಡಿ ಮತ್ತು ಸುಖನಾಸಿಗಳನ್ನು ಹೊಂದಿದ್ದು, ಗರ್ಭಗುಡಿಯಲ್ಲಿ ಯೋಗಮುದ್ರೆಯಲ್ಲಿ ಆಸೀನನಾಗಿರುವ ನರಸಿಂಹನ ವಿಗ್ರಹವಿದೆ. ಈ ದೇವರ ವಿಗ್ರಹವು ಕುಳಿತ ಭಂಗಿಯಲ್ಲಿರುವುದರಿಂದ ಸ್ಥಳೀಯರು "ಕುಂಟಸಿಂಗ್ರಿ" ಎಂದು ಕರೆಯುತ್ತಾರೆ.

ನರಸಿಂಹದೇವರ ವಿಗ್ರಹವನ್ನು ಭಕ್ತನಾದ ಪ್ರಹ್ಲಾದ ಇಲ್ಲಿ ಪ್ರತಿಷ್ಠಾಪಿಸಿದನೆಂದು ಹೇಳುತ್ತಾರೆ.[5] ಈ ದೇವಾಲಯದಲ್ಲಿ ಟಿಪ್ಪುಸುಲ್ತಾನ್ ಕೊಟ್ಟ ನಗಾರಿಯನ್ನು ಕಾಣಬಹುದಾಗಿದೆ. ಸನ್ನಿಧಿಯಿಂದ ಹೊರಗೆ ಬಂದು ಮೇಲಿನ ಬಯಲು ಮಾಳಿಗೆಗೆ ಹೋದರೆ ನರಸಿಂಹದೇವರ ದಿವ್ಯವಿಮಾನ ಸಿಗುತ್ತದೆ. ಈ ಗುಡಿಯ ಉತ್ತರ ಭಾಗದ ಪ್ರಾಕಾರದ ಕೆಳಗೆ "ಬಿಲಸ್ವರ್ಗ"ದ ಬಾಗಿಲಿದೆ.

2.4 ಮೇಲುಕೋಟೆಯ ಧಾರ್ಮಿಕ ಆಚರಣೆಗಳು:

ಶ್ರೀವೈಷ್ಣವ ಕ್ಷೇತ್ರವಾದ ಮೇಲುಕೋಟೆಯಲ್ಲಿ ಹಲವು ಧಾರ್ಮಿಕ ಆಚರಣೆಗಳು ವರ್ಷದ ಬಹುದಿನಗಳು ವಿಜೃಂಭಣೆಯಿಂದ ನಡೆಯುತ್ತವೆ. ಇಲ್ಲಿನ ಚಲುವ ನಾರಾಯಣನಿಗೆ ವರ್ಷದಲ್ಲಿ ಸುಮಾರು ಮುವತ್ತೆರಡು ವಿಶೇಷೋತ್ಸವಗಳು ನಡೆಯುತ್ತವೆ. ಮೇಲುಕೋಟೆಯ ಜನತೆಗೆ ಒಂದು ರೀತಿಯಲ್ಲಿ ದಿನವೂ ಹಬ್ಬದ ಸಂಭ್ರಮವೆ! ಇಲ್ಲಿನ ಬಹುತೇಕ ಧಾರ್ಮಿಕ ಆಚರಣೆಗಳು ಪರಂಪರೆಯ ಭಾಗವಾಗಿ ಬಂದಿರುವ ಜಲಸಂಗ್ರಹ ಗಳೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿವೆ.

1. ಅಂಗಮಣಿ ಉತ್ಸವ:

ಈ ಉತ್ಸವವು ಸಂಕ್ರಾಂತಿಯ ಮಾರನೆಯ ದಿನ ನಡೆಯುತ್ತದೆ. ಈ ಉತ್ಸವವು ಅಮ್ಮನವರು ತವರುಮನೆಗೆ ಬಂದು ಮೆರೆಯುವ ಉತ್ಸವ. ಯತಿರಾಜಮಠದ ಪಕ್ಕದ ಸೆಜ್ಜೆಹಟ್ಟಿ ಬಾವಿಯಲ್ಲಿ ಉಭಯನಾಚ್ಚಿಯರ್ ಅಮ್ಮನವರು ದೊರೆತರು. ಆದ್ದರಿಂದ ಇದು ಅವರ ತವರುಮನೆ ಎನಿಸಿದೆ. ಇದನ್ನು ನೆನಪಿಗೆ ತರುವ ಉದ್ದೇಶದಿಂದ ಅಂಗಮಣಿ ಉತ್ಸವವನ್ನು ಆಚರಿಸಲಾಗುತ್ತದೆ. ಈ ಉತ್ಸವದ ಬೆಳಿಗ್ಗೆ ಎಲ್ಲಾ ದೇವಿಯರು ಕಲ್ಯಾಣಿ ತೀರ್ಥಕ್ಕೆ ಬಿಜಯಮಾಡಿಸಿ, ಅಲ್ಲಿ ಪೂಜೆ ಸಲ್ಲಿಸಿ ಬರುತ್ತಾರೆ.[6]

2. ವೈರಮುಡಿ ಉತ್ಸವ:

ಐತಿಹಾಸಿಕ ಮತ್ತು ಪವಿತ್ರ ಯಾತ್ರಾಸ್ಥಳ ಮೇಲುಕೋಟೆಯಲ್ಲಿ ಬ್ರಹ್ಮನಿಂದ ಲೋಕಕಲ್ಯಾಣಾರ್ಥ ಆರಂಭಿಸಲ್ಪಟ್ಟ ವೈರಮುಡಿ ಬ್ರಹ್ಮೋತ್ಸವ ಹದಿಮೂರು ದಿನಗಳ ಕಾಲ ವೈಶಿಷ್ಟ್ಯಪೂರ್ಣವಾಗಿ ನಡೆಯುತ್ತದೆ. ತಿರುಮಲೆಯ ಶ್ರೀನಿವಾಸನ ಉತ್ಸವದಷ್ಟೇ ವಿಜೃಂಭಣೆಯಿಂದ ಘೋಷ, ಮಂಗಳವಾದ್ಯ, ದಿವ್ಯಪ್ರಬಂಧ ಪಾರಾಯಣಗಳೊಂದಿಗೆ

ನಡೆಯುವ ಶ್ರೀಚಲುವನಾರಾಯಣಸ್ವಾಮಿಯ ಉತ್ಸವಗಳು ಹಾಗೂ ವಾಹನೋತ್ಸವಗಳು ಮೇಲುಕೋಟೆಯಲ್ಲಿ ಭೂವೈಕುಂಠವನ್ನೇ ಸೃಷ್ಟಿಸುತ್ತವೆ!

ತೆಪ್ಪೋತ್ಸವ, ತೆಪ್ಪದಜಾತ್ರೆ ಎಂದೇ ಕರೆಯುವ ಮೂರುದಿನದ ಉತ್ಸವವು ನಡೆಯುತ್ತದೆ. ಮೂರನೆಯದಿನ ತೆಪ್ಪಕ್ಕೆ ಶ್ರೀಯವರು ಉಭಯನಾಚ್ಚಿಯಾರೊಡನೆಯೂ ರಾಮಾನುಜಾಚಾರ್ಯರೊಡನೆ ಬಿಳಿದುಗುಲ ಧರಿಸಿ ಬಿಜಯ ಮಾಡಿಸುತ್ತಾರೆ. ನಂತರ ಕಲ್ಯಾಣೋತ್ಸವವು ಕಲ್ಯಾಣಿಯಲ್ಲಿರುವ ಧಾರಾಮಂಟಪದಲ್ಲಿ ನಡೆಯುತ್ತದೆ. ಯಾವ ಆಡಂಬರವೂ ಇಲ್ಲದೆ ಪ್ರಕೃತಿಯ ಮಡಿಲಲ್ಲಿ ಕಲ್ಯಾಣಿಯ ತೀರದ ಮಂಟಪದಲ್ಲಿ ನಡೆಯುವ ಶ್ರೀಚಲುವರಾಯ–ಚಲುವನಾಯಕಿಯ ಕಲ್ಯಾಣ ಬಹಳ ಸುಂದರವಾಗಿ ನಡೆಯುತ್ತದೆ. ಹತ್ತು ದಿನಗಳ ಜಾತ್ರೆಯಲ್ಲಿ ಮುಖ್ಯವಾದ ಉತ್ಸವಗಳು ನಡೆಯುತ್ತವೆ. ಈ ಉತ್ಸವದ ನಾಲ್ಕನೆಯ ದಿನ, ಪುಷ್ಯ ನಕ್ಷತ್ರದಂದು ಚಲುವರಾಯನಿಗೆ “ವೈರಮುಡಿ” ಕೀರಿಟವನ್ನು ಧರಿಸುತ್ತಾರೆ. ಇದು ವಜ್ರಗಳ ಹರಳುಗಳನ್ನುಳ್ಳ ಮುಡಿ, ಇದನ್ನು ಮಂಡ್ಯದ ಖಜಾನೆಯಿಂದ, ಎಲ್ಲಾ ವಿಧವಾದ ಮರ್ಯಾದೆಗಳೊಡನೆ ತರುತ್ತಾರೆ. ಸುಮಾರು ಒಂಭತ್ತು ಗಂಟೆಗೆ ಆರಂಭವಾಗುವ ಉತ್ಸವವು ರಾತ್ರಿ ಎರಡು ಗಂಟೆಯವರೆಗೂ ವೈಭವದಿಂದ ಜರುಗುತ್ತದೆ. ದೇವಸ್ಥಾನದ ಸುತ್ತ ಮುಖ್ಯವಾದ ನಾಲ್ಕು ಬೀದಿಗಳಲ್ಲಿ, ವೈರಮುಡಿ ಧರಿಸಿದ ಚಲುವರಾಯನು, ಉತ್ಸವದಲ್ಲಿ ಬಹಳ ಸುಂದರವಾಗಿ ಕಾಣಿಸುತ್ತಾನೆ. ನಂತರ ಮುಂದೆ ಕ್ರಮವಾಗಿ, ಪ್ರಹ್ಲಾದ ಪರಿಪಾಲನ, ಗಜೇಂದ್ರಮೋಕ್ಷ, ರಥೋತ್ಸವ, ತೆಪ್ಪೋತ್ಸವಗಳು ನಡೆಯುತ್ತವೆ.[7]

3. ಕೃಷ್ಣರಾಜಮುಡಿ ಉತ್ಸವ:

ಮೈಸೂರಿನ ಅರಸರು ಮೇಲುಕೋಟೆಯ ಅನನ್ಯ ಭಕ್ತರು. ಇವರು ವಂಶಪಾರಂಪರ್ಯವಾಗಿ, ತಿರುನಾರಾಯಣನ ಸೇವೆಯನ್ನು ಮಾಡುತ್ತಿದ್ದರು. ಮುಮ್ಮಡಿ ಕೃಷ್ಣರಾಜಒಡೆಯರು, ವೈರಮುಡಿಯನ್ನೇ ಹೋಲುವ ಒಂದು ಮುಡಿಯನ್ನು ಮತ್ತು

ಅನೇಕ ಆಭರಣಗಳನ್ನು ಚಲುವರಾಯನಿಗೆ ಸಮರ್ಪಿಸಿದ್ದಾರೆ. ಆದ್ದರಿಂದ ಈ ಮುಡಿಗೆ "ಕೃಷ್ಣರಾಜಮುಡಿ" ಎನ್ನುವರು. ಇದನ್ನು ಚಲುವರಾಯನಿಗೆ ಆಷಾಢ ಮಾಸದಲ್ಲಿ ಧರಿಸುತ್ತಾರೆ. ಇದನ್ನು 'ಕೃಷ್ಣರಾಜಮುಡಿಜಾತ್ರೆ' ಎಂದೇ ಹೇಳುತ್ತಾರೆ. ಇದೂ ಸಹ ವೈರಮುಡಿ ಉತ್ಸವದಂತೆ ವಿಜೃಂಭಣೆಯಿಂದ, ಕ್ರಮವಾಗಿ ಹತ್ತು ದಿನಗಳವರೆಗೆ ಜರುಗುತ್ತದೆ.[8]

4. ರಾಜಮುಡಿ ಉತ್ಸವ ಮತ್ತು ಅಷ್ಟತೀರ್ಥೋತ್ಸವ:

ರಾಜಒಡೆಯರೂ ಸಹ ಚಲುವರಾಯನಿಗೆ ಒಂದು ಮುಡಿಯನ್ನು ಅನೇಕ ಆಭರಣಗಳನ್ನು ಅರ್ಪಿಸಿದ್ದರು. ಈ ಮುಡಿಗೆ "ರಾಜಮುಡಿ" ಎಂದು ಹೆಸರು. ಇದನ್ನು ಕಾರ್ತಿಕ ಮಾಸದಲ್ಲಿ ಧರಿಸುತ್ತಾರೆ. ಇದೂ ಸಹ ಹತ್ತು ದಿನಗಳವರೆಗೆ ನಡೆಯುವ ಜಾತ್ರೆ ಇದರಲ್ಲಿ ಅಷ್ಟತೀರ್ಥಗಳಿಗೂ ದೇವರ ಶ್ರೀಪಾದವು ಬಿಜಯ ಮಾಡಿಸುವುದರಿಂದ ಇದನ್ನು "ಅಷ್ಟತೀರ್ಥೋತ್ಸವ" ಎಂದು ಹೇಳುತ್ತಾರೆ.[9]

ಈ ಅಷ್ಟತೀರ್ಥೋತ್ಸವವನ್ನು ರಾಜಒಡೆಯರ್‌ರವರ ಕಾಲದಲ್ಲಿ ಪ್ರಾರಂಭಿಸ ಲಾಯಿತು. ರಾಮಾನುಜರು ಘೋಷಿಸಿದ ಅಷ್ಟಾಕ್ಷರೀ ಮಂತ್ರದ ಪ್ರತೀಕವೋ ಎಂಬಂತೆ ಮೇಲುಕೋಟೆಯಲ್ಲಿ ವೇದಪುಷ್ಕರಣಿ–ಧನುಷ್ಕೋಟಿ, ಯಾದವತೀರ್ಥ, ದರ್ಭತೀರ್ಥ, ಪಲಾಶತೀರ್ಥ, ಪದ್ಮತೀರ್ಥ, ಮೈತ್ರೇಯತೀರ್ಥ, ನಾರಾಯಣ ತೀರ್ಥ ಮತ್ತು ವೈಕುಂಠಗಂಗೆ ಅಥವಾ ತೊಟ್ಟಿಲಮಡು ಎಂಬ ಅಷ್ಟತೀರ್ಥಗಳನ್ನು ನಿರ್ಮಿಸಲಾಗಿದೆ. ರಾಜಚಿಕ್ಕದೇವರಾಜಒಡೆಯರ್‌ರವರು ಈ ಅಷ್ಟತೀರ್ಥಗಳಿಗೆಲ್ಲಾ ಒಂದೊಂದು ಮಂಟಪ ವನ್ನು ಕಟ್ಟಿಸಿದರು. ಕಾರ್ತಿಕ ಮಾಸದಲ್ಲಿ ದಿನಕ್ಕೊಂದು ತೀರ್ಥದಂತೆ ಶ್ರೀಪಾದುಕೆ ಬಿಜಯಗೈದು, ಅಲ್ಲಿ ಆಯಾ ತೀರ್ಥದ ಮಹಾತ್ಮೆಯ ಪಠನವಾಗುತ್ತದೆ. ಕೊನೆಯದಿನ ಬೆಳಿಗ್ಗೆ ಕಲ್ಯಾಣಿತೀರ್ಥದಲ್ಲಿ ಅದರ ಅವಗಾಹನೆಯಾದ ಮೇಲೆ ಜನಸ್ತೋಮ ಸ್ನಾನ ಮಾಡುತ್ತದೆ. ಅಲ್ಲಿ ಪೂಜೆ ನೈವೇದ್ಯಗಳಾದ ಮೇಲೆ ಚೆಲುವರಾಯಸ್ವಾಮಿ ಗುಡಿಗೆ

ಬಿಜಯಮಾಡಿಸುತ್ತಾರೆ. ನಂತರ ಪ್ರತಿಯೊಂದು ತೀರ್ಥಗಳಲ್ಲೂ ಚಲುವರಾಯ ಸ್ವಾಮಿಯ ಪಾದುಕೆಗಳನ್ನು ಬಿಜಯ ಮಾಡಿಸುತ್ತಾ ಸುಮಾರು ಇಪ್ಪತ್ತು ಕಿ.ಮೀ. ಸಾಗುತ್ತಾರೆ. ಇವರ ಹಿಂದೆ ಹರಕೆ ಹೊತ್ತವರು ಮತ್ತು ಇತರ ಭಕ್ತಾದಿಗಳು ಸಹ ಹೋಗುತ್ತಾರೆ. ಪ್ರತಿಯೊಂದು ತೀರ್ಥದಲ್ಲೂ ದೇವರ ಪಾದುಕೆಯನ್ನು ಬಿಜಯಗೈದು ನಂತರ ಹರಕೆ ಹೊತ್ತ ಭಕ್ತಾದಿಗಳು ತೀರ್ಥದಲ್ಲಿ ಮಿಂದು ದೇವರ ಕೃಪೆಗೆ ಪಾತ್ರರಾಗುತ್ತಾರೆ.[10]

ಅಷ್ಟತೀರ್ಥೋತ್ಸವದ ಕೊನೆಯದಿನ 'ತೊಟ್ಟಿಲಮಡು' ಎಂಬಲ್ಲಿ ಸಂಜೆ ಜಾತ್ರೆ ನಡೆಯುತ್ತದೆ. ಇದು 'ತೊಟ್ಟಿಲಮಡುಜಾತ್ರೆ' ಎಂದೇ ಪ್ರಸಿದ್ಧವಾಗಿದೆ. ಎಲ್ಲಾ ತೀರ್ಥ ಗಳನ್ನು ಸುತ್ತಿ ಇಲ್ಲಿಗೆ ಬರುವುದರಲ್ಲಿ ಸಂಜೆಯಾಗುತ್ತದೆ. ಇಲ್ಲಿ ಎಲ್ಲಾ ಪಂಗಡದವರೂ ಸೇರಿ ವನಭೋಜನವನ್ನು ಏರ್ಪಡಿಸಿಕೊಳ್ಳುತ್ತಾರೆ. ಮಕ್ಕಳಾಗಲೆಂದು ಹರಕೆ ಹೊತ್ತು, ಮಡಿಲಿಗೆ ಹಣ್ಣು-ಕಾಯಿ ಕಟ್ಟಿಸಿಕೊಂಡವರನ್ನು ಬಿಟ್ಟು, ಉಳಿದವರು ಊಟ ಮಾಡುತ್ತಾರೆ. ಮಕ್ಕಳಾಗದವರು ಮಾತ್ರವಲ್ಲ ಭೂತ-ಪ್ರೇತಗಳ ಭಾದೆಗೆ ಒಳಗಾದವರೂ, ಭಕ್ತರು, ನಾನಾರೀತಿಯಲ್ಲಿ ಕಷ್ಟಕಾರ್ಪಣ್ಯಗಳಿಗೆ ಒಳಗಾದವರು ಹರಕೆ ಹೊತ್ತವರೂ ಈ ವ್ರತವನ್ನು ಆಚರಿಸುತ್ತಾರೆ.[11] ಇಲ್ಲಿ ವೈಕುಂಠವಾಸಿಯಾದ ಶ್ರೀಮನ್ನಾರಾಯಣನ ಭವ್ಯ ಮೂರ್ತಿಯೂ ಹಾಗೂ ಶ್ರೀದೇವಿ-ಭೂದೇವಿ, ಸಪ್ತರ್ಷಿಗಳು ಹಾಗೂ ದೇವತೆಗಳ ಮೂರ್ತಿಯನ್ನು ಬಂಡೆಯ ಮೇಲೆ ಕೆತ್ತಲಾಗಿದೆ.

5. ಪುನರ್ವಸು ಉತ್ಸವ:

ಮಕರ ಶುಕ್ಲ ಪುನರ್ವಸು ದಿವಸ ರಾಮಾನುಜಾಚಾರ್ಯರು ತೊಂಡನೂರಿನಿಂದ ಮೇಲುಕೋಟೆಗೆ ಬಂದ ದಿನವನ್ನು ನೆನಪಿಗೆ ತರುವ ಉತ್ಸವವೇ 'ಪುನರ್ವಸುಉತ್ಸವ'. ಆ ದಿನ ಮುಂಜಾನೆ ರಾಮಾನುಜಾಚಾರ್ಯರು ಕಲ್ಯಾಣಿಗೆ ಬಿಜಯ ಮಾಡಿಸುತ್ತಾರೆ. ಅಲ್ಲಿ ಅಭಿಷೇಕಾದಿಗಳು ನಡೆದು, ಯತಿವರ್ಯರು ಗೃಹಸ್ಥರ ಹಾಗೆ ಬಿಳಿಯ ವಸ್ತ್ರವನ್ನು ಧರಿಸಿ, ಕಿರೀಟವಿಲ್ಲದೆ ನೈಜ ಸ್ವರೂಪದಲ್ಲಿ ದೇವಸ್ಥಾನಕ್ಕೆ ಬಿಜಯ ಮಾಡಿಸಿ ಒಳ ಪ್ರಾಕಾರವನ್ನು

ಪ್ರದಕ್ಷಿಣೆ ಮಾಡಿ ಚಿನ್ನದ ಬಾಗಿಲಿನಲ್ಲಿ ತಿರುನಾರಾಯಣಸ್ವಾಮಿಯ ನವರಂಗವನ್ನು ಪ್ರವೇಶಿಸುತ್ತಾರೆ.

ಆಗ ತಿರುನಾರಾಯಣನಿಗೆ ರಥಾರತಿ ಬೆಳಗುತ್ತದೆ. ಗೋಷ್ಠಿಯವರು "ಪಹಲ್ ಕಂಡೇನ್", "ನಾರಾಯಣನೈಕಂಡೇನ್" ಎಂಬ ಪಾಶುರವನ್ನು ಅನುಸಂಧಾನ ಮಾಡುತ್ತಿರುವಾಗ ಗರ್ಭಗುಡಿಯಿಂದ, ಶ್ರೀಪಾದುಕೆ, ಅಭಯಹಸ್ತ, ನಾಮದಲುಂಡೆ, ರಟ್ಟತಿತಿರುಮಾಲೆ, ಎಲೆಅಡಿಕೆ, ಕಾಯಿಹೋಳು, ಕಲಾಪತ್ತಿನಶಾಲು ಪರಿವಟ್ಟ ಸಹಮರ್ಯಾದೆಯಾಗಿ ಬಂದು ಯತಿರಾಜರಿಗೆ ಸಮರ್ಪಿತವಾಗುತ್ತದೆ. ಗೋಷ್ಠಿಗೆ ಶ್ರೀಪಾದುಕೆಯ ಸ್ಪರ್ಶವಾದ ಮೇಲೆ ಯತಿರಾಜರನ್ನು ನವರಂಗದಿಂದ ಸುಕನಾಸಿಯ ಒಳ ಹೊಸ್ತಿಲಿನ ಬಳಿಗೆ ಬಿಜಯ ಮಾಡಿಸುತ್ತಾರೆ. ಆಗ ತೆರೆಯೆಳೆದು ನಾರಾಯಣಸ್ವಾಮಿಗೆ ಯತಿರಾಜರೇ ಅಲಂಕಾರ ಮಾಡುವಂತೆ ಅಲಂಕಾರ ಸಮರ್ಪಣೆಯಾಗುತ್ತದೆ. ಭಾಷ್ಯಕಾರ ಸನ್ನಿಧಿಯವರ ಮನೆಯಿಂದ ಸಕಲ ಮರ್ಯಾದೆಗಳೊಡನೆ ಪುಷ್ಪಹಾರಗಳೂ ಫಲದ ತಟ್ಟೆಗಳು ಬರುತ್ತವೆ. ಸ್ವಾಮಿಗೆ ಅರ್ಪಿತವಾಗಿ ಹನ್ನೆರಡು ಸಲ ಆರಾಧನೆ ನಡೆಯುತ್ತದೆ. ರಾತ್ರಿ ಗದ್ಯತ್ರಯದ ಪಾರಾಯಣ, ಶಾತ್ತು ಮೊರೆಗಳು ನಡೆಯುತ್ತವೆ. ಇದೊಂದು ಮನೋಹರವಾದ ಉತ್ಸವವಾಗಿದ್ದು ರಾಮಾನುಜರ ದಿವ್ಯಾತ್ಮ ಗುಡಿತುಂಬ, ಊರತುಂಬ, ಜೀವಂತವಾಗಿ ತುಂಬಿಕೊಂಡು ಸ್ಫುರಿಸುತ್ತಿರುವಂತೆ ತೋರುತ್ತದೆ.[12]

ಹೀಗೆ ಮೇಲುಕೋಟೆಯು ಪ್ರಸಿದ್ಧ ಧಾರ್ಮಿಕ ಶ್ರೀವೈಷ್ಣವ ಕೇಂದ್ರವಾಗಿದ್ದು, ಹಲವು ಬಗೆಯ ಧಾರ್ಮಿಕ ಉತ್ಸವಗಳು ವರ್ಷದ ಬಹುದಿನಗಳು ಚಲುವರಾಯಸ್ವಾಮಿ ದೇವಾಲಯದಲ್ಲಿ ನಡೆಯುತ್ತವೆ. ಇಲ್ಲಿ ನಡೆಯುವ ಬಹುತೇಕ ಧಾರ್ಮಿಕ ಉತ್ಸವಗಳು ಇಲ್ಲಿನ ಜಲಸಂಗ್ರಹಗಳೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿವೆ. ಪರಂಪರೆಯ ಭಾಗವಾಗಿ ಬಂದಿರುವ ಜಲಸಂಗ್ರಹಗಳು, ಮೇಲುಕೋಟೆಯ ಪರಿಸರದಲ್ಲಿ ಧಾರ್ಮಿಕ ಚಟುವಟಿಕೆಗಳಿಂದ ತಳುಕು ಹಾಕಿಕೊಂಡಿರುವುದು ಗಮನಾರ್ಹ.

ಅಡಿಟಿಪ್ಪಣಿಗಳು:

1. ಬಾರಾ ಗೋಪಾಲ : "ಕರ್ನಾಟಕದಲ್ಲಿ ರಾಮಾನುಜಾಚಾರ್ಯರು" ಪು. 13
2. ಅದೇ, ಪು. 33
3. ಎಂ.ಬಿ.ಪದ್ಮ : "ಮಂಡ್ಯ ಜಿಲ್ಲೆಯಲ್ಲಿ ಶ್ರೀವೈಷ್ಣವಧರ್ಮ", ದೇ.ಜ.ಗೌ (ಸಂ), ಸಿರಿಯೊಡಲು ಪು.272
4. ಅದೇ, ಪು. 37–38
5. ಹೆಚ್.ಎಂ.ನಾಗರಾಜು : "ಯದುಗಿರಿಯ ನಾಡು" ಪು.102
6. ಪು.ತಿ.ನ. : "ಮೇಲುಕೋಟೆ" ಪು. 18
7. ಹರಿಪ್ರಿಯ : "ಮೇಲುಕೋಟೆ ಪರಿಚಯ" ಪು. 22–23
8. ಅದೇ, ಪು. 23
9. ಅಸೂರಿ ತಿರುನಾರಾಯಣಯ್ಯಂಗಾರ್, ಅಸೂರಿ ಶ್ರೀನಿವಾಸಯ್ಯಂಗಾರ್ : "ಜೀರ್ಣೋದ್ಧಾರ ಮತ್ತು ಶಾಸನಗಳು" ಪು. 40
10. ಪು.ತಿ.ನ. : ಪೂರ್ವೋಕ್ತ, ಪು.35
11. ಯದುಗಿರಿ ಮಾಸ ಪತ್ರಿಕೆ : ಫೆಬ್ರವರಿ ಪು. 35–36 ಹಾಗೂ ಸಂತಾನ್ ರಾಮ್‌ರವರಿಂದ ಮಾಹಿತಿ
12. ಪು.ತಿ.ನ. : ಪೂರ್ವೋಕ್ತ, ಪು. 52–53

ಅಧ್ಯಾಯ– 3

“ಮೇಲುಕೋಟೆಯ ನೀರಿನ ಆಶ್ರಯ ತಾಣಗಳು”

3.1 ಕೊಳಗಳು

3.2 ಬಾವಿಗಳು

ಮೇಲುಕೋಟೆಯ ಪ್ರದೇಶದಲ್ಲಿ ಬಿದ್ದ ಮಳೆಯ ನೀರನ್ನು ವ್ಯರ್ಥವಾಗದಂತೆ ತಡೆದು ತನ್ನಲ್ಲಿ ಶೇಖರಿಸಿಕೊಂಡು ಅಲ್ಲಿನ ಜನತೆಯ ದೈನಂದಿನ ಬದುಕಿಗೆ ಉಪಯೋಗವಾಗುತ್ತಿರುವ ಕೊಳ ಮತ್ತು ಬಾವಿಗಳ ಪಾತ್ರ ಗಮನಾರ್ಹವಾದುದು. ಮಳೆ ನೀರಿಗೆ ತಡೆ ಹಾಕದಿದ್ದರೆ ಮೇಲುಕೋಟೆಯಲ್ಲಿ ನೀರಿನ ಬವಣೆ ಹೇಳತೀರದಾಗಿರುತ್ತಿತ್ತು. ಇದನ್ನು ಅರಿತ ಅಂದಿನ ಜನರು ಮೇಲುಕೋಟೆ ಬೆಟ್ಟದ ಮೇಲೆ ಹಲವಾರು ಕೊಳಗಳು ಮತ್ತು ಬಾವಿಗಳನ್ನು ನಿರ್ಮಿಸಿದ್ದಾರೆ. ಈ ಕೊಳ ಮತ್ತು ಬಾವಿಗಳು ಎಷ್ಟು ವ್ಯವಸ್ಥಿತವಾಗಿವೆ ಎಂದರೆ ಎಂತಹ ಬರಗಾಲ ಬಂದರೂ ಬತ್ತುವುದಿಲ್ಲ! ಹಾಗೂ ಅಲ್ಲಿನ ಜನರಿಗೆ ಕುಡಿಯುವ ನೀರಿಗಾಗಲಿ, ದೇವಾಲಯದ ಧಾರ್ಮಿಕ ಆಚರಣೆಗಳಿಗಾಗಲಿ ತೊಂದರೆಯಾಗಿಲ್ಲ.

ಕೆರೆ, ಕಾಲುವೆ, ಕೊಳಗಳನ್ನು ನಿರ್ಮಿಸುವುದು, ಬಾವಿಗಳನ್ನು ತೋಡಿಸುವುದು, ಒಂದು ಧಾರ್ಮಿಕ ಕಾರ್ಯ. ಇಂತಹ ಕಾರ್ಯಗಳನ್ನು ಕೈಗೊಂಡ ವ್ಯಕ್ತಿ ಹಾಗೂ ವಂಶಸ್ಥರು ಪುಣ್ಯಕ್ಕೆ ಅರ್ಹರಾಗುತ್ತಾರೆ ಎಂಬ ನಂಬಿಕೆ ಗಾಢವಾಗಿದ್ದಿತು. ಹೀಗಾಗಿ ಧಾರ್ಮಿಕ ಮಹೋನ್ನತಿಯ ನಂಬಿಕೆಯ ಹಿನ್ನೆಲೆಯಲ್ಲಿ ನೀರಿನ ಆಶ್ರಯ ತಾಣಗಳು ಮಾನ್ಯತೆ ಪಡೆದವು. ಇಂತಹ ಮಹೋನ್ನತ ಕಾರ್ಯಗಳಲ್ಲಿ ಭಾಗಿಯಾದವರಿಗೆ ಸಾಮಾಜಿಕ ಹಾಗೂ ರಾಜಕೀಯ ಮನ್ನಣೆಗಳು ದೊರಕುತ್ತಿದ್ದವು.

3.1 ಕೊಳಗಳು:

ಕೊಳಗಳು ನೀರಿನ ಆಶ್ರಯ ತಾಣಗಳಲ್ಲಿ ಒಂದಾಗಿದ್ದು, ಇವುಗಳನ್ನು ತೀರ್ಥಗಳು, ಪುಷ್ಕರಣಿಗಳು ಎಂತಲೂ ಕರೆಯುವರು. ಈ ಕೊಳಗಳು ಅತ್ಯಾಕರ್ಷಕವಾಗಿ ರಚನೆಯಾಗಿದ್ದು, ನೋಡುಗರ ಮನಸ್ಸನ್ನು ಸೂರೆಗೊಳ್ಳುತ್ತಾ ಮೇಲುಕೋಟೆಯ ಹಿರಿಮೆಯನ್ನು ಹೆಚ್ಚಿಸಿವೆ. ಮೇಲುಕೋಟೆಯಲ್ಲಿ ಹೆಚ್ಚು ಕೊಳಗಳಿದ್ದು, ‘ಮೇಲುಕೋಟೆಯ ನೂರೊಂದು ಕೊಳಗಳು’ ಎಂದೇಪ್ರಸಿದ್ಧವಾಗಿವೆ. ಪ್ರಸ್ತುತದಲ್ಲಿ ಸುಮಾರು 50–60

ಕೊಳಗಳಿದ್ದು ಉಳಿದವು ಕಣ್ಮರೆಯಾಗಿವೆ. ಕ್ರಿ.ಶ. 1930ರಲ್ಲಿ ಸಮೀಕ್ಷೆ ಮಾಡಿದ ಸಂದರ್ಭದಲ್ಲಿ ಪ್ರಮುಖವಾಗಿ 29 ಕೊಳಗಳು ಕಂಡು ಬಂದಿವೆ.[1]

ಮೇಲುಕೋಟೆಯಲ್ಲಿನ ಬಹುತೇಕ ಕೊಳಗಳು ಧಾರ್ಮಿಕ ಆಚರಣೆಗಳ ಉದ್ದೇಶಕ್ಕಾಗಿ ನಿರ್ಮಾಣವಾದವುಗಳಾಗಿದ್ದು, ಅಲ್ಲಿಗೆ ಬರುವ ಯಾತ್ರಾರ್ಥಿಗಳಿಗೆ ಮತ್ತು ಅಲ್ಲಿನ ಸ್ಥಳೀಯ ಜನರಿಗೆ ನೀರನ್ನು ಪೂರೈಸುತ್ತಿವೆ. ಹಿಂದೆ ಅರಸರು, ಪಾಳೇಗಾರರು ಮತ್ತು ಜನಸಾಮಾನ್ಯರು ಸಮಾಜದ ಉಪಯೋಗಕ್ಕಾಗಿ ಹಾಗೂ ಪುಣ್ಯ ಸಂಪಾದನೆಗಾಗಿ ಕೊಳಗಳನ್ನು ನಿರ್ಮಿಸುತ್ತಿದ್ದರು. ಇಲ್ಲಿನ ಕೊಳಗಳ ನಿರ್ಮಾಣವು ವಾಸ್ತುಶಿಲ್ಪದ ದೃಷ್ಟಿಯಿಂದಲೂ, ನೈರ್ಮಲ್ಯದ ದೃಷ್ಟಿಯಿಂದಲೂ ವೈಶಿಷ್ಟ್ಯಪೂರ್ಣವಾದವೆಂದೇ ಹೇಳಬಹುದಾಗಿದೆ. ಅಂದಿನ ಜನರು ಕೇವಲ ಕೊಳಗಳನ್ನು ನಿರ್ಮಿಸುವುದರಲ್ಲಷ್ಟೇ ಕಾರ್ಯಪ್ರವೃತ್ತರಾಗದೇ, ಜಲಸಂಗ್ರಹ ಮತ್ತು ಅದರ ಬಳಕೆಯಲ್ಲಿನ ಸ್ವಚ್ಛತೆಗೆ ಹೆಚ್ಚು ಗಮನ ಕೊಟ್ಟಿರುವುದನ್ನು ಮೇಲುಕೋಟೆಯಲ್ಲಿ ಕಾಣಬಹುದಾಗಿದೆ. ಒಂದು ಕುಡಿಯಲು ಯೋಗ್ಯವಾದ ಕೊಳದ ಪಕ್ಕ ಅದರ ನೈರ್ಮಲ್ಯವನ್ನು ಕಾಪಾಡಲು ಪಕ್ಕದಲ್ಲಿಯೇ ಮತ್ತೊಂದು ಕೊಳವನ್ನು ಜನರ ಮತ್ತು ಪ್ರಾಣಿಗಳ ಬಳಕೆಗಾಗಿ ನಿರ್ಮಿಸಲಾಗಿದೆ. ಉದಾಹರಣೆಗೆ ತಂಗಿಯ ಕೊಳವು ಕುಡಿಯಲು ಉಪಯೋಗವಾಗುತ್ತಿದ್ದರೆ, ಅಕ್ಕನ ಕೊಳವು ಜನರ ಇತರೆ ಬಳಕೆಗೆ ಉಪಯೋಗವಾಗುತ್ತಿದ್ದು, ಪಕ್ಕದ ನಿಂಗಣ್ಣನ ಕೊಳವು ಇವೆರಡರ ನೈರ್ಮಲ್ಯ ವನ್ನು ಕಾಪಾಡುವ ಉದ್ದೇಶಕ್ಕಾಗಿ ಶೌಚಾಲಯಕ್ಕೆಂದು ನಿರ್ಮಾಣವಾಗಿದೆ. ಮತ್ತೊಂದು ಕುಡಿಯಲು ಯೋಗ್ಯವಾದ ಬಸವರಾಜನ ಕೊಳದ ನೈರ್ಮಲ್ಯವನ್ನು ಪಕ್ಕದ ದೊಡ್ಡಯ್ಯನ ಕೊಳವು ಕಾಪಾಡುತ್ತಿತ್ತು.

ಮೇಲುಕೋಟೆಯಲ್ಲಿನ ಕೊಳಗಳು ಸಾಮಾನ್ಯವಾಗಿ 'ನಂದ' ಮತ್ತು 'ಭದ್ರ' ಮಾದರಿಗೆ ಸೇರಿದವಾಗಿದ್ದು, ಚೌಕಾಕಾರ ಮತ್ತು ಆಯತಾಕಾರದಲ್ಲಿಯೂ, ಒಂದು ಕೊಳ ಮಾತ್ರ ವೃತ್ತಾಕಾರದಲ್ಲಿಯೂ ಇದೆ.[2] ಇಲ್ಲಿನ ಕೊಳಗಳಲ್ಲಿ ಕೆಲವು ಕೊಳಗಳನ್ನು ನಯಗೊಳಿಸಿರುವ ಕಲ್ಲುಗಳಿಂದಲೂ, ಮತ್ತೆ ಕೆಲವು ಕೊಳಗಳನ್ನು ನಯಗೊಳಿಸದೇ ಇರುವ

ಕಲ್ಲುಗಳಿಂದಲೂ ನಿರ್ಮಾಣ ಮಾಡಲಾಗಿದೆ. ಇವುಗಳನ್ನು ನಿರ್ಮಿಸುವಾಗ ಯಾವುದೇ ಮಣ್ಣು ಮತ್ತು ಇತರೆಗಳ ಸಹಾಯವಿಲ್ಲದೆ, ಸಂದುಗಳನ್ನು ಬಿಡದೆ ಕೌಶಲ್ಯ ಪೂರ್ಣವಾಗಿ ನಿರ್ಮಿಸಲಾಗಿದೆ.

ಮೇಲುಕೋಟೆಯ ಕೊಳಗಳು:

1. ಕಲ್ಯಾಣಿತೀರ್ಥ
2. ತೆಪ್ಪ ಕೊಳ
3. ಪುಟ್ಟನರಸಿ ಕೊಳ
4. ಅಜ್ಜಯ್ಯನಕಟ್ಟೆ
5. ಚಲುವರಸಿನ ಕೊಳಗಳು–2
6. ಬೆಟ್ಟದತೀರ್ಥದ ಕೊಳ
7. ಬಸವರಾಜ ಕೊಳ
8. ಮೇಲುಚಿಕ್ಕಯ್ಯನ ಕೊಳ
9. ಬ್ರಹ್ಮಚಾರಿ ಕೊಳ
10. ವೇದಪುಷ್ಕರಣಿ
11. ಧನುಷ್ಕೋಟಿ
12. ಕಿಳ್ಳುಚಿಕ್ಕಯ್ಯನ ಕೊಳ
13. ಯಾದವತೀರ್ಥ
14. ದರ್ಭತೀರ್ಥ
15. ಪಲಾಶತೀರ್ಥ
16. ಪದ್ಮತೀರ್ಥ
17. ಸಿಹಿನೀರಿನ ಕೊಳ
18. ಮೈತ್ರೇಯತೀರ್ಥ
19. ನಾರಾಯಣತೀರ್ಥ
20. ನಿಂಗಣ್ಣನ ಕೊಳ
21. ಸಿಂಗ್ರಯ್ಯನ ಕೊಳ

22. ದೊಡ್ಡಯ್ಯನ ಕೊಳ

23. ಚಕ್ರಕಟ್ಟೆ

24. ಗೋರುಗುಂಡಯ್ಯನಕೊಳ

25. ಚೊತ್ತಿಕೊಳ

26. ಗಣೇಶನಕಟ್ಟೆ

27. ಭಟ್ಟರಕೊಳ

28. ಹೂಂಕೇಟಿ

29. ಕಂಚಗಾರ್‌ಕೊಳ

30. ಗಿರಗಿಕೊಳ ಮೊದಲಾದವುಗಳು. – ಭೌಗೋಳಿಕವಾಗಿ ಸುಮಾರು 15–20 ಕೊಳಗಳು ಕಂಡುಬಂದಿವೆಯಾದರೂ ಹೆಸರಿಸಲು ಮಾಹಿತಿ ಸಿಕ್ಕಿಲ್ಲ. ಅಧ್ಯಯನದ ಅನುಕೂಲಕ್ಕಾಗಿ ಮೇಲುಕೋಟೆಯ ಕೊಳಗಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

1. ಪ್ರಮುಖ ಕೊಳಗಳು
2. ಅಷ್ಟತೀರ್ಥಗಳು
3. ಸಂಸ್ಕೃತ ಸಂಶೋಧನ ಸಂಸತ್‌ನ ವ್ಯಾಪ್ತಿ ಪ್ರದೇಶದಲ್ಲಿರುವ ಕೊಳಗಳು
4. ಇತರೆ ಕೊಳಗಳು

1. ಪ್ರಮುಖ ಕೊಳಗಳು:

ಅ) ಕಲ್ಯಾಣಿ:

ಯೋಗಾನರಸಿಂಹಸ್ವಾಮಿ ಬೆಟ್ಟಕ್ಕೆ ಹತ್ತುವಾಗ ಅದರ ಮುಂಭಾಗದಲ್ಲಿ ಸಿಗುವ ಕೊಳವೇ 'ಕಲ್ಯಾಣಿ'. ಇದು ಮೇಲುಕೋಟೆಯಲ್ಲಿನ ಕೊಳಗಳಿಗೆಲ್ಲಾ ಪ್ರಮುಖವಾದ, ಸುಂದರವಾದ, ಬಹುವಿಸ್ತಾರವಾದ ಕೊಳವಾಗಿದ್ದು 'ಕಲ್ಯಾಣಿ' ಎಂದೇ ಪ್ರಸಿದ್ದವಾಗಿದೆ. ಅಷ್ಟತೀರ್ಥಗಳಿಗೆಲ್ಲಾ ಕಲ್ಯಾಣಿಯೇ ಮುಖ್ಯವಾಗಿದ್ದು, ಇದು ರಾಮಾನುಜಾಚಾರ್ಯರ ಕಾಲಕ್ಕೂ ಮುಂಚೆಯೇ ಇದ್ದಿತೆಂದು ತಿಳಿದು ಬರುತ್ತದೆ. ಕ್ರಿ.ಶ. 1098 ರಲ್ಲಿ ಕಲ್ಯಾಣಿ ಇತ್ತು

ಎಂಬ ಉಲ್ಲೇಖವನ್ನು ರಾಮಾನುಜಾಚಾರ್ಯರ ಸಮಕಾಲೀನರಾದ ಆಂದ್ರಪೂರ್ಣರು ರಚಿಸಿರುವ 'ಪ್ರಪನ್ನಾಂಮೃತ' ಎಂಬ ರಾಮಾನುಜಚಾರ್ಯರ ದಿವ್ಯ ಚರಿತ್ರೆಯಲ್ಲಿ ಉಲ್ಲೇಖ ಇದೆ.[3] ವರಾಹಸ್ವಾಮಿ ಭೂಮಿಯನ್ನು ಎತ್ತಿದಾಗ ಬಂದಂತಹ ಸ್ವೇದ(ಬೆವರು)ವೇ ಈ ಕಲ್ಯಾಣಿ ಪುಷ್ಕರಣಿ ಎಂಬ ಪ್ರತೀತಿ ಇದೆ! ಇದರ ಒಳಗೆ ಐದು ಕೊಳಗಳಿದ್ದು, ಇದನ್ನು 'ಪಂಚಕಲ್ಯಾಣಿ' ಎಂತಲೇ ಕರೆಯುವರು.[4] ಶ್ರೀರಾಮಾನುಜರು ಶ್ರೀರಂಗಕ್ಕೆ (ತಮಿಳುನಾಡು) ಹಿಂತಿರುಗಲು ಅಲ್ಲಿಯ ವಾತಾವರಣ ಸುರಕ್ಷಿತವಾಗಿದೆ ಎಂಬ ಸುದ್ದಿ ಇವರು ಕಲ್ಯಾಣಿ ತೀರದಲ್ಲಿದ್ದಾಗ ಕೇಳಿದ್ದರಿಂದ ಇದಕ್ಕೆ 'ಕಲ್ಯಾಣಿ' ಎಂದು ಹೆಸರು ಬಂದಿತು. ಫಲ್ಗುಣಮಾಸದಲ್ಲಿ ಗಂಗೆ ಇಲ್ಲಿಗೆ ಬಂದು ನೆಲಸುತ್ತಾಳೆ ಎಂಬ ಪ್ರತೀತಿಯೂ ಉಂಟು.[5]

ಇದು ಮುನ್ನೂರು ಅಡಿಗಳ ಚಚ್ಚೌಕಾಕಾರವಾದ ಸೋಪಾನ ಪಂಕ್ತಿಯನ್ನು ಹೊಂದಿದ್ದು, ಕ್ರಿ.ಶ. 1633ರಲ್ಲಿ ಚಾಮರಾಜಒಡೆಯರ್‌ರವರ ಧರ್ಮಪತ್ನಿ ಮುದ್ದಾಜಮ್ಮಣ್ಣಿ ಯವರು ತಮ್ಮ ಕೈಂಕರ್ಯವಾಗಬೇಕೆಂದು ಶಿಥಿಲವಾದ ಕಲ್ಯಾಣಿ ಪುಷ್ಕರಣಿಗೆ ಸೋಪಾನ ವನ್ನು ಕಟ್ಟಿಸಿ ಸುತ್ತಲೂ ಮಂಟಪವನ್ನು ಕಟ್ಟಿಸಿದರು.[6]

ಇದರ ಸುತ್ತಲೂ ಕೋಟೆಯಂತೆ ನಿರ್ಮಿಸಿರುವ ಪ್ರಾಕಾರದಲ್ಲಿ ಅನೇಕ ಸಣ್ಣಪುಟ್ಟ ಗುಡಿಗಳಿವೆ. ಕಲ್ಯಾಣಿಯ ಉತ್ತರಕ್ಕೆ ಚಿಕ್ಕದೇವರಾಜಒಡೆಯರ್ ನಿರ್ಮಿಸಿರುವ ಗಜೇಂದ್ರಮೋಕ್ಷ ಮಂಟಪವಿದೆ. (ಇಂದಿಗೂ ಈ ಸ್ಥಳದಲ್ಲಿ ಗಜೇಂದ್ರಮೋಕ್ಷ ಹಬ್ಬವನ್ನು ಆಚರಿಸಲಾಗುತ್ತದೆ.) ಚಿಕ್ಕದೇವರಾಜಒಡೆಯರ್‌ರವರ ಉತ್ತರಾಧಿಕಾರಿಯಾದ ಕಂಠೀರವ ಒಡೆಯರ್‌ರವರು ಕಲ್ಯಾಣಿಯ ದಕ್ಷಿಣ ಭಾಗದಲ್ಲಿ ಬಿಂದುಮಾಧವ ದೇವಸ್ಥಾನವನ್ನು, ಮುಮ್ಮಡಿ ಕೃಷ್ಣರಾಜಒಡೆಯರ್‌ರವರು ಕಲ್ಯಾಣಿಯ ಉತ್ತರಕ್ಕೆ ಅಷ್ಟಭುಜಾಕೃತಿಯ ಹದಿನಾರು ಕಂಬಗಳುಳ್ಳ ಬಹುಕಲಾತ್ಮಕವಾದ 'ಭುವನೇಶ್ವರಿಮಂಟಪ', ಜೊತೆಗೆ 'ಧಾರಮಂಟಪವನ್ನು' ನಿರ್ಮಿಸಿದ್ದಾರೆ. ಇವುಗಳಲ್ಲದೇ ಇಲ್ಲಿ ವರಾಹಸ್ವಾಮಿ ದೇವಾಲಯ,

ಸತ್ಯನಾರಾಯಣಸ್ವಾಮಿ ದೇವಾಲಯ, ಅಳಹಿಯಮನವಾಳಮಠ ಮೊದಲಾದವುಗಳಿವೆ. ಇಲ್ಲಿ ತೆಪ್ಪೋತ್ಸವ, ಉಭಯನಾಚ್ಚಿಯಾರ್ ಅಮ್ಮನವರ ಉತ್ಸವ, ಪುನರ್ವಸು ಉತ್ಸವ, ಯಾದವಗಿರಿ ಮಾಹಾತ್ಮೆಯನ್ನು ಪಠಿಸುವ ಉತ್ಸವಗಳು, ವರಾಹ ಜಯಂತಿಯ ಪ್ರಯುಕ್ತದ ಉತ್ಸವ, ಶ್ರೀಯವರ ಕಲ್ಯಾಣೋತ್ಸವ ಮತ್ತು ನಾಗವಲ್ಲಿ ಉತ್ಸವ ಮೊದಲಾದ ಉತ್ಸವಗಳು ನಡೆಯುತ್ತವೆ. ಇಲ್ಲಿಂದ ದೇವಸ್ಥಾನಕ್ಕೆ ಪ್ರತಿನಿತ್ಯ ದೇವತೀರ್ಥ ಮಂಗಳವಾದ್ಯಗಳೊಡನೆ ಹೋಗುತ್ತಿದ್ದು, ಇತ್ತೀಚೆಗೆ ವಿಶೇಷ ದಿನಗಳಲ್ಲಿ ಮಾತ್ರ ಹೋಗುತ್ತದೆ. ದೇವಸ್ಥಾನಕ್ಕೆ ಬರುವ ಭಕ್ತಾದಿಗಳು ಈ ಪುಷ್ಕರಣಿಯಲ್ಲಿ ಸ್ನಾನಮಾಡಿ ನಂತರ ದೇವಸ್ಥಾನಗಳಿಗೆ ಹೋಗುತ್ತಾರೆ. ಅಲ್ಲದೆ, ಈ ಊರಿನಲ್ಲಿ ಯಾರಾದರು ಮರಣ ಹೊಂದಿದರೆ ಶವಸಂಸ್ಕಾರವಾದ ಮೇಲೆ ಇಲ್ಲಿ ಸ್ನಾನ ಮುಗಿಸಿ ಮನೆಗೆ ತೆರಳುವ ಸಂಪ್ರದಾಯವಿದೆ. ಎಲ್ಲಾ ವರ್ಗದವರಿಗೂ ಇಲ್ಲಿ ಮುಕ್ತವಾದ ಪ್ರವೇಶವಿದೆ. ಜಾತಿ-ಧರ್ಮದ ಕಟ್ಟುಪಾಡುಗಳಿಲ್ಲ. ಇಲ್ಲಿ ಸಾಮಾಜಿಕ ನೆಲೆಯಲ್ಲಿ ಸಮಾನತೆಯ ಅವಕಾಶ ಕಲ್ಪಿಸಿರುವುದು ಗಮನಾರ್ಹ.

ಕಲ್ಯಾಣಿಯ ಪೂರ್ವಕ್ಕೆ ಯೋಗಾನರಸಿಂಹಬೆಟ್ಟದ ಮೇಲೆ ಬಿದ್ದ ಮಳೆಯ ನೀರು ವ್ಯರ್ಥವಾಗದಂತೆ ಅದರ ಕೆಳಗೆ ಕಾಲುವೆಯನ್ನು ತೋಡಿಸಲಾಗಿದ್ದು, ಆ ಕಾಲುವೆಯ ನೀರನ್ನು ಶುದ್ಧೀಕರಿಸಲು ಕಲ್ಯಾಣಿಯ ಈಶಾನ್ಯ ದಿಕ್ಕಿಗೆ ಎರಡು ಹೊಂಡಗಳನ್ನು ನಿರ್ಮಿಸಲಾಗಿದೆ. ಮೊದಲನೆಯ ಹೊಂಡವು ದಪ್ಪದಪ್ಪ ಕಸಗಳನ್ನು ಹಿಡಿದಿಟ್ಟುಕೊಂಡು ಮುಂದಿನ ಹೊಂಡಕ್ಕೆ ನೀರನ್ನು ಕಳುಹಿಸುತ್ತದೆ. ನಂತರ ಎರಡನೆಯ ಹೊಂಡದಲ್ಲಿ ನೀರು ಮತ್ತಷ್ಟು ಶುದ್ಧಿಯಾಗಿ ಕಲ್ಯಾಣಿಗೆ ಬಂದು ಸೇರುತ್ತದೆ. ಮೊದಲು ಈ ನೀರನ್ನು ಕುಡಿಯಲು ಉಪಯೋಗಿಸಬಹುದಿತ್ತು. ಆದರೆ ಪ್ರಸ್ತುತದಲ್ಲಿ ಅಷ್ಟು ಶುಭ್ರವಾಗಿಲ್ಲ, ಕಾರಣ ಭಕ್ತಾದಿಗಳು ಸ್ನಾನಮಾಡಿ ತಮ್ಮ ಬಟ್ಟೆಯನ್ನು ಅಲ್ಲಿಯೇ ತೊಳೆಯುತ್ತಾರೆ. ಜೊತೆಗೆ ಪಾವಿತ್ರ್ಯವನ್ನು ಪಡೆದ ಈ ಕೊಳದಲ್ಲಿ ಹಲವು ಧಾರ್ಮಿಕ ಕಾರ್ಯ ನಡೆಯುವುದರಿಂದ ಸ್ಥಳೀಯ ಜನರು ಗೃಹಬಳಕೆಗಾಗಲಿ ಇತರೆ ಯಾವುದೇ ಕೆಲಸಕ್ಕಾಗಲಿ ಬಳಸುವುದಿಲ್ಲ.

ಒಂದು ಐತಿಹ್ಯದ ಪ್ರಕಾರ ಮೈಸೂರು ದೊರೆಗಳ ಮೂಲಪುರುಷರಾದ ಯದುರಾಯ ಮತ್ತು ಕೃಷ್ಣರಾಯರು ಯಾದವಗಿರಿಗೆ ಬಂದು ಈ ಕಲ್ಯಾಣಿ ತೀರ್ಥದಲ್ಲಿ ಸ್ನಾನ ಮಾಡಿ ತಮ್ಮ ಕುಲದೈವವಾದ ಶ್ರೀ ಚಲುವನಾರಾಯಣಸ್ವಾಮಿಯವರನ್ನು ದರ್ಶನ ಮಾಡಿ ಅವರ ಅನುಗ್ರಹದಿಂದಲೆ ಮೈಸೂರು ರಾಜ್ಯವನ್ನು ಪಡೆದರು ಎಂಬ ಪ್ರತೀತಿ ಇದೆ![7]

ಆ) ತೆಪ್ಪಕೊಳ:

ಈ ಕೊಳವು ಚಲುವನಾರಾಯಣಸ್ವಾಮಿ ದೇವಸ್ಥಾನಕ್ಕೆ ಹೋಗುವಾಗ ಅಂಗಡಿ ಬೀದಿಯಲ್ಲಿ ಎಡಭಾಗಕ್ಕೆ ಸಿಗುತ್ತದೆ. ಇದು ಅತ್ಯಂತ ಪ್ರಸಿದ್ಧವಾಗಿದ್ದು, ಮೇಲುಕೋಟೆಯ ಧಾರ್ಮಿಕ ಆಚರಣೆಗಳಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸಿದ್ದಿತು. ಮೇಲುಕೋಟೆಯ ಧಾರ್ಮಿಕ ಆಚರಣೆಗಳಲ್ಲಿ ಪ್ರಸಿದ್ಧಿಯನ್ನು ಪಡೆದ ತೆಪ್ಪೋತ್ಸವವು ಈ ತೆಪ್ಪಕೊಳದಲ್ಲಿ ನಡೆಯುತ್ತಿದ್ದರಿಂದ ಇದಕ್ಕೆ 'ತೆಪ್ಪಕೊಳ'ವೆಂದು ಕರೆಯಲಾಗಿದೆ. ಈ ತೆಪ್ಪಕೊಳದ ಮಧ್ಯದಲ್ಲಿ ಮಂಟಪ ಒಂದನ್ನು ನಿರ್ಮಿಸಲಾಗಿದ್ದು, ಇದು ವಿಜಯನಗರದ ಅರಸು ಅಚ್ಚುತ ದೇವಮಹಾರಾಜರ ಕಾಲದಲ್ಲಿ ನಿರ್ಮಾಣವಾಗಿದೆ ಎಂಬುದನ್ನು ಮೇಲುಕೋಟೆಯ ಶಾಸನವೊಂದು ಉಲ್ಲೇಖಿಸಿದೆ.[8] ಪ್ರಾಯಶಃ ಈ ಕೊಳವು ವಿಜಯನಗರ ಆಳ್ವಿಕೆಯ ಕಾಲದಲ್ಲಿ, ಇಲ್ಲವೆ ಪೂರ್ವದಲ್ಲೇ ನಿರ್ಮಾಣವಾಗಿರಬಹುದಾದ ಸಾಧ್ಯತೆಗಳಿವೆ.

ಇಂದು ಇಲ್ಲಿ ತೆಪ್ಪೋತ್ಸವವು ನಡೆಯುತ್ತಿಲ್ಲ, ಕಾರಣ ಭಕ್ತಾದಿಗಳ ಸಂಖ್ಯೆ ಅಧಿಕವಾಗುತ್ತಿದ್ದು, ಸ್ಥಳಾವಕಾಶದ ಕೊರತೆ ಇರುವುದರಿಂದ, ಪ್ರಸ್ತುತದಲ್ಲಿ ತೆಪ್ಪೋತ್ಸವವು ಕಲ್ಯಾಣಿಯಲ್ಲಿ ನಡೆಯುತ್ತಿದೆ. ಧಾರ್ಮಿಕ ಆಚರಣೆಯ ಉದ್ದೇಶದಿಂದ ಇದು ನಿರ್ಮಾಣವಾಗಿದ್ದರು ಕೂಡ ಎಲ್ಲಾ ವರ್ಗದ ಜನರಿಗೂ ಇಲ್ಲಿ ಪ್ರವೇಶವಿದೆ. ಇದು ಅಂತರ್ಜಲ ಮೂಲವಾದ ಕಾರಣ ಸದಾಕಾಲ ನೀರಿನಿಂದ ಕೂಡಿದ್ದು ಅಲ್ಲಿನ ಜನಸಾಮಾನ್ಯರಿಗೆ ಉಪಯೋಗವಾಗುತ್ತಿದೆ.

೯) ಅಕ್ಕ–ತಂಗಿ ಕೊಳ (ಚಲುವೆಅರಸಿನ ಕೊಳಗಳು) :

ಇದು ಮೇಲು ಕೋಟೆಯ ದಕ್ಷಿಣಕ್ಕೆ ಚಲುವನಾರಾಯಣಸ್ವಾಮಿ ದೇವಾಲಯದ ಸಮೀಪದಲ್ಲಿ ಧನುಷ್ಕೋಟಿಗೆ ಹೋಗುವ ಮಾರ್ಗ ಮಧ್ಯದಲ್ಲಿದೆ. ಇವು ಮೇಲಕೋಟೆಯಲ್ಲಿನ ಪ್ರಸಿದ್ಧವಾದ ಪುಷ್ಕರಣಿಗಳಾಗಿವೆ. ಇವು ಅವಳಿ ಕೊಳವಾಗಿದ್ದು ಪಕ್ಕಪಕ್ಕದಲ್ಲಿ ಜಂಟಿಯಾಗಿ ನಿರ್ಮಿತವಾಗಿವೆ. ಇಲ್ಲಿನ ಒಂದು ಕೊಳದ ನೀರು ಕಲುಷಿತವಾಗಿದ್ದು ಮತ್ತೊಂದು ಕೊಳದ ನೀರು ಚೆನ್ನಾಗಿದೆ. ಇದಕ್ಕೆ ಜಾನಪದ ಕತೆಯೊಂದಿದ್ದು, ಅಕ್ಕ–ತಂಗಿಯರಿಬ್ಬರು ಸಾರ್ವಜನಿಕರ ಉಪಯೋಗಕ್ಕಾಗಿ (ಪುಣ್ಯದ ಕೆಲಸವೆಂದು) ಈ ಕೊಳವನ್ನ ನಿರ್ಮಿಸಿದರು. ಅಕ್ಕನು ಕೊಳದ ಖರ್ಚನ್ನು ಲೆಕ್ಕಹಾಕಿದಳು ಅದಕ್ಕಾಗಿ ಆ ಕೊಳದ ನೀರು ಕಲುಷಿತವಾಗಿಯೂ, ತಂಗಿಯು ಇದು ಪುಣ್ಯ ಸಂಪಾದನೆಗಾಗಿ ನಿರ್ಮಿಸಿದ್ದು ಎಷ್ಟಾದರು ಆಗಲಿ ನಾನು ಲೆಕ್ಕ ಹಾಕುವುದಿಲ್ಲವೆಂದು ಹೇಳಿದಳು ಅದಕ್ಕಾಗಿ ಈ ನೀರು ಶುಭ್ರವಾಗಿದೆ ಎಂಬ ಪ್ರತೀತಿ ಇದೆ![9]

ವಾಸ್ತವವಾಗಿ ಈ ಕೊಳವನ್ನು ಚಲುವೆಅರಸಿನ ಕೊಳಗಳು ಎಂದು ಕರೆಯಲಾಗಿದ್ದು ಚಲುವರಾಜಅರಸು ಎಂಬ ಶ್ರೀಮಂತನು (ಮೈಸೂರು ಅರಸರ ಮನೆತನದವರು) ಈ ಅವಳಿಕೊಳವನ್ನು ನಿರ್ಮಿಸಿದನು.[10] ವಾಸ್ತವವಾಗಿ ಇದನ್ನು ಗಮನಿಸಿದರೆ ಮೊದಲ ಕೊಳ ಕಲುಷಿತವಾಗಿದ್ದರೆ, ಎರಡನೆಯ ಕೊಳ ಶುಭ್ರವಾಗಿದ್ದು, ಒಂದು ಕೊಳವನ್ನು ದೇಹ ಶುಚಿಗೂ ಮತ್ತೊಂದನ್ನು ಕುಡಿಯಲು ನಿರ್ಮಾಣಮಾಡಲಾಗಿದೆ. ಈ ಕೊಳಗಳು ಪಕ್ಕಪಕ್ಕದಲ್ಲಿ ನಿರ್ಮಾಣವಾಗಿರುವುದರಿಂದ ಸ್ಥಳೀಯರು ಸಾಮಾನ್ಯವಾಗಿ ಅಕ್ಕ–ತಂಗಿ ಕೊಳವೆಂದು ಕರೆಯಲು ರೂಢಿಮಾಡಿಕೊಂಡಿದ್ದಾರೆ ಎಂದು ಹೇಳಬಹುದು. ಬೆಟ್ಟದ ಕೆಳಗೆ ಎರಡು ಪುಟ್ಟ ಅವಳಿಕೊಳಗಳಿದ್ದು, ಆ ಕೊಳಗಳೆ ನಿಜವಾದ ಅಕ್ಕ–ತಂಗಿ ಕೊಳಗಳಾಗಿವೆ ಎಂಬುದು ಸ್ಥಳೀಯರಲ್ಲಿ ಕೆಲವರ ಅಭಿಪ್ರಾಯ!

ಈ ಕೊಳಗಳು ಚೌಕಾಕಾರವಾಗಿದ್ದು, ನಯವಾದ ಚಪ್ಪಡಿಕಲ್ಲುಗಳಿಂದ ಸೋಪಾನಗಳನ್ನು ನಿರ್ಮಿಸಲಾಗಿದೆ. ಅಕ್ಕನ ಕೊಳ ಸ್ವಲ್ಪ ಚಿಕ್ಕದಾಗಿದ್ದು ತಂಗಿಯ ಕೊಳವು

ಸ್ವಲ್ಪ ದೊಡ್ಡದಾಗಿ ನಿರ್ಮಾಣವಾಗಿದೆ. ತಂಗಿಯ ಕೊಳದ ಮೆಟ್ಟಿಲುಗಳಲ್ಲಿ ಆನೆ, ಮೊಸಳೆ, ಮೀನು, ಸರ್ಪಗಳು, ಒಂಟೆ, ಹಂಸ, ಕೊಕ್ಕರೆ ಮೊದಲಾದ ಪ್ರಾಣಿಪಕ್ಷಿಗಳ ಚಿತ್ರಗಳನ್ನು ಆಂಜನೇಯನ ಪ್ರತಿಮೆಯನ್ನು ಕೆತ್ತಲಾಗಿದೆ. ಅಕ್ಕನ ಕೊಳದಲ್ಲಿ ಹಾವು ಮತ್ತು ಮೀನುಗಳ ಚಿತ್ರ ಬಿಟ್ಟರೆ ಬೇರೆ ಯಾವ ಚಿತ್ರವು ಕಾಣುವುದಿಲ್ಲ. ತಂಗಿಯ ಕೊಳದ ದಡದಲ್ಲಿ ಕುಲಶೇಕರ್ ಆಳ್ವಾರರ ಮಂದಿರವಿದೆ.

ಇದು ಮಳೆಯ ನೀರಿನ ಆಶ್ರಯದಿಂದ ನಿರ್ಮಿತವಾಗಿದೆ. ಪಕ್ಕದಲ್ಲೇ ಇರುವ ಬಂಡೆಗಳ ಮೇಲಿನ ನೀರು ಮಳೆ ಬಂದಾಗ ಇಲ್ಲಿಗೆ ಬಂದು ಸೇರುತ್ತದೆ. ಇದಕ್ಕೆಂದೇ ಸಂಸ್ಕೃತ ಸಂಶೋಧನ ಸಂಸತ್‌ನ ಒಳಭಾಗದಿಂದ ಕಾಲುವೆಯನ್ನು ನಿರ್ಮಾಣ ಮಾಡಿ ಇಲ್ಲಿಗೆ ಸಂಪರ್ಕ ಕಲ್ಪಿಸಲಾಗಿದೆ. ಈಗ ಕಾಲುವೆಯು ಭೂಮಿಯ ಒಳಗೆ ಹೂತು ಹೋಗಿರುವುದರಿಂದ ಹೊರಭಾಗದಲ್ಲಿ ಕಾಣುವುದಿಲ್ಲ. ಕಲುಷಿತಗೊಂಡಿರುವ ಕೊಳದ ನೀರನ್ನು ಕುಡಿಯಲು ಬಳಸುವುದಿಲ್ಲ, ಶುಭ್ರವಾಗಿರುವ ಕೊಳದ ನೀರು ಕುಡಿಯಲು ಇಂದಿಗೂ ಬಳಕೆ ಆಗುತ್ತಿದೆ. ಶುಭ್ರವಾಗಿರುವ ಕೊಳದ ನೀರನ್ನು ಪ್ರತಿದಿನವೂ ಚಲುವರಾಯಸ್ವಾಮಿ ದೇವಾಲಯಕ್ಕೆ ತೆಗೆದು ಕೊಂಡು ಹೋಗಿ ದೇವರನ್ನು ಶುಚಿಗೊಳಿಸುತ್ತಾರೆ.

ಈ) ಪುಟ್ಟನರಸಿ ಕೊಳ:

ಇದು ಮೇಲುಕೋಟೆಯಲ್ಲಿ ಚಲುವನಾರಾಯಣಸ್ವಾಮಿ ಸನ್ನಿಧಿಗೆ ಹೋಗುವಾಗ ಬಲಭಾಗಕ್ಕೆ ಬಸ್‌ನಿಲ್ದಾಣದ ಪಕ್ಕದಲ್ಲಿ ಹೇಮಾವತಿ ಕಾಲೋನಿಯ ಒಳಗೆ ಸಿಗುತ್ತದೆ. ಇಲ್ಲಿ ಪುಟ್ಟನರಸಿ ಎಂಬ ವೇಶ್ಯೆಯೊಬ್ಬಳು ಪುಣ್ಯ ಸಂಪಾದನೆಗಾಗಿ ಕೊಳವೊಂದನ್ನು ನಿರ್ಮಿಸಿದಳು ಆ ಕೊಳವೆ 'ಪುಟ್ಟನರಸಿ'ಕೊಳ.[11] ಮೇಲುಕೋಟೆಯ ಒಂದು ಶಾಸನದಲ್ಲಿ ಈಕೆ ನರಸಿಂಹದೇವಾಲಯಕ್ಕೆ ಕೊಟ್ಟ ಬೆಳ್ಳಿ ತೀರ್ಥದ ಬಟ್ಟಲ ಉಲ್ಲೇಖವಿದೆ.[12] ಮೊದಲು

ಈ ಕೊಳದ ಸುತ್ತಲೂ ತೋಟವಿದ್ದು, ಇಲ್ಲಿಂದ ಹೂವು ಮತ್ತು ತುಳಸಿಯನ್ನು ದೇವಾಲಯಕ್ಕೆ ಪ್ರತಿದಿನವೂ ಪೂಜೆಗಾಗಿ ತರಲಾಗುತ್ತಿತ್ತು.

ಇದು ಚೌಕಾಕಾರವಾಗಿದ್ದು ನಯವಾದ ಚಪ್ಪಡಿ ಕಲ್ಲುಗಳಿಂದ ನಿರ್ಮಾಣವಾಗಿದೆ. ತೆಪ್ಪಕೊಳದಲ್ಲಿ ತೆಪ್ಪೋತ್ಸವ ನಡೆಸುವುದನ್ನು ನಿಲ್ಲಿಸಿದ ಮೇಲೆ ಇಲ್ಲೇ ಸ್ವಲ್ಪ ದಿನಗಳ ಕಾಲ ತೆಪ್ಪೋತ್ಸವ ನಡೆಸುತ್ತಿದ್ದರು. ಈಗಲೂ ಸಹ ಕೆಲವು ಸ್ಥಳೀಯರ ಮಾತಿನಲ್ಲಿ 'ಬಸ್‌ಸ್ಟ್ಯಾಂಡ್ ತೆಪ್ಪಕೊಳ' ಎಂದೇ ಈ ಕೊಳ ಗುರುತಿಸಿಕೊಂಡಿದೆ.

ಮೊದಲು ಈ ಕೊಳದ ನೀರನ್ನು ಕುಡಿಯಲು ಉಪಯೋಗಿಸುತ್ತಿದ್ದರು ಆದರೆ ಈಗ ಇಲ್ಲಿಯ ನೀರನ್ನು ಕುಡಿಯಲು ಉಪಯೋಗಿಸುತ್ತಿಲ್ಲ. ಇದು ಅಂತರ್ಜಲ ಮತ್ತು ಮಳೆಯ ಆಶ್ರಯದಿಂದ ತುಂಬುತ್ತದೆ. ಸುತ್ತಮುತ್ತಲಿನ ಎತ್ತರ ಪ್ರದೇಶದ ಮಳೆಯ ನೀರು ಇಲ್ಲಿಗೆ ಬಂದು ಸೇರುತ್ತದೆ.

2. ಅಷ್ಟ ತೀರ್ಥಗಳು :

ಮೇಲುಕೋಟೆಯಲ್ಲಿ ಪ್ರಸಿದ್ಧಿ ಪಡೆದ ಮತ್ತೊಂದು ಬಹುಮುಖ್ಯ ಧಾರ್ಮಿಕ ಆಚರಣೆ ಎಂದರೆ 'ಅಷ್ಟತೀರ್ಥೋತ್ಸವ'. ಈ ಅಷ್ಟತೀರ್ಥೋತ್ಸವವನ್ನು ವೇದ ಪುಷ್ಕರಣಿ–ಧನುಷ್ಕೋಟಿ, ಯಾದವತೀರ್ಥ, ದರ್ಭತೀರ್ಥ, ಪಲಾಶತೀರ್ಥ, ಪದ್ಮತೀರ್ಥ, ಮೈತ್ರೇಯತೀರ್ಥ, ನಾರಾಯಣತೀರ್ಥ ಮತ್ತು ವೈಕುಂಠಗಂಗೆ ಅಥವಾ ತೊಟ್ಟಿಲಮಡು ಎಂಬಲ್ಲಿ ನಡೆಸಲಾಗುತ್ತದೆ.

ಅ) ವೇದಪುಷ್ಕರಣಿ:

ಇದು ಮೇಲುಕೋಟೆಗೆ ದಕ್ಷಿಣ ದಿಕ್ಕಿನಲ್ಲಿದ್ದು ಅಷ್ಟತೀರ್ಥಗಳಲ್ಲಿ ಒಂದಾಗಿದೆ. ತ್ರೇತಾಯುಗದಲ್ಲಿ ಶ್ರೀ ಮಹಾವಿಷ್ಣುವು ದತ್ತಾತ್ರೇಯನ ಅವತಾರವನ್ನೆತ್ತಿದನು. ಈ ದತ್ತಾತ್ರೇಯರು ತಮ್ಮ ನಾಲ್ಕು ಜನ ಶಿಷ್ಯರಿಗೆ ನಾಲ್ಕು ವೇದಗಳನ್ನು ಇಲ್ಲಿ ಉಪದೇಶಿಸಿದ್ದ

ರಿಂದ ಈ ಪುಷ್ಕರಣಿ(ಕೊಳ)ಯನ್ನು 'ವೇದಪುಷ್ಕರಣಿ' ಎನ್ನುವರು.[13] ಈ ಸ್ಥಳವು 'ಪರಿಧಾನ ಶಿಲಾಕ್ಷೇತ್ರ'ವೆಂದೇ ಹೆಸರಾಗಿದೆ. ಕಾರಣ ಕೊಳದ ದಡದಲ್ಲಿ ಒಂದು ಮಂಟಪ; ಒಳಗೆ ದತ್ತಾತ್ರೇಯ ಮತ್ತು ನಾಲ್ಕು ಶಿಷ್ಯರ ಶಿಲ್ಪ ಕೆತ್ತನೆ ಗೋಡೆಯಲ್ಲಿದೆ. ಅಲ್ಲದೆ ಇಲ್ಲಿ ಅವರ ಶ್ರೀಪಾದಗಳಿರುವ ಒಂದು ಕಲ್ಲು ಇದೆ. ಈ ಕಲ್ಲಿನ ಮೇಲೆ ಶ್ರೀರಾಮಾನುಜರು ಕಾಷಾಯವಸ್ತ್ರವನ್ನಿಟ್ಟು ಸ್ವೀಕರಿಸಿದ್ದರಿಂದ ಇದನ್ನು "ಪರಿಧಾನಶಿಲೆ" ಎನ್ನುತ್ತಾರೆ.[14] ಸಾಮಾನ್ಯವಾಗಿ ಸನ್ಯಾಸಿಯಾಗ ಬೇಕಾದವರು, ಒಬ್ಬ ಹಿರಿಯ ಸನ್ಯಾಸಿಯಿಂದಲೇ ಕಾಷಯವಸ್ತ್ರಗಳನ್ನು ಸ್ವೀಕರಿಸಿ, ಸನ್ಯಾಸದೀಕ್ಷೆ ಪಡೆಯಬೇಕೆಂಬ ನಿಯಮವಿದೆ. ಆದರೆ ಇಲ್ಲಿ ಸನ್ಯಾಸಿಯಾಗಬೇಕಾದವರು ಈ ಪರಿಧಾನಶಿಲೆಯ ಮೇಲೆ ಕಾಷಾಯವಸ್ತ್ರವನ್ನಿಟ್ಟು ಅದನ್ನು ತಾವೇ ಸ್ವೀಕರಿಸಿ ಸನ್ಯಾಸದೀಕ್ಷೆ ಪಡೆಯಬಹುದಾಗಿದೆ. ಇದು ಇಲ್ಲಿನ ಕ್ಷೇತ್ರದ ವೈಶಿಷ್ಟ. ಇಂದಿಗೂ ಇದರ ಮಹಿಮೆ ತಿಳಿದ ಸದ್ಭಕ್ತರು (ಸನ್ಯಾಸಿಗಳು) ಇಲ್ಲಿಯೇ ಕಾಷಾಯವಸ್ತ್ರವನ್ನಿಟ್ಟು ಧರಿಸುತ್ತಾರೆ.[15]

ಈ ಪುಷ್ಕರಣಿಯು ಚೌಕಾಕಾರದಲ್ಲಿ ನಯವಾದ ಚಪ್ಪಡಿ ಕಲ್ಲುಗಳಿಂದ ನಿರ್ಮಾಣವಾಗಿದ್ದು ಹದಿನೆಂಟು ಮೆಟ್ಟಿಲುಗಳನ್ನು ಒಳಗೊಂಡಿದೆ. ಉದ್ದ ಮತ್ತು ಅಗಲ ತೊಂಬತ್ತು ಅಡಿ ಅಳತೆಯಿಂದ ಕೂಡಿದೆ. ಇದು ಅಂತರ್ಜಲದಿಂದ ಕೂಡಿದ್ದರೂ, ಪ್ರಸ್ತುತದಲ್ಲಿ ಬೇಸಿಗೆಯಲ್ಲಿ ಒಣಗಿ ಮಳೆಗಾಲದಲ್ಲಿ ತುಂಬುತ್ತದೆ. ಹಿಂದೆ ಕುಡಿಯಲು ಯೋಗ್ಯವಾಗಿದ್ದು ಪ್ರಸ್ತುತದಲ್ಲಿ ಕಲುಷಿತವಾಗಿರುವುದರಿಂದ ಕುಡಿಯಲು ಉಪಯೋಗ ವಿಲ್ಲ, ಪ್ರಾಣಿಗಳಿಗೆ ಮಾತ್ರ ಕುಡಿಯಲು ಉಪಯೋಗವಾಗುತ್ತಿದೆ.

ಧನುಷ್ಕೋಟಿ:

ಇದು ಮೇಲುಕೋಟೆಯ ದಕ್ಷಿಣಕ್ಕೆ ವೇದಪುಷ್ಕರಣಿಯಿಂದ ಸ್ವಲ್ಪ ಮುಂದೆ ಹೋದರೆ ಎಡಭಾಗದಲ್ಲಿದೆ. ಇದೊಂದು ಚಿಕ್ಕ ಬೆಟ್ಟವಾಗಿದ್ದು, ಬಹಳ ಸುಂದರವೂ ಪಾವಿತ್ರ್ಯವೂ ಆದ ಸ್ಥಳವಾಗಿದೆ. ಇದು ಅಷ್ಟತೀರ್ಥಗಳಲ್ಲಿ ಸೇರದಿದ್ದರೂ,

ಅಷ್ಟತೀರ್ಥೋತ್ಸವದಲ್ಲಿ ಇಲ್ಲಿಗೂ ದೇವರ ಪಾದುಕೆಯನ್ನು ತೆಗೆದುಕೊಂಡು ಹೋಗುತ್ತಾರೆ. ಇಲ್ಲಿನ ಬೃಹತ್ ಬಂಡೆಯಲ್ಲಿ ಸುರಂಗವನ್ನು ಕೊರೆದಂತಿದೆ. ಶ್ರೀರಾಮಚಂದ್ರರು ಸೀತಾದೇವಿಗೆ ಸ್ನಾನಕ್ಕೆ ನೀರು ಬರಿಸಲು ತನ್ನ ಧನುಷನ್ನು ಪ್ರಯೋಗ ಮಾಡಿ ನೀರು ಬರಿಸಿದನೆಂಬ ಪ್ರತೀತಿ ಇದೆ![16] ಇದಕ್ಕಾಗಿ ಈ ಸ್ಥಳವನ್ನು "ಧನುಷ್ಕೋಟಿ" ಎನ್ನುವರು. ಇದೇ ಬಂಡೆಯಲ್ಲಿ ರಾಮ, ಲಕ್ಷ್ಮಣ, ಸೀತಾದೇವಿಯನ್ನು ಕೆತ್ತಲಾಗಿದೆ. ಇದರ ಪಕ್ಕದಲ್ಲಿಯೇ ರಾಮದೇವರ ದೇವಸ್ಥಾನವನ್ನು ನಿರ್ಮಿಸಲಾಗಿದೆ.

ಮತ್ತೊಂದು ಐತಿಹ್ಯ ರೂಪದ ಜಾನಪದಕತೆಯ ಸ್ವರೂಪ ಹೊಂದಿದೆ. 'ಡೆಲ್ಲಿ'ಯಿಂದ ವರನಂದಮ್ಮ ಬರುವಾಗ ಹೊರಗಾಗಿ ಬಿಟ್ಟಳು, ಆಗ "ನಿಮ್ಮೂರಿನಲ್ಲಿ ನನಗ್ಯಾರು ನೀರು ಹಾಕೋರು" ಎಂದು ಸ್ವಾಮಿಯನ್ನು ಕೇಳಿದಳು. "ಚಿಂತೆಇಲ್ಲ ಸುಮ್ಮನಿರು, ನಿಮ್ಮ ಅಣ್ಣ ಕುಂಟಸಿಂಗ್ರಿಯಿದ್ದಾನೆ, (ಯೋಗಾನರಸಿಂಹಸ್ವಾಮಿಯನ್ನು ಸ್ಥಳೀಯರು ಕುಂಟಸಿಂಗ್ರಿ ಎಂದು ಕರೆಯುತ್ತಾರೆ) ನೀರು ತಂದು ಕೊಡುತ್ತಾನೆ" ಎಂದನು. ಆಗ ಕುಂಟಸಿಂಗ್ರಿ ಬಾಣಬಿಟ್ಟು ಬಂಡೆಯ ಬುಡದಿಂದ ನೀರು ಚಿಮ್ಮುವಂತೆ ಮಾಡಿ ಅವಳ ಸ್ನಾನಕ್ಕೆ ವ್ಯವಸ್ಥೆ ಮಾಡಿಕೊಟ್ಟನು, ನಂತರ ಅದು 'ಧನುಷ್ಕೋಟಿ'ಯಾಯಿತು.[17] ಇಲ್ಲಿ ಸದಾ ನೀರಿದ್ದು ಬೇಸಿಗೆಯಲ್ಲೂ ಸಹ ನೀರು ಬತ್ತುವುದಿಲ್ಲ.

ಆ) ಯಾದವ ತೀರ್ಥ:

ಈ ತೀರ್ಥವು ಮೇಲುಕೋಟೆಯ ನೈರುತ್ಯ ದಿಕ್ಕಿಗಿದ್ದು, ಇದರ ಪಶ್ಚಿಮದಲ್ಲಿ "ಯಾದವಿನದಿ" ಎಂಬ ತೊರೆಯು ಹರಿಯುತ್ತಿದ್ದು ಇದನ್ನು 'ಯಾದವತೀರ್ಥ'ವೆಂದು ಕರೆದರು. ಇನ್ನೊಂದು ಐತಿಹ್ಯದ ಪ್ರಕಾರ ಈ ತೀರದಲ್ಲಿ 'ಯಾದವೇಂದ್ರ' ಎಂಬ ದೊರೆಯು ಯಾಗಮಾಡಿ ಸ್ವರ್ಗವನ್ನು ಪಡೆದನು. ಇದರಿಂದಾಗಿ ಇದಕ್ಕೆ 'ಯಾದವತೀರ್ಥ'ವೆಂದು ಕರೆದರು ಎಂಬ ಪ್ರತೀತಿ ಇದೆ.[18] ಮತ್ತೊಂದು ಐತಿಹ್ಯದ ಪ್ರಕಾರ

ಯಾದವರು–ಯದುವಂಶದ ದೊರೆಗಳಿಂದ ನಿರ್ಮಿತವಾದ ಈ ತೀರ್ಥ ಯಾದವ ತೀರ್ಥವಾಯಿತು.[19]

ಈ ತೀರ್ಥವು ಚೌಕಾಕಾರದಲ್ಲಿ ನಯವಾದ ಚಪ್ಪಡಿ ಕಲ್ಲುಗಳಿಂದ ನಿರ್ಮಾಣವಾಗಿದೆ. ಎಲ್ಲಾ ತೀರ್ಥಗಳಿಗೆ ಹೋಲಿಸಿದರೆ ಹೆಚ್ಚು ಮಲಿನವಾಗಿರುವುದೆ ಈ ತೀರ್ಥ. ಇದು ಅಂತರ್ಜಲ ಮತ್ತು ಮಳೆಯ ಆಶ್ರಯದಿಂದಲೂ ತುಂಬುತ್ತದೆ. ಸುತ್ತಲು ಕುರುಚಲುಗಿಡಗಳು ಪೊದೆಯಂತೆ ಬೆಳೆದುಕೊಂಡು ಮುಚ್ಚಿ ಹೋಗಿದೆ. ಇದರ ಸುತ್ತಲು ಸ್ವಲ್ಪಮಟ್ಟಿನ ಕೃಷಿ ಜಮೀನು ಇದ್ದು ಬೆಳೆಗೆ ನೀರಿನ ಕೊರತೆ ಉಂಟಾದಾಗ ಇದರ ನೀರನ್ನು ಬಳಸಿಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ತುಂಬಾ ಕಲುಷಿತವಾಗಿದ್ದು, ಕುಡಿಯಲು ಯೋಗ್ಯವಿಲ್ಲ, ಜೊತೆಗೆ ಕೃಷಿಗಾಗಲಿ, ಜನಸಾಮಾನ್ಯರಿಗಾಗಲಿ, ಜಾನುವಾರುಗಳಿಗಾಗಲಿ ಸರಿಯಾಗಿ ಉಪಯೋಗವಾಗುತ್ತಿಲ್ಲ. ಕಾರಣ ನೀರಿನಲ್ಲಿ ಬೆಳೆಯಬಹುದಾದ ಸಸ್ಯಗಳೆಲ್ಲಾ ಬೆಳೆದು ನೀರೆ ಕಾಣದಂತಾಗಿದೆ. ಇದನ್ನು ವರ್ಷಕ್ಕೆ ಒಂದು ಬಾರಿ ಅಷ್ಟತೀರ್ಥೋತ್ಸವಗಳ ಸಂದರ್ಭದಲ್ಲಿ ಮಾತ್ರ ತಮ್ಮ ಅವಶ್ಯಕತೆಯ ಮಟ್ಟಿಗೆ ಸ್ವಚ್ಛಗೊಳಿಸಿಕೊಳ್ಳುತ್ತಾರೆ.

೩) ದರ್ಭತೀರ್ಥ:

ಯಾದವತೀರ್ಥದಿಂದ ಉತ್ತರಕ್ಕೆ ಸ್ವಲ್ಪ ದೂರ ಬಂದರೆ ದರ್ಭತೀರ್ಥ ಸಿಗುತ್ತದೆ. ಇದು ಬೆಟ್ಟದ ತಳಭಾಗದಲ್ಲಿ ಪಶ್ಚಿಮ ದಿಕ್ಕಿಗಿದೆ. ದತ್ತಾತ್ರೇಯರು ಈ ತೀರ್ಥದ ತೀರದಲ್ಲಿ ಬೆಳೆದಿದ್ದ ದರ್ಭೆ ಹುಲ್ಲುಗಳನ್ನು ತಮ್ಮ ನಿತ್ಯಾನುಷ್ಠಾನಕ್ಕಾಗಿ ತೆಗೆದು ಕೊಳ್ಳುತ್ತಿದ್ದರಿಂದ ಇದಕ್ಕೆ "ದರ್ಭತೀರ್ಥ" ಎಂದು ಹೆಸರು. ಇಲ್ಲಿ ಶಾಂಡಿಲ್ಯ ಮುನಿಗಳು ತಪಸ್ಸು ಮಾಡಿದರು ಎಂಬ ಪ್ರತೀತಿ ಇದೆ![20] ಇಲ್ಲಿ ಸ್ನಾನ ಮಾಡಿದವರ ಎಲ್ಲಾ ದೋಷಗಳು ನೀಗಿ ಅವರು ಪರಿಶುದ್ಧರಾಗುತ್ತಾರೆ ಎಂಬುದು ಸ್ಥಳೀಯರ ನಂಬಿಕೆ. ಈ ಕೊಳವು ಚೌಕಾಕಾರದಲ್ಲಿದ್ದು ನಯವಾದ ಚಪ್ಪಡಿಗಳ ಅಳವಡಿಕೆಯಿಂದ ನಿರ್ಮಿತವಾಗಿದೆ. ಉದ್ದ ಮತ್ತು ಅಗಲ ಸಮನಾಗಿ ಐವತ್ತು ಅಡಿಗಳಿವೆ. ಇದರ ಸುತ್ತಲು ಮರಗಳು ಬೆಳೆದು,

ಅದರ ಎಲೆ ಮತ್ತು ಹೂವುಗಳು ನೀರಿನ ಮೇಲೆ ಬೀಳುವುದರಿಂದ ನೀರು ಕಲುಷಿತವಾಗಿದ್ದು, ಕುಡಿಯಲು ಬಳಸುತ್ತಿಲ್ಲ. ಜೊತೆಗೆ ಕೃಷಿಯ ಬಳಕೆಗೂ ಅಷ್ಟೇನು ಉಪಯೋಗವಿಲ್ಲ. ಇದರ ಪಕ್ಕದಲ್ಲೇ ಹಳ್ಳವಿದ್ದು, ಈ ಕೊಳ ತುಂಬಿ ಹರಿದಾಗ ಹಳ್ಳಕ್ಕೆ ಸೇರುತ್ತದೆ.

ಈ) ಪಲಾಶತೀರ್ಥ:

ದರ್ಭತೀರ್ಥದ ಉತ್ತರಕ್ಕೆ ಸ್ವಲ್ಪ ಮುಂದೆ ಹೋದರೆ ಈ 'ಪಲಾಶತೀರ್ಥ' ಸಿಗುತ್ತದೆ. ಇಲ್ಲಿ ಮುತ್ತುಗದ ಮರಗಳಿರುವುದರಿಂದ ಈ ಹೆಸರು ಬಂದಿದೆ. ವಿಶ್ವಾಮಿತ್ರರಿಂದ ಶಾಪಗ್ರಸ್ಥರಾದ ವಸಿಷ್ಠರ ಪುತ್ರರು ಇಲ್ಲಿ ಸ್ನಾನಮಾಡಿ ಶಾಪವಿಮೋಚನೆಯನ್ನು ಹೊಂದಿದರು ಎಂಬ ಪ್ರತೀತಿ ಇದೆ! ಇದನ್ನು 'ಪತಿತಪಾವನತೀರ್ಥ'ವೆಂತಲೂ ಕರೆಯುವರು.[21]

ಇದು ಚೌಕಾಕಾರದಲ್ಲಿ ನಯವಾದ ಚಪ್ಪಡಿಗಳಿಂದ ನಿರ್ಮಿತವಾಗಿದ್ದು, ಇದರ ಉದ್ದ ಮತ್ತು ಅಗಲ ಸಮನಾಗಿ ತೊಂಭತ್ತಮೂರು ಅಡಿಗಳಿವೆ. ಇಳಿಯಲು ಎರಡು ಕಡೆ ಮೆಟ್ಟಿಲುಗಳಿದ್ದು 'ಭದ್ರ' ಮಾದರಿಗೆ ಸೇರಿದ್ದಾಗಿದೆ. ಇದು ಮಳೆಯ ಆಶ್ರಯ ಮತ್ತು ಅಂತರ್ಜಲಗಳಿಂದ ಕೂಡಿದ್ದು ಸದಾ ನೀರು ಇರುತ್ತದೆ. ಆದರೆ ಜನರಿಗೆ ಕುಡಿಯಲು ಉಪಯೋಗವಿಲ್ಲದಿದ್ದರು ಪ್ರಸ್ತುತದಲ್ಲಿ ಇದು ಬಟ್ಟೆ-ಪಾತ್ರೆ ತೊಳೆಯಲು, ಪ್ರಾಣಿಗಳಿಗೆ ಕುಡಿಯಲು ಉಪಯೋಗವಾಗುತ್ತಿದೆ. ಇಲ್ಲಿ ಕೃಷಿಗೆ ಒಳಪಟ್ಟ ಸ್ವಲ್ಪ ಮಟ್ಟಿನ ಜಮೀನು ಇದ್ದು ಅಲ್ಲಿನ ಕೃಷಿಕರು ಬಳಸಿಕೊಳ್ಳಬಹುದಾಗಿದೆ.

ಉ) ಪದ್ಮತೀರ್ಥ:

ಇದು ಪಲಾಶತೀರ್ಥದ ಉತ್ತರಕ್ಕೆ ಸ್ವಲ್ಪ ದೂರದಲ್ಲಿದ್ದು, ಇಲ್ಲಿ ಬಹಳ ಹಿಂದೆ ಪದ್ಮ(ಕಮಲ)ಗಳು ಬೆಳೆಯುತ್ತಿದ್ದರಿಂದ ಇದನ್ನು 'ಪದ್ಮತೀರ್ಥ'ವೆಂದು ಕರೆದರು. ಇಲ್ಲಿ

[illegible]
[illegible]

ಬೆಳೆದ ಕಮಲದ ಹೂಗಳಿಂದ ಶ್ರೀಮನ್ನಾರಾಯಣನಿಗೆ ನಿತ್ಯಾರ್ಚನೆ ಮಾಡುತ್ತಿದ್ದರು. ಇಲ್ಲಿಯ ಕಮಲಮಣಿ (ಕಮಲದ ಹೂವಿನ ಬೀಜಗಳು)ಗಳಿಂದ ಮಾಡಿದ ಸರವನ್ನು ಧರಿಸಿದವರಿಗೆ ಮೋಕ್ಷವುಂಟಾಗುವುದು ಎಂಬ ನಂಬಿಕೆ ಭಕ್ತರಲ್ಲಿ ಮನೆ ಮಾಡಿತ್ತು.[22] ಇಂದು ಇಲ್ಲಿ ಕಮಲವು ಇಲ್ಲ ಕಮಲದ ಬೀಜವು ಇಲ್ಲ!

ಈ ಕೊಳವು ಚೌಕಾಕಾರವಾಗಿದ್ದು, ಸುತ್ತಲು ನಯವಾದ ಚಪ್ಪಡಿಗಳಿಂದ ಸೋಪಾನವನ್ನು ನಿರ್ಮಾಣಮಾಡಲಾಗಿದೆ. ಇದರ ಉದ್ದ ಮತ್ತು ಅಗಲ ಎಪ್ಪತ್ತನಾಲ್ಕು ಅಡಿಗಳಿದ್ದು, ಇದು ಅಂತರ್ಜಲ ಮತ್ತು ಮಳೆಯ ನೀರಿನಿಂದ ತುಂಬಿರುತ್ತದೆ. ಸುತ್ತಲು ಮರಗಳು ಬೆಳೆದಿರುವುದರಿಂದ ಅವುಗಳ ಎಲೆ ಮತ್ತು ಹೂವು ಕಾಯಿಗಳು ಉದುರಿ ನೀರು ಕಲುಷಿತವಾಗಿದ್ದು ಕುಡಿಯಲು ಯೋಗ್ಯವಿಲ್ಲ. ಇದರ ಸುತ್ತ ವ್ಯವಸಾಯಕ್ಕೆ ಒಳಪಟ್ಟ ಭೂಮಿಯಿದ್ದು ಇಲ್ಲಿಯ ನೀರನ್ನು ಸ್ವಲ್ಪ ಮಟ್ಟಿಗೆ ಬಳಸುತ್ತಾರೆ. ಜನರಿಗೆ ಬಟ್ಟೆ, ಪಾತ್ರೆ ತೊಳೆಯಲು, ದನಕರುಗಳಿಗೆ ನೀರು ಕುಡಿಸಲು ಹೆಚ್ಚು ಉಪಯೋಗವಾಗುತ್ತಿದೆ. ಇದರ ಸೋಪಾನದ ಕಲ್ಲುಗಳು ಶಿಥಿಲಾವಸ್ಥೆಯನ್ನು ಬಹುಬೇಗ ತಲುಪುವಂತಿವೆ.

ಊ) ಮೈತ್ರೇಯ ತೀರ್ಥ:

ಕಲ್ಯಾಣಿತೀರ್ಥದ ಉತ್ತರಕ್ಕೂ ನಾರಾಯಣತೀರ್ಥದ ದಕ್ಷಿಣಕ್ಕೂ ಮಧ್ಯದಲ್ಲಿದ್ದು ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯ ಹಿಂಭಾಗದಲ್ಲಿದೆ. ಶ್ರೀಪರಾಶರ ಮಹರ್ಷಿಯು ತಮ್ಮ ಶಿಷ್ಯರಾದ ಮೈತ್ರೇಯರಿಗೆ ವಿಷ್ಣುಪುರಾಣವನ್ನು ಉಪದೇಶಿಸಿದ್ದರಿಂದ ಇದನ್ನು ದಕ್ಷಿಣ ದೇಶದ ಆಚಾರ್ಯರು 'ಮೈತ್ರೇಯತೀರ್ಥ'ವೆಂತಲೂ, ಉತ್ತರದ ಆಚಾರ್ಯರು 'ಪರಾಶರತೀರ್ಥ'ವೆಂತಲೂ ಕರೆಯುತ್ತಾರೆ. ಆದರೆ ಮೇಲುಕೋಟೆಯ ಭಕ್ತಾದಿ ಜನಗಳು ಇದನ್ನು "ಮೈತ್ರೇಯತೀರ್ಥ"ವೆಂತಲೇ ಕರೆಯುತ್ತಾರೆ.[23]

ಈ ತೀರ್ಥವು ಚೌಕಾಕಾರದಲಿದ್ದು ನಯವಾದ ಚಪ್ಪಡಿಗಲ್ಲಿನಿಂದ ನಿರ್ಮಿತವಾಗಿದೆ. ಇದರ ಉದ್ದ ಮತ್ತು ಅಗಲ ಅರವತ್ತೊಂಭತ್ತು ಅಡಿಗಳಿವೆ. ಉತ್ತರ ದಕ್ಷಿಣವಾಗಿ ಇಳಿಯಲು ಮೆಟ್ಟಲುಗಳನ್ನು ನಿರ್ಮಿಸಲಾಗಿದ್ದು 'ಭದ್ರ' ಮಾದರಿಗೆ ಸೇರಿದ್ದಾಗಿದೆ. ಇದರ ಸಮೀಪದಲ್ಲೇ ಕಾಳಮ್ಮನ ದೇವಾಲಯವಿದ್ದು, ದೇವಸ್ಥಾನಕ್ಕೆ ಈ ನೀರನ್ನೇ ಕೊಂಡೊಯ್ಯುತ್ತಾರೆ. ಇದರ ದಡದಲ್ಲಿ ತುಳಸಿ ಕಟ್ಟೆ ಇದ್ದು, ಅಷ್ಟತೀರ್ಥೋತ್ಸವದ ಬೆಳಗ್ಗೆ ಪೂಜೆ ನಡೆಯುತ್ತದೆ. ಇದು ಪಕ್ಕದ ನಾರಾಯಣತೀರ್ಥಕ್ಕಿಂತ ಹೆಚ್ಚು ಕಲುಷಿತವಾಗಿದೆ. ಮಳೆಯ ನೀರಿನ ಆಶ್ರಯವಾದರೂ ಅಂತರ್ಜಲ ಮೂಲದಿಂದ ಸದಾ ತುಂಬಿರುತ್ತದೆ. ಎಲ್ಲಾ ವರ್ಗದ ಜನರಿಗೂ ಮುಕ್ತ ಪ್ರವೇಶವಿದ್ದು, ಕುಡಿಯಲು ಉಪಯೋಗವಾಗುತ್ತಿಲ್ಲವಾದರೂ ಊರಪಕ್ಕದಲ್ಲಿ ಇರುವುದರಿಂದ ಬಟ್ಟೆ-ಪಾತ್ರೆ ತೊಳೆಯಲು, ಪ್ರಾಣಿಗಳಿಗೆ ನೀರು ಕುಡಿಸಲು ಉಪಯೋಗವಾಗುತ್ತಿದೆ.

ಋ) ನಾರಾಯಣ ತೀರ್ಥ:

ಇದು ಯದುಶೈಲ ಪ್ರೌಢಶಾಲೆಯ ಹಿಂಭಾಗವಿದೆ. ಈ ತೀರ್ಥದ ದಕ್ಷಿಣಕ್ಕೆ ಮೈತ್ರೇಯತೀರ್ಥವು, ಪೂರ್ವಕ್ಕೆ ಪಾಂಡವರ ಗುಹೆ ಇದೆ. ಇದರ ತೀರದಲ್ಲಿ 'ವಿಷ್ಣುಚಿತ್ತ'ನೆಂಬ ಬ್ರಹ್ಮಚಾರಿಯು ತಪಸ್ಸನ್ನಾಚರಿಸುವಾಗ ಶ್ರೀಮನ್ನಾರಾಯಣನು ಪ್ರತ್ಯಕ್ಷನಾಗಿ ಮೋಕ್ಷವನ್ನು ನೀಡಿದ್ದರಿಂದ ಇದಕ್ಕೆ 'ನಾರಾಯಣತೀರ್ಥ' ಎನ್ನುವರು.[24] ಇದರ ಅಕ್ಕಪಕ್ಕದಲ್ಲಿ ಮೈತ್ರೇಯಹಳ್ಳ ಮತ್ತು ಆಂಜನೇಯನ ಗುಡಿ ಇದೆ. ಪಾಂಡವರ ಗುಹೆಯಲ್ಲಿ ನಯನಕ್ಷೇತ್ರ ನಾರಾಯಣನ ವಿಗ್ರಹವಿದೆ. ಇಲ್ಲಿಗೆ ಸ್ವಾಮಿ ಕುದುರೆ ವಾಹನದಲ್ಲಿ ವರ್ಷಕ್ಕೆ ಎರಡು ಸಲ ವಿಜಯದಶಮಿ, ಅಂಗಮಣಿ ಉತ್ಸವದಲ್ಲಿ ಬರುತ್ತಾರೆ.

ಇದು ಚೌಕಾಕಾರದಲ್ಲಿದ್ದು ನಯವಾದ ಚಪ್ಪಡಿ ಕಲ್ಲುಗಳಿಂದ ಸೋಪಾನವು ನಿರ್ಮಿತವಾಗಿದೆ. ಇದರ ಉದ್ದ ಮತ್ತು ಅಗಲ 68 ಅಡಿಗಳಿವೆ. ಇದರ ನೀರು ಮೈತ್ರೇಯ

ತೀರ್ಥದಷ್ಟು ಕಲುಷಿತವಾಗಿಲ್ಲ. ಇದರ ಪಕ್ಕದಲ್ಲಿ ಸ್ವಲ್ಪ ವ್ಯವಸಾಯಕ್ಕೆ ಒಳಪಡುವ ಭೂಮಿ ಇದ್ದರೂ ಕೃಷಿ ನಡೆಯುತ್ತಿಲ್ಲ. ಪ್ರಸ್ತುತದಲ್ಲಿ ಇದು ಕುಡಿಯಲು ಉಪಯೋಗವಿಲ್ಲ ಜನಸಾಮಾನ್ಯರಿಗೆ ಗೃಹೋಪಯೋಗಿ ಕೆಲಸಕ್ಕೆ ದನಕರುಗಳಿಗೆ ಉಪಯೋಗವಾಗುತ್ತಿದೆ.

ಎ) ವೈಕುಂಠಗಂಗೆ ಅಥವಾ ತೊಟ್ಟಿಲಮಡು:

ಮೇಲುಕೋಟೆಯ ಉತ್ತರಕ್ಕೂ, ಪೂರ್ವದ ಕಣಿವೆಯ ರಸ್ತೆಯ ಪಕ್ಕಕ್ಕೂ, ಜಕ್ಕನಹಳ್ಳಿ ಮಾರ್ಗವಾಗಿ ಮೇಲುಕೋಟೆಗೆ ಹೋಗುವಾಗ ತಿರುವಿನಲ್ಲಿ ಬಲಭಾಗಕ್ಕೆ ಸುಮಾರು 1/2 ಕಿ.ಮೀ. ದೂರದಲ್ಲಿ ಕಂಡುಬರುತ್ತದೆ. ತ್ರಿವಿಕ್ರಮಾವತಾರದಲ್ಲಿ ವಿಷ್ಣುವಿನ ಪಾದವು ಬ್ರಹ್ಮಲೋಕವನ್ನು ಮುಟ್ಟಿತು. ಆಗ ಬ್ರಹ್ಮನು ತನ್ನ ಕಮಂಡಲದ ತೀರ್ಥದಿಂದ ವಿಷ್ಣುವಿನ ಪಾದವನ್ನು ತೊಳೆದನು. ಆ ತೀರ್ಥದ ಒಂದು ಬಿಂದು ಈ ನಾರಾಯಣಗಿರಿಯ ಉತ್ತರದಲ್ಲಿ ಬಿದ್ದು, ಇದೇ 'ವೈಕುಂಠಗಂಗೆ' ಆಯಿತು ಎಂಬ ಪುರಾಣ ಕಥೆ ಇದೆ. ಈ ಸ್ಥಳದಲ್ಲಿ ಭಕ್ತಿಸಾರರೆಂಬ ಮುನಿಗಳು ಮುಕ್ತಿ ಹೊಂದಿದರು ಎಂಬ ಪ್ರತೀತಿ ಇದೆ![25]

ವಾಸ್ತವವಾಗಿ ಇದು ಅಲ್ಲಿಯೇ ಇರುವ ಚಿಕ್ಕದಾದ 'ಮುದಿಬೆಟ್ಟ' ಎಂಬಲ್ಲಿ ಹುಟ್ಟಿ, ತಾನು ಹರಿಯುವ ಬಂಡೆಯನ್ನು ತೊಟ್ಟಿಲಾಕಾರದಲ್ಲಿ ಕೊರೆದು ಸ್ವಲ್ಪ ದೂರ ಹರಿದು, ನಂತರ ಕೆಳಕ್ಕೆ ಧುಮುಕಿ ಇಲ್ಲಿ ನೀರು ಮಡುವಾಗುವುದು. ಹೀಗೆ ತನ್ನ ಸವೆತದ ಪಾತ್ರದಿಂದ ಇದು "ತೊಟ್ಟಿಲಮಡು" ಎಂಬ ಹೆಸರಿಗೆ ಖ್ಯಾತಿಯಾಗಿದ್ದು ಪ್ರೇಕ್ಷಣೀಯ ಸ್ಥಳವಾಗಿದೆ.

ಇಲ್ಲಿ ವೈಕುಂಠವಾಸಿಯಾದ ಶ್ರೀಮನ್ನಾರಾಯಣನ ಭವ್ಯ ಮೂರ್ತಿಯೂ ಹಾಗೂ ಶ್ರೀದೇವಿ-ಭೂದೇವಿ, ಸಪ್ತರ್ಷಿಗಳು ಹಾಗೂ ದೇವತೆಗಳ ಮೂರ್ತಿಯನ್ನು ಬಂಡೆಯ ಮೇಲೆ ಕೆತ್ತಲಾಗಿದೆ. ಇಲ್ಲಿಯ ನೀರು ಪನ್ನೀರಿನಂತೆ ಶುದ್ಧವಾಗಿ ಹರಿಯುವುದರಿಂದ ಜನ ಈ ನೀರನ್ನು ಕುಡಿಯಲು ಉಪಯೋಗಿಸುತ್ತಾರೆ. ಅಲ್ಲದೆ ಇಲ್ಲಿಯ ನೀರು ಹರಿದು

ಹೊಸಕೆರೆ ಎಂಬ ದೊಡ್ಡಕೆರೆಗೆ ಸೇರಿ ವ್ಯವಸಾಯಕ್ಕೂ ಒಳಪಡುತ್ತದೆ. ಒಟ್ಟಾರೆ ಈ ಸ್ಥಳವೂ ಆಕರ್ಷಣೀಯವೂ, ಪ್ರೇಕ್ಷಣೀಯವೂ ಆಗಿದ್ದು ಒಂದು ಸುಂದರ ರಮ್ಯ ತಾಣವಾಗಿದೆ.

3. ಸಂಸ್ಕೃತ ಸಂಶೋಧನ ಸಂಸತ್‌ನ ವ್ಯಾಪ್ತಿ ಪ್ರದೇಶದಲ್ಲಿರುವ ಕೊಳಗಳು:

ಮೇಲುಕೋಟೆಯ ದಕ್ಷಿಣಕ್ಕೆ ಅಕ್ಕ–ತಂಗಿ ಕೊಳದ ಪಕ್ಕದಲ್ಲಿ ಸಂಸ್ಕೃತ ಸಂಶೋಧನ ಸಂಸತ್ ಆವರಣವಿದೆ. ಇದು ಸುಮಾರು ಹದಿನೈದು ಎಕರೆ ಪ್ರದೇಶವನ್ನು ಒಳಗೊಂಡಿದ್ದು, ಇಲ್ಲಿ ಪ್ರಮುಖವಾಗಿ ಏಳು ಕೊಳಗಳಿವೆ. ಅವುಗಳೆಂದರೆ

ಅ) ಬಸವರಾಜ ಕೊಳ

ಆ) ಶಿಂಗ್ರಯ್ಯಂಗಾರ್ ಕೊಳ

ಇ) ದೊಡ್ಡಯ್ಯನ ಕೊಳ

ಈ) ಮೇಲು ಚಿಕ್ಕಯ್ಯನ ಕೊಳ

ಉ) ಗಿರಗಿಕೊಳ ಮತ್ತು ಗೋರುಗುಂಡಯ್ಯನ ಕೊಳ

ಊ) ಚಕ್ರಕಟ್ಟೆ

ಅ) ಬಸವರಾಜಕೊಳ:

ಬಸವರಾಜೆಅರಸು ಎಂಬುವನು ಈ ಕೊಳವನ್ನು ನಿರ್ಮಿಸಿದ್ದು ಆತನ ಹೆಸರಿನಿಂದಲೇ ಈ ಕೊಳವನ್ನು ಕರೆಯಲಾಗುತ್ತದೆ. ಇದು ಮೈಸೂರಿನ ಒಡೆಯರ ಕಾಲದಲ್ಲಿ ನಿರ್ಮಾಣವಾದುದಾಗಿದೆ.[26] ಈ ಕೊಳವು ಚೌಕಾಕಾರವಾಗಿದ್ದು ಇದರ ಸೋಪಾನವು ನಯವಾದ ಚಪ್ಪಡಿ ಕಲ್ಲುಗಳಿಂದ ಗಾರೆ, ಮಣ್ಣು, ಇತರೆ ಸಹಾಯವಿಲ್ಲದೆ ನಿರ್ಮಿತವಾಗಿದ್ದು ತುಂಬಾ ಸ್ವಚ್ಛವಾಗಿದೆ. ಇದು ಮಳೆಯ ಆಶ್ರಯದಿಂದ ತುಂಬುತ್ತದೆ.

ಸುಮಾರು 30–40 ವರ್ಷಗಳ ಹಿಂದೆ ಈ ಕೊಳದ ನೀರನ್ನು ಕುಡಿಯಲು ಉಪಯೋಗಿಸುತ್ತಿದ್ದು, ಪ್ರಸ್ತುತದಲ್ಲಿ ಕೊಳದ ನೀರು ಶುಭ್ರವಾಗಿದ್ದರು ಬಳಸುತ್ತಿಲ್ಲ. ಆದರೆ ಸಂಸ್ಕೃತ ಸಂಶೋಧನ ಸಂಸತ್‌ನವರು ಇದರ ಸುತ್ತಲೂ ಇರುವ ಭೂಮಿಯನ್ನು ಕೃಷಿಗೆ ಒಳಪಡಡಿಸಿದ್ದು, ಇಲ್ಲಿಯ ನೀರನ್ನು ಸಂಪೂರ್ಣ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇಲ್ಲಿ ತೋಟಗಾರಿಕಾ ಬೆಳೆಯನ್ನು ಬೆಳೆಯುತ್ತಿದ್ದಾರೆ. ಈ ಕ್ಯಾಂಪಸ ವ್ಯಾಪ್ತಿಗೆ ಒಳಪಡಿಸುವ ಮುನ್ನ ಇದು ಅಲ್ಲಿನ ಜನಸಾಮಾನ್ಯರಿಗೆ ಕುಡಿಯಲು ಮತ್ತು ಇತರೆ ಗೃಹೋಪಯೋಗಕ್ಕೆ ಉಪಯೋಗವಾಗುತ್ತಿತ್ತು.

ಆ) ಶಿಂಗ್ರಯ್ಯಂಗಾರ್ ಕೊಳ:

ಇದು ಮೇಲುಕೋಟೆಯ ದಕ್ಷಿಣಕ್ಕೆ ಧನುಷ್ಕೋಟಿಗೆ ಹೋಗುವಾಗ ಬಲಭಾಗದಲ್ಲಿ ಸಿಗುತ್ತದೆ. ಈ ಕೊಳವನ್ನು ಶಿಂಗ್ರಯ್ಯಂಗಾರ್ ಎಂಬ ದೈವ ಭಕ್ತರು ನಿರ್ಮಿಸಿದ್ದರಿಂದ ಇದನ್ನು ಶಿಂಗ್ರಯ್ಯಂಗಾರ್ ಕೊಳವೆಂತಲೆ ಕರೆಯುವರು. ಇದು ನಯವಾದ ಚಪ್ಪಡಿಕಲ್ಲುಗಳಿಂದ ಯಾವುದೇ ಗಾರೆ ಮಣ್ಣುಗಳ ಸಹಾಯವಿಲ್ಲದೆ ಚೌಕಾಕಾರವಾಗಿ ನಿರ್ಮಿತವಾಗಿದೆ. ಈ ಕೊಳದ ಒಳಗೆ ಒಂದು ಚಿಕ್ಕ ಕೊಳವಿದ್ದು, ಅಂತರ್ಜಲ ಮತ್ತು ಮಳೆಯ ಆಶ್ರಯದಿಂದ ತುಂಬುತ್ತದೆ. ಇದು ಸಂಸ್ಕೃತ ಸಂಶೋಧನ ಸಂಸತ್‌ಗೆ ಸೇರುವ ಮೊದಲು ಜನಸಾಮಾನ್ಯರು ಇಲ್ಲಿಯ ನೀರನ್ನು ಗೃಹೋಪಯೋಗಕ್ಕೆ ಉಪಯೋಗಿಸುತ್ತಿದ್ದು, ಆದರೆ ಈಗ ಇದು ಸಂಸತ್ ಒಳಗೆ ಇರುವುದರಿಂದ ಅಲ್ಲಿಯ ಕೃಷಿಭೂಮಿಗೆ ಬಿಟ್ಟು ಬೇರೆ ಉಪಯೋಗವಿಲ್ಲ.

ಇ) ದೊಡ್ಡಯ್ಯನ ಕೊಳ:

ಈ ಕೊಳವು ಬಸವರಾಜ ಕೊಳದ ಪಕ್ಕದಲ್ಲಿದ್ದು, ದೊಡ್ಡಯ್ಯ ಎಂಬ ದೈವಭಕ್ತನು ಈ ಕೊಳವನ್ನು ನಿರ್ಮಿಸಿದ್ದಕ್ಕಾಗಿ ಇದನ್ನು 'ದೊಡ್ಡಯ್ಯನಕೊಳ'ವೆಂದು

ಕರೆಯುವರು. ಈ ಕೊಳವು ಬಸವರಾಜ ಕೊಳದ ನೈರ್ಮಲ್ಯವನ್ನು ಹಿಂದೆ ಕಾಪಾಡುತ್ತಿದ್ದು, ಈಗ ಇದು ಸಂಸ್ಕೃತ ಸಂಶೋಧನ ಸಂಸತ್‌ನ ತೋಟಕ್ಕೆ ನೀರನ್ನು ಪೂರೈಸುತ್ತಿದೆ.

ಈ) ಮೇಲುಚಿಕ್ಕಯ್ಯನ ಕೊಳ:

ಈ ಕೊಳವು ಮೇಲುಕೋಟೆಯ ದಕ್ಷಿಣಕ್ಕೆ ಧನುಷ್ಕೋಟಿಗೆ ಹೋಗುವಾಗ ಬಲಭಾಗದಲ್ಲಿ ಶಿಂಗ್ರಯ್ಯಂಗಾರ ಕೊಳದ ಪಕ್ಕದಲ್ಲಿದೆ. ಮೇಲುಕೋಟೆಯ ಒಂದು ಶಾಸನದಲ್ಲಿ ಈ ಕೊಳವನ್ನು ಚಿಕ್ಕಯ್ಯ ಎಂಬ ದೈವ ಭಕ್ತನು ನಿರ್ಮಿಸಿದ್ದಾಗಿ ಉಲ್ಲೇಖವಿದೆ.[27] ಮೇಲುಕೋಟೆಯಲ್ಲಿ ಮೇಲುಚಿಕ್ಕಯ್ಯ ಮತ್ತು ಕೀಳುಚಿಕ್ಕಯ್ಯ ಎಂಬ ಎರಡು ಕೊಳಗಳಿದ್ದು, ಒಂದು ಬೆಟ್ಟದ ಮೇಲಿನ ಪ್ರದೇಶದಲ್ಲಿದ್ದು, ಮತ್ತೊಂದು ಬೆಟ್ಟದ ಕೆಳಗಿನ ಪ್ರದೇಶದಲ್ಲಿದೆ. ಬೆಟ್ಟದ ಮೇಲೆ ಇರುವ ಕೊಳವನ್ನು ಮೇಲುಚಿಕ್ಕಯ್ಯನ ಕೊಳವೆಂತಲೂ, ಬೆಟ್ಟದ ಕೆಳಗೆ ಇರುವ ಕೊಳವನ್ನು ಕೀಳುಚಿಕ್ಕಯ್ಯನ ಕೊಳವೆಂತಲೂ ಕರೆಯುತ್ತಾರೆ.

ಈ ಕೊಳವು ಆಯತಾಕಾರದಲ್ಲಿದ್ದು ದಪ್ಪದಪ್ಪ ಬಂಡೆಕಲ್ಲುಗಳಿಂದ ನಿರ್ಮಿತ ವಾಗಿದ್ದು 'ನಂದ' ಮಾದರಿಗೆ ಸೇರಿದ್ದಾಗಿದೆ. ಇದರ ಪಕ್ಕದಲ್ಲಿನ ಶಿಂಗ್ರಯ್ಯಂಗಾರ್ ಕೊಳದ ಸ್ವಚ್ಛತೆಯನ್ನು ಇದು ಕಾಪಾಡುತ್ತಿತ್ತು. ಪ್ರಸ್ತುತದಲ್ಲಿ ಈ ಕೊಳವು ಸಂಸ್ಕೃತ ಸಂಶೋಧನ ಸಂಸತ್‌ನ ವ್ಯಾಪ್ತಿಯ ಕೃಷಿ ಭೂಮಿಗೆ ನೀರನ್ನು ಪೂರೈಸುತ್ತಿದೆ.

ಉ) ಗಿರಗಿಕೊಳ ಮತ್ತು ಗೋರುಗುಂಡಯ್ಯನ ಕೊಳ:

ಇವುಗಳನ್ನು ಸಹ ಗಿರಗಿ ಮತ್ತು ಗೋರುಗುಂಡಯ್ಯ ಎಂಬ ಭಕ್ತರು ನಿರ್ಮಿಸಿದ್ದು, ಅದಕ್ಕಾಗಿ ಇವುಗಳಿಗೆ ಈ ಹೆಸರು ಬಂದಿರಬಹುದು! ಈ ಕೊಳಗಳ ನೀರನ್ನು ಸಂಸ್ಕೃತ ಸಂಶೋಧನ ಸಂಸತ್ತಿನ ಕೃಷಿಭೂಮಿಗೆ ಪೂರೈಸಿಕೊಳ್ಳಲಾಗುತ್ತಿದೆ. ಇವುಗಳು ಮಳೆಯ ನೀರಿನ ಆಶ್ರಯದಿಂದ ತುಂಬುತ್ತವಾದರೂ ಅಂತರ್ಜಲವನ್ನು ಸಹ ಒಳಗೊಂಡಿವೆ.

ಗೋರುಗುಂಡಯ್ಯನ ಕೊಳದ ಒಂದು ವಿಶೇಷತೆ ಎಂದರೆ ಅದರ ನೀರು ಯಾವಾಗಲೂ ಮಂಜಿನಂತೆ ತಣ್ಣಗಿರುತ್ತದೆ ಇದಕ್ಕೆ ವೈಜ್ಞಾನಿಕ ಕಾರಣ ಇರಬಹುದು!

ಊ) ಚಕ್ರಕಟ್ಟೆ:

ಈ ಕೊಳವು ವೃತ್ತ ಅಥವಾ ಚಕ್ರಾಕಾರವಾಗಿರುವುದರಿಂದ ಚಕ್ರಕಟ್ಟೆ ಎಂದು ಕರೆಯುತ್ತಾರೆ. ಇದು ಸಹ ಮಳೆ ಆಶ್ರಯದಿಂದ ಸಂಗ್ರಹವಾಗಿದ್ದು ತನ್ನ ಸುತ್ತಮುತ್ತಲಿನ ಗಿಡಗಳಿಗೆ ನೀರನ್ನು ಪೂರೈಸುತ್ತಿದೆ.

ಈ ಸಂಸತ್‌ನ ವ್ಯಾಪ್ತಿಯಲ್ಲಿ ಇನ್ನೂ ಅನೇಕ ಕೊಳಗಳಿದ್ದು ಅವುಗಳಲ್ಲಿ ಜಸಂಗ್ರಹವಿಲ್ಲವಾಗಿದೆ.

4. ಇತರೆ ಕೊಳಗಳು:

ಮೇಲುಕೋಟೆಯಲ್ಲಿ ಕಂಡುಬರುವ ಇತರೆ ಕೊಳಗಳೆಂದರೆ,

ಅ) ಹೂಂಕೇಟಿ:

ಈ ಕೊಳವು ಮೇಲುಕೋಟೆಯಿಂದ ಚಿಟ್ಟನಹಳ್ಳಿಗೆ ಹೋಗುವ ಹೊಸ ರಸ್ತೆಯ ಮಾರ್ಗ ಮಧ್ಯದಲ್ಲಿದೆ. ಇದೊಂದು ಚಿಕ್ಕ ಕೊಳವಾಗಿದ್ದು ತನ್ನ ಸುತ್ತಲಿನ ಎತ್ತರ ಪ್ರದೇಶದಲ್ಲಿ ಬಿದ್ದ ಮಳೆಯ ನೀರಿನಿಂದ ಹಾಗೂ ಅಂತರ್ಜಲದಿಂದ ತುಂಬುತ್ತದೆ. ಮೇಲುಕೋಟೆಯ ಮಗ್ಗದ ಶೆಟ್ಟರುಗಳು ಇಲ್ಲಿ ಹೂಂಕೆ ಕೆಲಸ ಮಾಡುತ್ತಿದ್ದರಿಂದ ಇದನ್ನು ಹೂಂಕೇಟಿ ಎಂದು ಕರೆಯುತ್ತಾರೆ.[28] ಈ ಕೆಲಸ ಮಾಡುವಾಗ ನೆರಳು ಮತ್ತು ನೀರಿನ ಅವಶ್ಯಕತೆ ಇದೆ. ಅದಕ್ಕಾಗಿ ಹೂಂಕೇಟಿ ಸುತ್ತಲಿನ ತೋಪಿನಲ್ಲಿ ಮಗ್ಗದ ಶೆಟ್ಟರುಗಳು ಕೊಳವನ್ನು ನಿರ್ಮಾಣ ಮಾಡಿಕೊಂಡಿದ್ದರು. ಈಗ ಇಲ್ಲಿ ಮಗ್ಗದವರ ಹೂಂಕೆ ಕೆಲಸವು ನಡೆಯದಿದ್ದರು ಸಹ, ಜನರು ತಮ್ಮ ಗೃಹೋಪಯೋಗಿ ಕೆಲಸಕ್ಕೆ ಬಳಸಿಕೊಳ್ಳುತ್ತಿದ್ದಾರೆ.

ಆ) ಕಂಚಗಾರ್ ಕೊಳ:

ಈ ಕೊಳವು ಮೇಲುಕೊಟೆಯ ದಕ್ಷಿಣಕ್ಕೆ ಚಿಟ್ಟನಹಳ್ಳಿಗೆ ಹೋಗಲು ಹೊಸದಾಗಿ ನಿರ್ಮಿಸಿರುವ ರಸ್ತೆಯ ಮಾರ್ಗ ಮದ್ಯದಲ್ಲಿದೆ. ಅಲ್ಲಿನ ಪಾತ್ರೆ ಮಾಡುವ ಜನಾಂಗದವರು ಈ ಕೊಳವನ್ನು ನಿರ್ಮಿಸಿದ್ದರಿಂದ ಇದನ್ನ 'ಕಂಚಗಾರ್‌ಕೊಳ' ಎಂದು ಕರೆಯುವರು. ಇದು ಅಂತರ್ಜಲ ಮತ್ತು ಮಳೆಯ ನೀರಿನ ಆಶ್ರಯದಿಂದ ತುಂಬುತ್ತದೆ. ಒಂದೆ ಕುಡಿಯಲು ಬಳಕೆಯಾಗುತ್ತಿದ್ದರು, ಈಗ ದನಕರುಗಳಿಗೆ ಮತ್ತು ಬಟ್ಟೆ-ಪಾತ್ರೆ ತೊಳೆಯಲು ಉಪಯೋಗವಾಗುತ್ತಿದೆ.

ಇ) ಕಿಳ್ (ಕೀಳು)ಚಿಕ್ಕಯ್ಯನ ಕೊಳ:

ಈ ಕೊಳವು ಮೇಲುಕೋಟೆಯ ದಕ್ಷಿಣಕ್ಕೆ ಚಿಟ್ಟನಹಳ್ಳಿಗೆ ಹೋಗಲು ಹೊಸದಾಗಿ ನಿರ್ಮಿಸಿರುವ ರಸ್ತೆಯ ಮಾರ್ಗ ಮಧ್ಯದಲ್ಲಿದೆ. ಮೇಲುಕೋಟೆಯ ಶಾಸನ ಒಂದರಲ್ಲಿ ಇದನ್ನು ಚಿಕ್ಕಯ್ಯ ಎಂಬ ದೈವಭಕ್ತನು ನಿರ್ಮಿಸಿದ್ದಾಗಿ ಉಲ್ಲೇಖಿಸಿದೆ.[29] ಬೆಟ್ಟದ ಕೆಳಗೆ ಇರುವುದರಿಂದ ಕೆಳಗಿನ ಚಿಕ್ಕಯ್ಯನಕೊಳ ಎಂದು ಕರೆಯಲಾಗಿದ್ದು, ಕೆಳಗೆ ಎಂಬುದು ಜನರ ಬಯಲ್ಲಿ ದಿನಕಳೆದಂತೆ ಕೀಳು ಎಂದಾಗಿದೆ. ಇದರ ಪಕ್ಕದಲ್ಲಿ ವೆಂಕಟರಮಣಸ್ವಾಮಿ ದೇವಸ್ಥಾನ ಮತ್ತು ಹುಣಸೆ ತೋಪು ಇದೆ.

ಇಲ್ಲಿನ ಚೊಳ್ಳರೆ ಬೆಟ್ಟ ಮತ್ತು ಇತರೆ ಗುಡ್ಡಗಳ ಮೇಲೆ ಬಿದ್ದ ಮಳೆಯ ನೀರು ಬಂದು ಇಲ್ಲಿ ಸಂಗ್ರಹವಾಗುವಂತೆ ದೋಣಿಯನ್ನ ನಿರ್ಮಿಸಲಾಗಿದ್ದು, ಈಗ ಇಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದು ರಸ್ತೆ ಮಾಡುವವರು ಅದನ್ನು ಮುಚ್ಚಿ ಹಾಕಿದ್ದಾರೆ. ಇದು ಅಂತರ್ಜಲ ಮೂಲದಿಂದಲೂ ಸಹ ನೀರನ್ನು ಸಂಗ್ರಹ ಮಾಡಿಕೊಳ್ಳತ್ತಿದೆ. ಇದು ದನಕರುಗಳಿಗೆ ನೀರು ಕುಡಿಯಲು, ಬಟ್ಟೆ-ಪಾತ್ರೆ ತೊಳೆಯಲು ಉಪಯೋಗವಾಗುತ್ತಿದೆ. ಜೊತೆಗೆ ಪಕ್ಕದಲ್ಲಿರುವ ವೆಂಕಟರಮಣ ದೇವಸ್ಥಾನದ ಸ್ವಚ್ಚತೆಗೆ ಮತ್ತು ಅಲ್ಲಿನ ಧಾರ್ಮಿಕ ಕಾರ್ಯಗಳಿಗೆ ಉಪಯೋಗವಾಗುತ್ತಿದೆ.

ಇದು ಆಯತಾಕಾರವಾಗಿ, ದಪ್ಪದಪ್ಪ ಬಂಡೆಕಲ್ಲುಗಳಿಂದ ನಿರ್ಮಿತವಾಗಿದೆ. ಈ ಕೊಳದಲ್ಲಿ ಇಳಿಯಲು ಎರಡು ಕಡೆ ಮೆಟ್ಟಿಲುಗಳ ವ್ಯವಸ್ಥೆ ಮಾಡಲಾಗಿದ್ದು ಭದ್ರ ಕೊಳದ ಗುಂಪಿಗೆ ಸೇರಿದೆ. ಇಳಿಯುವ ಮೆಟ್ಟಿಲುಗಳಿಗೆ ಚಪ್ಪಡಿಗಳನ್ನು ಅಳವಡಿಸಲಾಗಿದೆ.

ಈ) ಭಟ್ಟರ ಕೊಳ:

ಈ ಕೊಳವು ಮೇಲುಕೋಟೆಯ ಉತ್ತರಕ್ಕೆ ಎಸ್.ಇ.ಟಿ. ಪಾಲಿಟೆಕ್ನಿಕ್ ಕಾಲೇಜಿನ ಮುಂಭಾಗದಲ್ಲಿದೆ. ಈ ಕೊಳದಲ್ಲಿ ನೀರು ಇದ್ದರೂ, ಪ್ರಸ್ತುತದಲ್ಲಿ ಯಾವುದೇ ಉಪಯೋಗಕ್ಕೂ ಬರುತ್ತಿಲ್ಲ.

ಉ) ಅಜ್ಜನ ಕೊಳ:

ಇದು ಊರಿನ ಮಧ್ಯ ಭಾಗದಲ್ಲಿದ್ದು ಕೊಳವಾಗಿದ್ದರು ಅಲ್ಲಿಯ ಜನ ಅಜ್ಜನ ಕಟ್ಟೆ ಎಂದು ಕರೆಯುತ್ತಾರೆ. ಊರಿನ ಅಜ್ಜನೊಬ್ಬನು ಈ ಕೊಳವನ್ನು ನಿರ್ಮಿಸಿದ್ದರಿಂದ ಅದಕ್ಕೆ ಈ ಹೆಸರು ಬಂದಿದೆ. ಬಹಳ ಹಿಂದೆ ಈ ಕೊಳದ ನೀರನ್ನು ಅಲ್ಲಿನ ಜನರು ಕುಡಿಯಲು, ಸ್ನಾನಕ್ಕೆ, ಬಟ್ಟೆ–ಪಾತ್ರೆ ತೊಳೆಯಲು ಉಪಯೋಗಿಸುತ್ತಿದ್ದರು. ಪ್ರಸ್ತುತದಲ್ಲಿ ಈ ಕೊಳವು ಹೇಳಲಾರದಷ್ಟು ಕಲುಷಿತವಾಗಿದೆ. ಈ ಕೊಳವು ಇಳಿಯಲು ಎರಡು ಕಡೆ ಮೆಟ್ಟಿಲುಗಳನ್ನು ಹೊಂದಿದ್ದು 'ಭದ್ರ' ಕೊಳದ ಗುಂಪಿಗೆ ಸೇರಿದ್ದಾಗಿದೆ. ಆಯತಾಕಾರದಲ್ಲಿ, ದಪ್ಪದಪ್ಪ ಕಲ್ಲು ಬಂಡೆಗಳಿಂದ ನಿರ್ಮಿತವಾಗಿದೆ.

ಊ) ಸಿಹಿನೀರು ಕೊಳ:

ಈ ಕೊಳವು ಮೈತ್ರೇಯತೀರ್ಥದ ಪಕ್ಕವಿದ್ದು, ಇಲ್ಲಿಯ ನೀರು ತುಂಬಾ ಸಿಹಿನೀರಾಗಿರುವುದರಿಂದ ಇದನ್ನು ಸಿಹಿನೀರಿನಕೊಳ ಎನ್ನುವರು. ಈ ಕೊಳದಲ್ಲಿ ಬಟ್ಟೆ ಪಾತ್ರೆ ತೊಳೆಯುವುದಿಲ್ಲ. ಇದರ ನೀರನ್ನು ಕುಡಿಯಲು ಉಪಯೋಗಿಸುತ್ತಿದ್ದಾರೆ.

ಋ) ಅಮ್ಮಂಗಿಕೊಳ:

ಈ ಕೊಳವು ಮೇಲುಕೋಟೆಯ ಉತ್ತರಕ್ಕಿದ್ದು ಊರಿಗೆ ಹೋಗುವ ರಸ್ತೆಯ ಪಕ್ಕದಲ್ಲಿಯೇ ಇದೆ. ಇದು ಸಹ ರಾಮಾನುಜಾಚಾರ್ಯರ ಕಾಲದಲ್ಲಿ ನಿರ್ಮಾಣವಾದುದಾಗಿದೆ. ರಾಮಾನುಜಾಚಾರ್ಯರ ಶಿಷ್ಯರಾದ ಅಮ್ಮಂಗಿಯವರು ರಾಮಾನುಜಾಚಾರ್ಯರು ಮೇಲುಕೋಟೆಯಲ್ಲಿರುವ ವಿಷಯ ತಿಳಿದು ಅವರನ್ನು ನೋಡಲು ಬರುವಾಗ ಅವರು ಶ್ರಿರಂಗಂನಿಂದ ಪ್ರಸಾದವನ್ನು ತೆಗೆದುಕೊಂಡು ಬಂದರು. ಅದನ್ನು ರಾಮಾನುಜರಿಗೆ ಕೊಡಲು ಹೋದಾಗ "ಕೈತೊಳೆಯದೆ ನಾನು ಪ್ರಸಾದವನ್ನು ಸ್ವೀಕರಿಸುವುದಿಲ್ಲ" ಎಂದರು. ಆಗ ಅಲ್ಲಿಯೇ ಇದ್ದ ಅವರ ಶಿಷ್ಯರು ಒಂದು ಗುಂಡಿಯನ್ನು ನೀರಿಗಾಗಿ ತೋಡಿದರು ಅದನ್ನೆ ಮುಂದೆ ಕೊಳವಾಗಿ ನಿರ್ಮಿಸಿದರು.[30] ಇದಕ್ಕೆ ಸಾಕ್ಷಿ ಎಂಬಂತೆ ಇದರ ಪಕ್ಕದಲ್ಲೇ ಇರುವ ಮರ ಒಂದರ ಕೆಳಗೆ ರಂಗನಾಥನನ್ನು ಕೆತ್ತಿರುವ ಕಲ್ಲನ್ನು ನೆಟ್ಟಿದ್ದಾರೆ.

ಎ) ಚೊತ್ತಿಕೊಳ:

ಈ ಕೊಳವು ಮೇಲುಕೋಟೆಗೆ ಬರಲು ಹಿಂದೆ ನಿರ್ಮಾಣ ಮಾಡಿರುವ ನಾಗಮಂಗಲದ ಹಾಸುಗಲ್ಲಿನ ರಸ್ತೆಯಲ್ಲಿ ಬರುವಾಗ ಬಲಭಾಗದಲ್ಲಿ ಸಿಗುತ್ತದೆ. ಈ ಕೊಳವು ಸ್ಥಳೀಯ ಇಬ್ಬರ ಹೇಳಿಕೆಯ ಪ್ರಕಾರ– ಚೊತ್ತಿ(ದೇಹದ ಯಾವುದಾದರೊಂದು ಅಂಗ ಹೂನಾಗಿದ್ದರೆ ಅವರಿಗೆ ಚೊತ್ತಿ ಎಂದು ಕರೆಯಲಾಗುತ್ತದೆ) ಎಂಬಾಕೆಗೆ ಸೇರಿರುವುದರಿಂದ ಇದನ್ನು ಚೊತ್ತಿ ಕೊಳ ಎಂದು ಕರೆಯಲಾಗುತ್ತದೆ.[31] ಈ ಕೊಳವು ನಾಗಮಂಗಲದ ಅಂಕು ಡೊಂಕಾದ ಅಥವಾ ಚೊತ್ತಾದ ರಸ್ತೆಯಲ್ಲಿರುವುದರಿಂದ ಚೊತ್ತಿಕೊಳ ಎನ್ನುವರು.[32] ಇದು ಭದ್ರಕೊಳವಾಗಿದ್ದು, ದಪ್ಪ ದಪ್ಪ ಕಲ್ಲುಗಳಿಂದ ನಿರ್ಮಾಣ ಮಾಡಲಾಗಿದೆ. ಇದರ ಸುತ್ತಲೂ ಮಟ್ಟಸವಾದ ಭೂಮಿ ಇದ್ದು, ಅಲ್ಲೆಲ್ಲ ಕೆಲವು ಮರಗಳನ್ನು ನೆಟ್ಟು ಬೆಳೆಸಲಾಗಿದೆ.

3.2 ಬಾವಿಗಳು:

ಅಂದಿನಿಂದ ಇಂದಿನವರೆವಿಗೂ ಕುಂಟುಂಬದ, ಸಮುದಾಯದ, ಊರಿನ ಆಸ್ತಿಯಂತೆ ಕಾರ್ಯನಿರ್ವಹಿಸುತ್ತಿರುವ ಬಾವಿಗಳು ಪ್ರತಿಯೊಂದು ಹಳ್ಳಿಗಳಲ್ಲೂ ಕಂಡು ಬರುತ್ತವೆ. ಇವು ಆಯಾಯ ಹಳ್ಳಿಗಳ ಜನಸಂಖ್ಯೆಗೆ ಮತ್ತು ವಿಸ್ತೀರ್ಣಕ್ಕೆ ಒಳಗೊಂಡಂತೆ ಎಷ್ಟು ಬೇಕೋ ಅಷ್ಟು ಬಾವಿಗಳು ಇರುತ್ತವೆ. ಹೆಚ್ಚೆಂದರೆ ಒಂದು ಸಣ್ಣ ಹಳ್ಳಿಗಳಲ್ಲಿ 5–10 ಬಾವಿಗಳಿದ್ದರೆ, ದೊಡ್ಡ ಹಳ್ಳಿಗಳಲ್ಲಿ 10–20 ಬಾವಿಗಳಿರಬಹುದು. ಆದರೆ ಮನೆಗೊಂದು ಬಾವಿಯಿರುವ ಮೇಲುಕೋಟೆಯಂತಹ ಊರು ಬಹುಶಃ ಮಂಡ್ಯ ಜಿಲ್ಲೆಯಲ್ಲಿ ಬೇರೆಲ್ಲೂ ಕಾಣದು. ಇಲ್ಲಿನ ತೆರೆದ ಬಾವಿಗಳು ಸುಸ್ಥಿತಿಯಲ್ಲಿವೆ, ಇವುಗಳಲ್ಲಿ ಸಮೃದ್ಧವಾದ, ಶುದ್ಧವಾದ, ಸಿಹಿಯಾದ ನೀರಿದ್ದು, ನೀರು ಮೇಲ್ಮಟ್ಟದಲ್ಲಿಯೇ ಸಿಗುತ್ತಿದೆ. ಮೇಲುಕೋಟೆ ಧಾರ್ಮಿಕ ಕ್ಷೇತ್ರವಾಗಿದ್ದು, ಇಲ್ಲಿ ಹೆಚ್ಚಿನ ಬ್ರಾಹ್ಮಣ ಜನಾಂಗದವರು ವಾಸವಾಗಿದ್ದು, ಇವರು ಮಡಿವಂತಿಕೆಗಾಗಿ ತಮ್ಮ ತಮ್ಮ ಮನೆಗಳಲ್ಲಿ ಬಾವಿಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ.

ಭೂ ಅಂತರ್ಜಲವನ್ನು ಹೊರತೆಗೆಯುವ ಸಲುವಾಗಿ ನಿರ್ಮಿಸುವ ಹೊಂಡ ಅಥವಾ ಗುಂಡಿಗಳೇ ಬಾವಿಗಳು. ಆರಂಭದಲ್ಲಿ ನಾವು ಅಂತರ್ಜಲವನ್ನು ಕಂಡಿದ್ದೇ ಬಾವಿಗಳ ಮೂಲಕ ಇವು ಗೃಹಬಳಕೆಗಾಗಿ, ಕೈಗಾರಿಕೆಗಳ ಉಪಯೋಗಕ್ಕಾಗಿ, ವ್ಯವಸಾಯದ ಅಥವಾ ಕೃಷಿ ಉಪಯೋಗಕ್ಕಾಗಿ ನೀರನ್ನು ಪೂರೈಸುತ್ತಿವೆ. ಈ ಬಾವಿಗಳಲ್ಲಿ ನಾವು ಪ್ರಮುಖವಾಗಿ ಎರಡು ರೀತಿಯ ಬಾವಿಗಳನ್ನು ಕಾಣುತ್ತೇವೆ. ಅವುಗಳೆಂದರೆ ಒಂದು 'ತೆರೆದಬಾವಿ' ಮತ್ತೊಂದು 'ಕೊಳವೆಬಾವಿ'(ಬೋರವೆಲ್). ತೆರೆದಬಾವಿಗಳಲ್ಲಿ ವಿವಿಧ ಮಾದರಿಯ ಬಾವಿಗಳಿವೆ ಅವುಗಳೆಂದರೆ ಏತಬಾವಿ, ಕಪಿಲೆಬಾವಿ, ಇಟ್ಟಿಗೆ ಬಾವಿ, ಕಲ್ಲಿನಬಾವಿ, ಸುರಂಗದಬಾವಿ, ಬಾವಡಿಗಳು, ಮೊದಲಾದವುಗಳು. ಸಂಸ್ಕೃತ ವಿಶ್ವಕೋಶ ವಾದ "ಮಾನಸೋಲ್ಲಾಸ"ದಲ್ಲಿ ಈ ಬಾವಿಗಳನ್ನು 'ಕೂಪ' (ಹೊರದಾರಿ ಇಲ್ಲದ್ದು), 'ವಾಪಿ'(ಒಂದು ಹೊರ ದಾರಿ ಇರುವ) ಮತ್ತು 'ಪುಷ್ಕರಣಿ' (ಅನೇಕ ಹೊರ

ದಾರಿಗಳಿರುವ) ಎಂದು ವಿಂಗಡಿಸಿರುವುದನ್ನು ತಿಳಿಯಬಹುದು.[33] ತೆರೆದಬಾವಿಗಳನ್ನು ಚಚ್ಚೌಕಾಕಾರ, ಆಯತಾಕಾರ, ಮತ್ತು ವೃತ್ತಾಕಾರ ಮೊದಲಾದ ಆಕಾರಗಳಲ್ಲಿ ನಿರ್ಮಿಸಲಾಗುತ್ತದೆ.

ಅಂತರ್ಜಲ ನಿರ್ಮಿತವಾದ ಈ ಬಾವಿಗಳು ರೈತರಿಗೆ ಜೀವನಾಡಿಯಂತಿದ್ದು ಕೃಷಿಗೆ ನೀರೊದಗಿಸುವುದರಲ್ಲಿ ಕೆರೆ ಹಾಗೂ ನಾಲೆಗಳ ನಂತರದ ಸ್ಥಾನವನ್ನು ಪಡೆದಿದೆ. ಇವು ಕೇವಲ ಒಂದು ಬೆಳೆಗೆ ಮಾತ್ರವಲ್ಲ ಎರಡು ಬೆಳೆಗಳಿಗೆ ನೀರೊದಗಿಸುತ್ತವೆ. ಈ ಬಾವಿಗಳ ನೀರನ್ನು ಆಶ್ರಯಿಸಿ ಭತ್ತ, ರಾಗಿ, ಜೋಳ, ನೆಲಗಡಲೆ, ಕಬ್ಬು, ಹಣ್ಣು, ತರಕಾರಿ, ಹಿಪ್ಪನೇರಳೆ, ಪುಷ್ಪೋದ್ಯಾನವನ ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತದೆ. (ಈ ಬೆಳೆಗಳು ಆಯಾಯ ಬಾವಿಗಳ ನೀರಿನ ಮಟ್ಟಕ್ಕೆ ಅನುಸಾರವಾಗಿರುತ್ತವೆ)

ಮೇಲುಕೋಟೆಯಲ್ಲಿ ಸುಮಾರು 500ಕ್ಕೂ ಹೆಚ್ಚು ಬಾವಿಗಳಿದ್ದು ಅವುಗಳಲ್ಲಿ ಸುಮಾರು 25ಕ್ಕೂ ಹೆಚ್ಚು ಕೊಳವೆ ಬಾವಿಗಳಾದರೆ, ಇನ್ನುಳಿದವು ತೆರೆದ ಬಾವಿಗಳಾಗಿವೆ. ಇವುಗಳಲ್ಲಿ ಶೇಕಡ 90 ಭಾಗ ಮನೆಗಳಲ್ಲಿ ಕುಡಿಯುವ ನೀರಿಗಾಗಿ ನಿರ್ಮಾಣ ಮಾಡಿಕೊಂಡಿದ್ದರೆ, ಉಳಿದವು ಸಾರ್ವಜನಿಕ ಉಪಯೋಗಕ್ಕಾಗಿ ನಿರ್ಮಾಣವಾಗಿವೆ.

1. ಆನೆ ಬಾವಿ:

ಈ ಬಾವಿಯು ಪುಟ್ಟನರಸಿ ಕೊಳದ ಪಶ್ಚಿಮಕ್ಕೂ ದಳವಾಯಿ ಕೆರೆಯ ಪೂರ್ವಕ್ಕೂ ನಡುವೆ ಇದೆ. ಆನೆಗಳ ಸೌಕರ್ಯಕ್ಕಾಗಿ ನಿರ್ಮಿಸಿದ ಬಾವಿಯನ್ನೆ ಆನೆಬಾವಿ ಎಂದು ಕರೆಯಲಾಯಿತು.[34] ಮೇಲುಕೋಟೆ ಶಾಸನ ಒಂದರಲ್ಲಿ ಕ್ರಿ.ಶ. 1785 ರಲ್ಲಿ ಟಿಪ್ಪುಸುಲ್ತಾನ್ ದೇವಸ್ಥಾನಕ್ಕೆ ಆನೆಯನ್ನು ಕೊಡುಗೆಯಾಗಿ ನೀಡಿದ್ದನ್ನು ಉಲ್ಲೇಖಿಸ ಲಾಗಿದೆ.[35] ಇದು ಅಂತರ್ಜಲ ಮತ್ತು ಮಳೆಯ ಆಶ್ರಯದಿಂದ ತುಂಬುತ್ತದೆ. ಈ ಕೊಳದಲ್ಲಿನ ನೀರು ತುಂಬಾ ಚೆನ್ನಾಗಿದೆ. ಇದು ವ್ಯವಸಾಯದ ಉಪಯೋಗಕ್ಕೆ ಅಷ್ಟೊಂದು

ಉಪಯೋಗವಿಲ್ಲವಾದರೂ ಸ್ವಲ್ಪಮಟ್ಟಿಗೆ ಉಪಯೋಗವಾಗುತ್ತಿದೆಯೆಂದು ಅಲ್ಲಿನ ವ್ಯವಸಾಯಕ್ಕೆ ಒಳಪಟ್ಟ ಭೂಮಿಯಿಂದ ತಿಳಿಯಬಹುದಾಗಿದೆ.

2. ಹೊಸಬಾವಿ:

ಇದು ಕಲ್ಯಾಣಿಯ ದಕ್ಷಿಣಕ್ಕೆ ಶೆಟ್ಟರ ಕೇರಿಯಲ್ಲಿದ್ದು, ಈ ಬಾವಿಯು ಕುಡಿಯುವ ನೀರಿಗಾಗಿ ನಿರ್ಮಾಣವಾಗಿದೆ. ಇದು ಬಂಡೆಗಳ ನಡುವಿನ ಮಧ್ಯ ಭೂಭಾಗದಲ್ಲಿದ್ದು ಅಂತರ್ಜಲ ಮತ್ತು ಮಳೆ ಆಶ್ರಯದಿಂದ ತುಂಬುತ್ತದೆ. ತನ್ನ ಹಿಂಭಾಗದ ಬಂಡೆಯ ಮೇಲೆ ಬಿದ್ದ ಮಳೆಯ ಶುಭ್ರ ನೀರು ಇಲ್ಲಿ ಬಂದು ಸೇರುವುದರಿಂದ ಇಲ್ಲಿನ ನೀರು ಯಾವಾಗಲೂ ತುಂಬಾ ಶುಭ್ರವಾಗಿದ್ದು ಜನರಿಗೆ ಕುಡಿಯಲು ಯೋಗ್ಯವಾಗಿದೆ. ಇದು ಶೆಟ್ಟರ ಕೇರಿಯಲ್ಲಿನ ಸುತ್ತಮುತ್ತಲಿನ ಜನರಿಗೆ ಕುಡಿಯುವ ನೀರನ್ನು ಪೂರೈಸುತ್ತಿದೆ. ಆದರೆ ಇಲ್ಲಿ ಬಟ್ಟೆ, ಪಾತ್ರೆ ಇತರೆ ಯಾವುದೆ ಕೆಲಸಗಳ ಶುಚಿತ್ವಕ್ಕೆ ನಿಷೇದವಿದೆ.

3. ಕಾಟೇರಿ:

ಈ ಬಾವಿಯ ಪೂರ್ವಕ್ಕೆ ಇರುವ ಗುಡ್ಡದ ಮೇಲೆ ಬಿದ್ದ ಮಳೆ ನೀರು ಇಲ್ಲಿಗೆ ಬಂದು ಸಂಗ್ರಹವಾಗುತ್ತದೆ. ಇದು ಕುಡಿಯಲು ಉಪಯೋಗವಿಲ್ಲ ಜನರು ಬಟ್ಟೆ ಪಾತ್ರೆ, ಸ್ನಾನಕ್ಕೆಂದು ಮೊದಲು ಉಪಯೋಗಿಸುತ್ತಿದ್ದು ಆದರೆ ಇತ್ತೀಚೆಗೆ ಇದರಲ್ಲಿ ಪಾಚಿ, ಗಿಡ–ಗಂಟೆಗಳು ಬೆಳೆದು ಕೊಂಡು ತುಂಬಾ ಕಲುಷಿತವಾಗಿದ್ದು ಯಾವುದೇ ಕೆಲಸಕ್ಕೂ ಉಪಯೋಗವಾಗುತ್ತಿಲ್ಲ. ಇದರ ಪಕ್ಕದಲ್ಲಿ 'ಹೊಸಬಾವಿ' ಎಂಬ ಬಾವಿ ಇದ್ದು, ಅದರ ನೀರನ್ನು ಅಲ್ಲಿನ ಸುತ್ತಮತ್ತಲಿನ ಜನರು ಕುಡಿಯಲು ಉಪಯೋಗಿಸುತ್ತಿದ್ದು, ಅದರ ಸ್ವಚ್ಛತೆಯನ್ನು ಇದು ಮೊದಲು ಕಾಪಾಡುತ್ತಿದ್ದು ಈಗ ನಿಷ್ಪ್ರಯೋಜಕವಾಗಿದೆ.[36]

4. ಒಂಭತ್ತು ಕಲ್ಲಿನ ಬಾವಿ:

ಇದು ನಾರಾಯಣ ತೀರ್ಥದ ಪಕ್ಕದಲ್ಲಿದ್ದು ತುಂಬ ಬರಗಾಲ ಬಂದು ಬೇರೆ ಕೊಳಗಳ ನೀರಿನ ಪ್ರಮಾಣ ಕಡಿಮೆಯಾದರು ಈ ಬಾವಿಯಲ್ಲಿ ಮಾತ್ರ ಯಾವಾಗಲೂ

ನೀರು ತುಂಬಿರುತ್ತದೆ. ಈ ಬಾವಿಯು ಚೌಕಾಕಾರವಾಗಿದ್ದು, ಪ್ರತಿಯೊಂದು ಭಾಗದಲ್ಲೂ ಒಂಭತ್ತು-ಒಂಭತ್ತು ಕಲ್ಲುಗಳನ್ನು ಜೋಡಿಸಿ ನಿರ್ಮಿಸಲಾಗಿರುವುದರಿಂದ ಇದಕ್ಕೆ 'ಒಂಭತ್ತುಕಲ್ಲಿನಬಾವಿ' ಎಂದು ಕರೆಯುವರು.

5. ಗೋಪಾಲಿ ಬಾವಿ:

ಇದು ರಾಯಗೋಪುರದ ಉತ್ತರಕ್ಕೆ ಇದ್ದು, ಅದರ ಸುತ್ತಮುತ್ತಲಿನ ಜನರಿಗೆ ಕುಡಿಯುವ ನೀರನ್ನು ಪೂರೈಸುತ್ತಿದ್ದು, ಈಗ ಅಂತರ್ಜಲ ಕಡಿಮೆಯಾಗಿದ್ದು ಉಪಯೋಗವಾಗುತ್ತಿಲ್ಲ. ಇದರ ಪಕ್ಕದಲ್ಲಿರುವ ರಾಯಗೋಪುರವನ್ನು ವಿಜಯನಗರದ ಶ್ರೀರಂಗರಾಯನ ಎರಡನೆಯ ಮಗ ರಾಮದೇವರಾಯನ ದಳಪತಿ ಗೋಪಾಲರಾಯ ಈ ಕಟ್ಟಡವನ್ನು ನಿರ್ಮಿಸಿದನು ಎಂಬ ಉಲ್ಲೇಖವನ್ನು ಪು.ತಿ.ನ.ರವರ 'ಮೇಲುಕೋಟೆ' ಎಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಈ ಅಂಶವನ್ನು ಗಮನಿಸಿ ಈ ಬಾವಿಯನ್ನು ಸಹ ಗೋಪಾಲರಾಯನೆ ತನ್ನ ಕಟ್ಟಡದ ಕೆಲಸಗಾರರಿಗೆ ಅನುಕೂಲವಾಗಲೆಂದು ನಿರ್ಮಿಸಿರಬಹುದು!

6. ಆಲದ ಬಾವಿ:

ಈ ಬಾವಿಯು ಪಲಾಶ ಮತ್ತು ಪದ್ಮತೀರ್ಥದ ನಡುವೆ ಇದ್ದು ಇದರ ಬಳಿ ಆಲದ ಮರವಿರುವುದರಿಂದ ಇದನ್ನ 'ಆಲದಬಾವಿ' ಎಂದು ಕರೆಯಲಾಗಿದೆ. ಈ ಬಾವಿಯ ಸುತ್ತಮುತ್ತಲು ವ್ಯವಸಾಯಕ್ಕೆ ಒಳಪಟ್ಟ ಭೂಮಿ ಇದ್ದು ನೀರಿನ ಕೊರತೆಯ ಸಂದರ್ಭದಲ್ಲಿ ಉಪಯೋಗಿಸಲಾಗುತ್ತದೆ. ಇದು ವ್ಯವಸಾಯದ ಪ್ರಧಾನ ಉದ್ದೇಶವನ್ನು ಹೊಂದಿರಲಾರದು. ಪ್ರಸ್ತುತದಲ್ಲಿ ಇದು ಶಿಥಿಲಾವಸ್ಥೆಯಲ್ಲಿದ್ದು, ಅಂತರ್ಜಲದ ಕಣ್ಣು ಮುಚ್ಚಿಹೋಗುತ್ತಿದೆ. ಈ ಬಾವಿಗೆ ಒಂದು ಕಡೆ ಇಳಿಯಲು ಮೆಟ್ಟಿಲುಗಳಿವೆ. ಇದನ್ನು ಬಾವಿ ಎನ್ನುವುದಕ್ಕಿಂತ 'ಕೊಳ' ಎನ್ನುವುದು ಸೂಕ್ತ!

7. ವಿಮಾನ ಪುಷ್ಕರಣಿ:

ದೇವಸ್ಥಾನದ ವಿಮಾನದ ಮೇಲೆ ಬಿದ್ದ ಮಳೆಯ ನೀರು ವ್ಯರ್ಥವಾಗಿ ಹೋಗುವುದನ್ನು ತಡೆಯುವ ಉದ್ದೇಶದಿಂದ ಒಂದು ಒಕ್ಕರಣೆಯನ್ನು ನಿರ್ಮಿಸಲಾಯಿತು. ಈ ಒಕ್ಕರಣೆಯನ್ನೆ ವಿಮಾನ ಪುಷ್ಕರಣಿ ಎನ್ನುವರು. ದೇವಾಲಯದ ಮಾಳಿಗೆಯ ಮೇಲೆ ಬಿದ್ದ ನೀರನ್ನು ಕೊಳವೆಯ ಮೂಲಕ ಈ ಪುಷ್ಕರಣಿಗೆ ಬಿಡಲಾಗುತ್ತಿತ್ತು. ಇಲ್ಲಿಯ ನೀರನ್ನು ದೇವಾಲಯದ ಕಾರ್ಯಗಳಿಗೆ ಬಳಸಲಾಗುತ್ತಿತ್ತು. ಪ್ರಸ್ತುತದಲ್ಲಿ ಕೊಳವೆಯು ಮುಚ್ಚಿಹೋಗಿರುವುದರಿಂದ ಈ ಒಕ್ಕರಣೆಗೆ ನೀರು ಸಂಗ್ರಹವಾಗುವುದಿಲ್ಲ. ಅಲ್ಲದೆ, ಈ ಒಕ್ಕರಣೆಯು ಶಿಥಿಲವಾಗಿದೆ. ಪ್ರಾಯಶಃ ಇಲ್ಲಿ ಮಳೆನೀರುಕೊಯ್ಲು ಪದ್ಧತಿ ಅನುಷ್ಠಾನ ಗೊಂಡಿರಬಹುದು!

8. ಒಕ್ಕರಣೆ :

ದೇವಸ್ಥಾನದ ಮುಂದಿನ ರಸ್ತೆಯಲ್ಲಿ ಸಾಗಿದರೆ ನಾರಾಯಣಅಯ್ಯಂಗಾರ್‌ರವರ ಮನೆ ಸಿಗುತ್ತದೆ. ಈ ಮನೆಯ ಮುಂದೆ ಇರುವ ಬಾವಿಯನ್ನು 'ಒಕ್ಕರಣೆ' ಎಂದು ಕರೆಯುತ್ತಾರೆ. ಒಕ್ಕರಣೆ ಎಂದರೆ ಬಾವಿ ಎಂದರ್ಥ. ಈ ಒಕ್ಕರಣೆಯು ರಾಮಾನುಜಾ ಚಾರ್ಯರ ಕಾಲದಲ್ಲಿ ನಿರ್ಮಾಣವಾಯಿತೆಂಬುದು ಸ್ಥಳೀಯರ ಹೇಳಿಕೆ. ಗದುಗಿನ ವೀರನಾರಾಯಣನ ದೇವಾಲಯದ ಮುಂದೆ ಇರುವ ದತ್ತಾತ್ರೇಯ ಪುಷ್ಕರಣಿಯು ಈ ಒಕ್ಕರಣೆಯ ಮಾದರಿಯಲ್ಲಿದೆ![37] ಇದನ್ನು ಕುಡಿಯುವ ನೀರಿಗಾಗಿ ನಿರ್ಮಿಸಲಾಗಿದ್ದು, ಬಹಳ ಸುಂದರವಾದ ವಾಸ್ತುಶಿಲ್ಪ ಮಾದರಿಯಲ್ಲಿ ರಚನೆಯಾಗಿದೆ. ಈ ಬಾವಿಯ ಮತ್ತೊಂದು ವೈಶಿಷ್ಟ್ಯವೆಂದರೆ, ಏಕ ಕಾಲದಲ್ಲಿ ಎಂಟು ಮಂದಿ ಈ ಬಾವಿಯಿಂದ ನೀರನ್ನು ಸೇದುವ ವ್ಯವಸ್ಥೆ ಇದೆ.

ಅಡಿಟಿಪ್ಪಣಿಗಳು : ವಿವರಣೆಗಳು.

1. ಪ್ರೋ.ಪ್ರಭಾಕರ್ ಪಿ.ಆಪ್ಟೆ ಮತ್ತು ರವೀಂದ್ರನಾಥ ಆರ್.ಕರ್ಣಿಕ್ : 'ಮೇಲುಕೋಟೆ ಥ್ರೂ ದ ಏಜಸ್' ಪು. 205
2. ಅದೇ, ಪು. 188 – ಕೊಳಗಳಲ್ಲಿ ವಿವಿಧ ಕೊಳಗಳಿವೆ. ಅವು ನಿರ್ಮಾಣವಾಗಿರುವ ಮೆಟ್ಟಿಲುಗಳ ಆಧಾರದ ಮೇಲೆ ವರ್ಗೀಕರಿಸಲಾಗಿದೆ. ಒಂದೇ ಕಡೆ ಇಳಿಯಲು ಮೆಟ್ಟಿಲುಗಳನ್ನು ಒಳಗೊಂಡ ಕೊಳಗಳನ್ನು 'ನಂದ' ಕೊಳವೆಂತಲೂ, ಎರಡೂ ಕಡೆ ಇಳಿಯಲು ಮೆಟ್ಟಿಲುಗಳನ್ನು ಒಳಗೊಂಡ ಕೊಳವನ್ನು 'ಭದ್ರ' ಕೊಳವೆಂತಲೂ, ಮೂರು ಕಡೆ ಇಳಿಯಲು ಮೆಟ್ಟಿಲುಗಳನ್ನು ಒಳಗೊಂಡ ಕೊಳಗಳನ್ನು 'ಜಯ' ಕೊಳವೆಂತಲೂ, ನಾಲ್ಕು ಕಡೆ ಇಳಿಯಲು ಮೆಟ್ಟಿಲುಗಳನ್ನು ಒಳಗೊಂಡ ಕೊಳವನ್ನು 'ವಿಜಯ' ಕೊಳವೆಂತಲೂ ಕರೆಯುವರು.
3. ಬಾರಾ ಗೋಪಾಲ್ : 'ಕರ್ನಾಟಕದಲ್ಲಿ ರಾಮಾನುಜಾಚಾರ್ಯರು' ಪು. 4–5 (ಸಂದರ್ಶನ ಸಂದರ್ಭದಲ್ಲಿ ಸೆಲ್ವಪಿಳ್ಳೆ (ಉಪನ್ಯಾಸಕರು) ಎಂಬುವರು ಮೂಲ ಕೃತಿಯಲ್ಲಿ ಇದರ ಉಲ್ಲೇಖವಿದೆ ಎಂದು ತಿಳಿಸಿದರು.)
4. ಪು.ತಿ.ನ : 'ಮೇಲುಕೋಟೆ' ಪು. 30–31
5. ಅದೇ, ಪು. 23
6. ಅಸೂರಿಸಂಪತ್ಕುಮಾರಾಚಾರ್ಯರು, ಅಸೂರಿಶ್ರೀನಿವಾಸಅಯ್ಯಂಗಾರ್ಯರು 'ಶ್ರೀ ಯಾದವಗಿರಿ ಜೀರ್ಣೋದ್ಧಾರ' ಪು. 16
7. ಅಸೂರಿತಿರುನಾರಾಯಣ ಅಯ್ಯಂಗಾರ್, ಅಸೂರಿಶ್ರೀನಿವಾಸಅಯ್ಯಂಗಾರ್ಯರು 'ಜೀರ್ಣೋದ್ಧಾರ ಮತ್ತು ಶಾಸನಗಳು' ಪು. 27
8. ಎಪಿಗ್ರಾಫಿ ಆಫ್ ಕರ್ನಾಟಿಕ, ಭಾಗ– 6 ಪಾಂ.ಪು. ಶಾಸನ ಸಂಖ್ಯೆ–125
9. ಸಂಪತ್ : ಕಾವಲುಗಾರ ಇವರ ಹೇಳಿಕೆ

10. ಪ್ರೊ.ಪ್ರಭಾಕರ್ ಪಿ.ಆಪ್ಟೆ ಮತ್ತು ರವೀಂದ್ರನಾಥ ಆರ್.ಕರ್ಣಿಕ್ : ಪೂರ್ವೋಕ್ತ, ಪು. 85

11. ಹೆಚ್.ಎಂ.ನಾಗರಾಜು : 'ಯದುಗಿರಿಯ ನಾಡು' ಪು. 103

12. ಎಪಿಗ್ರಾಫಿ ಆಫ್ ಕರ್ನಾಟಿಕ, ಭಾಗ– 6 ಪಾಂ.ಪು. ಶಾಸನ ಸಂಖ್ಯೆ–175

13. ಹರಿಪ್ರಿಯ : 'ಮೇಲುಕೋಟೆ ಪರಿಚಯ' ಪು. 13

14. ಮಂಜಪ್ಪಶೆಟ್ಟಿ (ಸಂ) : 'ಯಾದವಗಿರಿ ಮಾಹಾತ್ಮ್ಯಂ' ಪು. 12

15. ಸಂಪತ್‌ಕುಮಾರ್‌ಭಟ್ ಪ್ರಧಾನ ಅರ್ಚಕರ ಹೇಳಿಕೆ

16. ಕೆ.ಅನಂತರಾಮು : 'ಸಕ್ಕರೆ ಸೀಮೆ' ಪು. 95

17. ಹೆಚ್.ಎಂ.ನಾಗರಾಜು : ಪೂರ್ವೋಕ್ತ, ಪು. 103

18. ಹರಿಪ್ರಿಯ : ಪೂರ್ವೋಕ್ತ., ಪು. 14

19. ಸಂಪತ್‌ಕುಮಾರ್‌ಭಟ್ ಪ್ರಧಾನ ಅರ್ಚಕರ ಹೇಳಿಕೆ

20. ಸಿ.ವಿ.ಗರುಡಾಚಾರ್ : 'ತಿರುನಾರಾಯಣ ವೈರಮುಡಿ ಮಹತ್ವ' ಪು. 60

21. ಹರಿಪ್ರಿಯ : ಪೂರ್ವೋಕ್ತ, ಪು. 14

22. ಮಂಜಪ್ಪಶೆಟ್ಟಿ (ಸಂ) : ಪೂರ್ವೋಕ್ತ, ಪು. 10

23. ಹರಿಪ್ರಿಯ : ಪೂರ್ವೋಕ್ತ, ಪು. 14

24. ಮಂಜಪ್ಪಶೆಟ್ಟಿ (ಸಂ) : ಪೂರ್ವೋಕ್ತ, ಪು. 10

25. ಹೆಚ್.ಎಂ.ನಾಗರಾಜು : ಪೂರ್ವೋಕ್ತ, ಪು. 104

26. ಪ್ರೊ.ಪ್ರಭಾಕರ್ ಪಿ.ಆಪ್ಟೆ ಮತ್ತು ರವೀಂದ್ರನಾಥ ಆರ್.ಕರ್ಣಿಕ್ : ಪೂರ್ವೋಕ್ತ, ಪು. 86

27. ಎಪಿಗ್ರಾಫಿ ಆಫ್ ಕರ್ನಾಟಿಕ : ಪಾಂ.ಪು. ಶಾಸನ ಸಂಖ್ಯೆ–211

28. ಹೂಂಕೆ ಎಂದರೆ ಮಗ್ಗದ ಕೆಲಸದವರು ಹತ್ತಿ ನೂಲಿಗೆ ಗಂಜಿ ಹಾಕಿ ಬಿಡಿಸುವ ಯಂತ್ರ.

29. ಎಫಿಗ್ರಾಫಿ ಆಫ್ ಕರ್ನಾಟಿಕ: ಪಾಂ.ಪು. ಶಾಸನ ಸಂಖ್ಯೆ–211

30. ಹರೆಹರ ಶ್ರೀರಾಮ್‌ಶರ್ಮ–ನಿವೃತ್ತ ಪ್ರಾಂಶುಪಾಲರು ಸಂಸ್ಕೃತ ಪಾಠಶಾಲೆ

31. ಅದೇ,

32. ಸ್ಥಾನಿಕಂ ನಾಗರಾಜ್ ಅಯ್ಯಂಗಾರ್‌ರವರ ಹೇಳಿಕೆ

33. ಸೂರ್ಯನಾಥ್ ಕಾಮತ್ (ಸಂ) : ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ–1, ಪು. 522

34. ಸಂಪತ್‌ಕುಮಾರ್‌ಭಟ್ ಪ್ರಧಾನ ಆರ್ಚಕರ ಹೇಳಿಕೆ

35. ಎಫಿಗ್ರಾಫಿ ಆಫ್ ಕರ್ನಾಟಿಕ: ಪಾಂ.ಪು. ಶಾಸನ ಸಂಖ್ಯೆ– 197

36. ಶ್ರೀ ನಾಟೇರಿ ವರದಾಚಾರ್ಯಸ್ವಾಮಿಯವರು ಯತಿರಾಜಮಠದ ಮಠಾಧಿಪತಿಗಳಲ್ಲಿ ಒಬ್ಬರಾಗಿದ್ದು ಬಹುಶಃ ಇವರ ಕಾಲದಲ್ಲಿ ಈ ಬಾವಿ ನಿರ್ಮಾಣವಾಗಿರಬಹುದು! 'ನಾಟೇರಿ' ಎಂಬ ಪದ ಕಾಲಾನಂತರ ಕಾಟೇರಿಯಾಗಿ ರೂಪಾಂತರ ಹೊಂದಿರಬಹುದು!

37. ಹರೆಹರ ಶ್ರೀರಾಮಶರ್ಮರವರ ಹೇಳಿಕೆ

--------------o---------------

ಅಧ್ಯಾಯ–4

ಮೇಲುಕೋಟೆ ಪರಿಸರದಲ್ಲಿನ ಕೆರೆ ಮತ್ತು ಕಟ್ಟೆಗಳು

4.1 ಕೆರೆಗಳು

4.2 ಕಟ್ಟೆಗಳು

ಪ್ರಪಂಚದ ಎಲ್ಲಾ ಭಾಗಗಳಲ್ಲೂ ಬೃಹತ್ ನೀರಾವರಿಯ ಮೂಲಗಳಾದ ನದಿ ಮತ್ತು ಸರೋವರಗಳು ಇಲ್ಲವಾಗಿದ್ದು, ತಮ್ಮ ತಮ್ಮ ಪ್ರದೇಶಗಳಲ್ಲಿನ ಜಲಸಂಪನ್ಮೂಲ ವನ್ನು ಕ್ರೂಢೀಕರಿಸಿಕೊಳ್ಳುವ ಉದ್ದೇಶದಿಂದ ಕೆರೆ-ಕಟ್ಟೆಗಳನ್ನು ಪ್ರಾಚೀನ ಕಾಲದಿಂದಲೂ ನಿರ್ಮಿಸಿಕೊಳ್ಳುತ್ತಿದ್ದಾರೆ. ಇವು ಮಳೆಯ ನೀರು ಸಂಗ್ರಹ ಘಟಕಗಳಾಗಿದ್ದು, ಎತ್ತರವಾದ ಪ್ರದೇಶದಲ್ಲಿ ಬಿದ್ದ ಮಳೆಯ ನೀರು ವ್ಯರ್ಥವಾಗದಂತೆ ತಡೆಯಲು ತಗ್ಗಾದ ಭಾಗದಲ್ಲಿ ಕೆರೆ-ಕಟ್ಟೆಗಳನ್ನು ನಿರ್ಮಿಸಲಾಗುತ್ತದೆ. ಇವುಗಳನ್ನು ಅಲ್ಲಿಯ ನೀರಿನ ಸಂಗ್ರಹದ ಮಟ್ಟವನ್ನು ಅನುಸರಿಸಿ ಕಟ್ಟಲಾಗಿರುತ್ತದೆ.

4.1 ಕೆರೆಗಳು:

ಕೆರೆಯ ನಿರ್ಮಾಣ ಊರ ನಿರ್ಮಾಣಕ್ಕೆ ಹಾಕುವ ಭದ್ರ ತಳಹದಿಯಾಗಿದ್ದು, ನಾಡಿನ ಸಂಸ್ಕೃತಿ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿವೆ. ಕೆರೆಗಳ ನಿರ್ಮಾಣವು ಇತಿಹಾಸದಷ್ಟೇ ಹಳೆಯದಾದುದು. ಸಮಾನ್ಯವಾಗಿ ಸ್ವಾಭಾವಿಕ ಅಥವಾ ಕೃತಕವಾದ ತಗ್ಗುಗಳಲ್ಲಿ ಮಳೆಯ ನೀರು ಸಂಗ್ರಹಗೊಂಡ ಜಲಾಶಯಕ್ಕೆ 'ಕೆರೆ' ಎನ್ನಬಹುದು. ಫ್ರಾನ್ಸಿಸ್ ಬುಕಾನಾನ್ ಭೂಮಿಗೆ ನೀರು ಹಾಯಿಸಲು ಉಪಯೋಗಿಸುವ ದೊಡ್ಡ ಜಲಾಶಯವೇ 'ಕೆರೆ' ಎಂದು ಉಲ್ಲೇಖಿಸಿದ್ದಾನೆ.[1] "ಚಿಕ್ಕ ಹಳ್ಳಗಳು ಅಥವಾ ತೊರೆಗಳು ಹರಿಯುವ ಮಾರ್ಗದ ಸ್ವಾಭಾವಿಕ ಅಥವಾ ಕೃತಕವಾದ ತಗ್ಗಿನಲ್ಲಿ ನೀರನ್ನು ಸಂಗ್ರಹಿಸಲು ಮಣ್ಣಿನ ಅಥವಾ ಕಲ್ಲಿನ ಒಡ್ಡುಗಳನ್ನು(ಏರಿ) ನಿರ್ಮಿಸಿ ಅದರಲ್ಲಿ ಮಳೆಯ ನೀರನ್ನು ಸಂಗ್ರಹಿಸಲು ನಿರ್ಮಾಣಗೊಂಡ ಜಲಾಶಯವೇ ಕೆರೆ." ಬಹು ಪ್ರಾಚೀನ ಕಾಲದಿಂದಲೂ ಕೆರೆಗೆ ಅನೇಕ ಪರ್ಯಾಯ ನಾಮಗಳು ಇವೆ. ಕಟ್ಟೆ, ಸಾಗರ, ತಟಾಕ, ಸಮುದ್ರ, ಕೊಳ, ಕುಂಟೆ ಇವೆ ಮೊದಲಾದ ಪದಗಳು ಪ್ರಾಚೀನ ಕಾಲದ ಶಾಸನಗಳಿಂದ ತಿಳಿದುಬರುತ್ತದೆ. ಈ ರೀತಿ ಸಂಗ್ರಹಿಸಿದ ಕೆರೆಯ ನೀರನ್ನು ತೂಬುಗಳು ಹಾಗೂ ಚಿಕ್ಕ ಕಾಲುವೆಗಳ ಮೂಲಕ ಕೃಷಿಭೂಮಿಗೆ ಸರಬರಾಜು ಮಾಡಲಾಗುವುದು. ಹಾಗೆಯೇ

ಸಾಮಾನ್ಯವಾಗಿ ಕೆಲವು ಕೆರೆಗಳಲ್ಲಿ ಜನರು ಬಟ್ಟೆ-ಪಾತ್ರೆ ತೊಳೆಯಲು, ನೀರು ತೆಗೆದು ಕೊಂಡು ಹೋಗಲು, ದನಕರುಗಳು ಕೆರೆಗೆ ಇಳಿದು ನೀರು ಕುಡಿಯಲು ಒಂದು ಕಡೆ ಸೋಪಾನ ಕಟ್ಟೆಯನ್ನು ನಿರ್ಮಿಸಲಾಗಿರುತ್ತದೆ.

ಒಂದು ಕೆರೆಯ ವಿಸ್ತೀರ್ಣ, ಅಳತೆ, ಅಗಾಧತೆ ಮತ್ತು ಆಳವನ್ನು ಗಮನದಲ್ಲರಿಸಿಕೊಂಡು ಅವುಗಳನ್ನು ವರ್ಗೀಕರಿಸಿರುತ್ತಾರೆ. ಕೆರೆಯ ಆಯಕಟ್ಟು ಪ್ರದೇಶಗಳಿಗೆ ನೀರುಣಿಸುವ ಸಾಮರ್ಥ್ಯವನ್ನು ಮುಖ್ಯ ಅಳತೆಗೋಲನ್ನಾಗಿಸಿಕೊಂಡು ಕೆರೆಗೆ 'ಹಿರಿಯ', 'ಪಿರಿಯ', 'ಚಿಕ್ಕ' ಇವೇ ಮುಂತಾದ ಗುಣವಾಚಕಗಳನ್ನು ಜೋಡಿಸಿರುವುದನ್ನು ಕಂಡುಕೊಳ್ಳಬಹುದಾಗಿದೆ. ಉದಾಹರಣೆಗೆ ಹಿರಿಯಕೆರೆಯ ನೀರನ್ನು ಇನ್ನೂರಕ್ಕೂ ಹೆಚ್ಚು ಎಕರೆ ಕೃಷಿ ಭೂಮಿಗೆ ಬಳಸಬಹುದಾದರೆ, ಚಿಕ್ಕಕೆರೆಯಿಂದ ಐವತ್ತು ಎಕರೆ ಕೃಷಿ ಭೂಮಿಗೆ ಬಳಸಬಹುದಾಗಿದೆ. ಆದ್ದರಿಂದ ಕೆರೆಯ ನೀರು-ಸಂಗ್ರಹ ಸಾಮರ್ಥ್ಯವನ್ನು ಮತ್ತು ಆ ಕೆರೆಯ ಅಚ್ಚುಕಟ್ಟು ಪ್ರದೇಶವನ್ನು ಮುಖ್ಯ ಅಳತೆಗೋಲ ನ್ನಾಗಿಸಿಕೊಂಡು ಕೆರೆಗೆ 'ಹಿರಿಯಕೆರೆ', 'ಚಿಕ್ಕಕೆರೆ' ಇತ್ಯಾದಿಯಾಗಿ ಹೆಸರಿಸಿರುತ್ತಾರೆ.[2] ಈ ರೀತಿಯಾಗಿ ಕೆರೆಗಳನ್ನು ಹೆಸರಿಸುವ ಪದ್ಧತಿಯು ಜನಪದರಲ್ಲಿ ಇಂದಿಗೂ ಪ್ರಚಲಿತವಾಗಿದೆ. ಅಂದಿನ ಅರಸರು ವಂಶಾಭಿವೃದ್ಧಿಯಾಗಲೆಂದು ಹಲವಾರು ದೇವಾಲಯಗಳಿಗೆ ದತ್ತಿ ನೀಡುವುದಲ್ಲದೆ ಕೆರೆ, ಸರೋವರಗಳನ್ನು ನಿರ್ಮಿಸುತ್ತಿದ್ದರು. ದೇವಾಲಯ, ಮಠಗಳನ್ನು ಕಟ್ಟಿ ಅದರ ಪಕ್ಕದಲ್ಲಿ ಕೆರೆ ನಿರ್ಮಿಸುವುದು ರೂಢಿ.

ಇನ್ನೊಂದು ವರ್ಗೀಕರಣ ವಿಧಾನ ಎಂದರೆ ನದಿಯಿಂದ ತುಂಬುವ ಕೆರೆ ಮತ್ತು ಮಳೆಯಿಂದ ತುಂಬುವ ಕೆರೆ ಎಂದು ಹೇಳುವುದು. ನದಿಗೆ ಅಡ್ಡಲಾಗಿ ಕಟ್ಟಿದ ಅಣೆಕಟ್ಟನಿಂದ ನೀರನ್ನು ಕಾಲುವೆಗಳ ಮೂಲಕ ಪೂರೈಸಿಕೊಳ್ಳುವ ಕೆರೆಯೇ ನದಿಯಿಂದ ತುಂಬುವ ಕೆರೆಯಾಗಿದೆ. ಕಣಿವೆಗೆ ಅಡ್ಡಲಾಗಿ ಉದ್ದನೆಯ ಏರಿಯನ್ನು ಕಟ್ಟಿ ಅಥವಾ ಗುಡ್ಡಗಳ ನಡುವಿನ ಕಮರಿಗೆ ಅಡ್ಡಲಾಗಿ ಚಿಕ್ಕ ಏರಿಯನ್ನು ಕಟ್ಟಿ, ಜಲಾನಯನ ಪ್ರದೇಶದಲ್ಲಿ ಹರಿದು ಬರುವ ಮಳೆ ನೀರನ್ನು ಹಿಡಿದಿಡುವ ಪರಸ್ಪರ ಸಂಪರ್ಕ ಉಳ್ಳ

ಜಲಾಶಯಗಳೇ ಮಳೆ ನೀರಿನಿಂದ ತುಂಬುವ ಕೆರೆಗಳು. ಕರ್ನಾಟಕದಲ್ಲಿನ ಬಹುಪಾಲು ಕೆರೆಗಳು ಈ ವರ್ಗಕ್ಕೆ ಸೇರಿವೆ.[3]

ಮೇಜರ್ ಸ್ಯಾಂಕಿ ಅನುಸರಿಸಿದ ಇನ್ನೊಂದು ವರ್ಗೀಕರಣ ಹಳ್ಳಿಕೆರೆಗಳು ಹಾಗೂ ತುದಿಯಕೆರೆಗಳು ಎಂದು. ಹಳ್ಳಿಕೆರೆಗಳು ಸಣ್ಣವು, ಒಂದು ಹಳ್ಳಿಯ ಅಗತ್ಯವನ್ನು ಪೂರೈಸುವಂಥವು. ತುದಿಯಕೆರೆಗಳು ದೊಡ್ಡವು, ಕಣಿವೆಯೊಂದು ಮುಖ್ಯ ನದಿ ಕಣಿವೆಯನ್ನು ಸೇರುವ ಕಡೆ ಕಟ್ಟಲಾದುವು. ಅವುಗಳಿಗೆ ದೊಡ್ಡಕೆರೆ ಅಥವಾ ಹಿರಿಯಕೆರೆ ಎಂದೂ ಹೆಸರು.[4]

ಕೆಲವು ಹಳೆಯ ಕೆರೆಗಳ ಹೆಸರುಗಳು 'ಸಮುದ್ರ' ಅಥವಾ 'ಸಾಗರ' ಎಂದು ಕೊನೆಗೊಳ್ಳುತ್ತವೆ. ಅದು ಕೆರೆಗಳು ಸಾಗರದಂತೆ ವಿಶಾಲವಾದವು ಎಂಬುದನ್ನು ಸೂಚಿಸಲು ಇದ್ದರೂ ಅಂಥ ನಾಮಕರಣಕ್ಕೆ ನಿರ್ಮಾತೃವಿನ ಇಷ್ಟವೇ ಆಧಾರ ವಿನಃ ಕೆರೆ ತುಂಬ ದೊಡ್ಡದು ಎನ್ನುವುದನ್ನು ಸೂಚಿಸಲು ಅಲ್ಲ ಎಂದು ತೋರುತ್ತದೆ![5]

ಕೆರೆ ವಾರ್ಗಿಕ ಗ್ರಾಮನಾಮದ ಘಟಕಗಳಲ್ಲಿ ಜನಾಂಗವಾಚಿ, ವ್ಯಕ್ತಿವಾಚಿ, ಪ್ರಕೃತಿವಾಚಿ, ಸಂಖ್ಯಾವಾಚಿ ಮೊದಲಾದ ಪದಗಳು ಕಂಡುಬರುವುದುಂಟು. ಉದಾಹರಣೆಗೆ ನಾಗಲಕೆರೆ, ಮುಂಜರಕೆರೆ, ಚಿಕ್ಕಲಚ್ಚಿಕೆರೆ, ಚಾಮರಸನಕೆರೆ ಮೊದಲಾದವುಗಳು. ಕೆರೆನಿರ್ಮಾಣಗೊಂಡ ಪ್ರಯುಕ್ತ ಗ್ರಾಮಕ್ಕೆ ಆ ಹೆಸರು ಬಂದಂತೆ, ಗ್ರಾಮ ನಿರ್ಮಾಣ ಗೊಂಡ ಕೆಲಕಾಲದ ಮೇಲೆ ಕೆರೆ ನಿರ್ಮಿಸಲ್ಪಟ್ಟಿದ್ದರೂ ಕೆರೆಯ ಪ್ರಸಿದ್ಧಿಯಿಂದ ಮೂಲ ಗ್ರಾಮನಾಮ ಮಾಯವಾಗಿ ಕೆರೆ ಅದೂ ಇದರ ಪರ್ಯಾಯಗಳು ವಾರ್ಗಿಕವಾಗಿದ್ದುದೂ ಉಂಟು.[6]

ಕೆರೆಗಳು ವಿವಿಧ ಆಕಾರಗಳನ್ನು ಹೊಂದಿದ್ದು, ಅವು ಬಹುತೇಕವಾಗಿ ಭೌಗೋಳಿಕ ಪರಿಸರವನ್ನು ಅವಲಂಬಿಸಿರುತ್ತಿದ್ದವು. ಚಕ್ರಪಾಣಿಮಿಶ್ರನ "ವಿಶ್ವವಲ್ಲಭ" ಕೃತಿಯು ವಿವಿಧ ಆಕಾರದ ಕೆರೆಗಳನ್ನು ಪ್ರಸ್ತಾಪಿಸುತ್ತದೆ. ಅವುಗಳಲ್ಲಿ ವೃತ್ತಾಕಾರ,

ಚತುಷ್ಕೋನ, ಬಹುಕೋನಾಕೃತಿ, ಲಂಬಾಕಾರ, ಅರ್ಧಚಂದ್ರಾಕಾರಗಳು ಮತ್ತು ಆಯತಾಕಾರಗಳು ಸೇರಿವೆ.[7] ಬಹುಪ್ರಾಚೀನ ಕಾಲದಿಂದಲೂ ಕೆರೆಗೆ ಅನೇಕ ಪರ್ಯಾಯ ನಾಮಗಳು ಇವೆ. ಕಟ್ಟೆ, ಸಾಗರ, ತಟಾಕ, ಸಮುದ್ರ, ಕೊಳ, ಕುಂಟೆ ಇವೇ ಮೊದಲಾದ ಪದಗಳು ನಮಗೆ ವಿಜಯನಗರ ಕಾಲದ ನೂರಾರು ಶಾಸನಗಳಿಂದ ತಿಳಿದು ಬರುತ್ತದೆ.

ಪ್ರಾಗೈತಿಹಾಸಿಕ ಕಾಲದಿಂದಲೂ ಸಹ ಜಲಸಂಪನ್ಮೂಲದ ಸಮರ್ಪಕ ವ್ಯವಸ್ಥೆಗಳಿಗಾಗಿ ಜಲಸಂಗ್ರಹಣಾ ವ್ಯವಸ್ಥೆಯಲ್ಲಿ ಒಂದಾದ ಕೆರೆಗಳು ನಿರ್ಮಾಣವಾಗುತ್ತಿದ್ದುದು ಕಂಡುಬರುತ್ತದೆ. ಆದರೆ ಕ್ರಿ.ಪೂ. 300ರ ನಂತರ ಕರ್ನಾಟಕದ ಸಮುದಾಯಗಳು ಕೆರೆ–ಕುಂಟೆಗಳನ್ನು ಕಟ್ಟುವ ಮತ್ತು ಅವುಗಳನ್ನು ನಿರ್ವಹಿಸುವ ತಮ್ಮ ತಿಳುವಳಿಕೆಯನ್ನು ಮೌರ್ಯರ ಮೂಲಕ ಕಲಿತವು ಅಥವಾ ಸುಧಾರಿಸಿದ್ಧವು ಎನ್ನುವುದಕ್ಕೆ ಪುರಾವೆಗಳಿವೆ.[8] ಇದಕ್ಕೆ ಸಾಕ್ಷಿ ಎಂಬಂತೆ ಕೌಟಿಲ್ಯನ "ಅರ್ಥಶಾಸ್ತ್ರ"ವು ರಾಜನ ಕರ್ತವ್ಯದ ಬಗೆಗೆ ವಿಷದವಾಗಿ ವಿವರಿಸುತ್ತದೆ. ರಾಜ್ಯದಲ್ಲಿ ರಾಜನು ಹೊಸ ಗ್ರಾಮವನ್ನು ಸ್ಥಾಪಿಸಿದಾಗ ಆ ಗ್ರಾಮದಲ್ಲಿ ಕೆರೆ ಇರಬೇಕು ಎಂದು ಆ ಕೆರೆಯ ನೀರು ಕುಡಿಯುವುದಕ್ಕೆ ಮತ್ತು ಬೇಸಾಯಕ್ಕೆ ಉಪಯೋಗವಾಗಬೇಕೆಂದು ಮತ್ತು ಆ ಕೆರೆಯ ನಿರ್ಮಾಣ ಕಾರ್ಯದಲ್ಲಿ ಸಹಕರಿಸುತ್ತಿದ್ದ ಪ್ರಜೆಗಳಿಗೆ ತೆರಿಗೆಯಲ್ಲಿ ವಿನಾಯಿತಿಯನ್ನು ಸಹ ನೀಡಬೇಕೆಂದು ತಿಳಿಸುತ್ತದೆ.[9] ಇದಲ್ಲದೆ ಈ ಅವಧಿಯ ನಂತರ ಕೆರೆಗಳನ್ನು ಕುರಿತಂತೆ ಸಾವಿರಾರು ಶಾಸನಗಳಿದ್ದು, ಕಾಲುವೆಗಳು, ಕೋಡಿಗಳು, ನೀರಿನ ಆಳ, ಹಣಕಾಸು ನಿರ್ವಹಣೆ ಮುಂತಾಗಿ ಕೆರೆ ಸಂಬಂಧಿತ ಪ್ರತಿ ಅಂಶವನ್ನೂ ಇವು ವಿಶದಪಡಿಸುತ್ತವೆ. ಕೆಲವು ಉದಾಹರಣೆಗಳೆಂದರೆ, ನಾಲ್ಕನೆಯ ಶತಮಾನದ ಮಯೂರವರ್ಮನ ಚಂದ್ರವಳ್ಳಿಶಾಸನ, ಕಾಕುತ್ಸವರ್ಮನ ತಾಳಗುಂದಶಾಸನ.

ಕೆರೆ ನಿರ್ಮಾಣವು ಕಲ್ಯಾಣಿ ಚಾಲುಕ್ಯರಡಿ ಸುವರ್ಣಯುಗವನ್ನು ಕಂಡಿತ್ತೆಂದು ಹೇಳಬಹುದಾಗಿದೆ. ಚಾಲುಕ್ಯ ರಾಜನಾದ 3ನೇ ಸೋಮೇಶ್ವರನು ರಚಿಸಿದ 'ಮಾನಸೋಲ್ಲಾಸ' ಕೃತಿಯು ಕೆರೆ, ಕುಂಟೆ, ಕೊಳ, ಬಾವಿ ಮುಂತಾದವುಗಳನ್ನು ಹೇಗೆ

ನಿರ್ಮಿಸುವುದೆಂಬುದನ್ನು ಸವಿಸ್ತಾರವಾಗಿ ತಿಳಿಸುತ್ತದೆ. ಕೆರೆ ಕಟ್ಟಿಸುವಲ್ಲಿ ಅಗ್ರರೆನಿಸಿಕೊಂಡ ಹೊಯ್ಸಳರು ತಮ್ಮ ಅವಧಿಯಲ್ಲಿ ಹಾಸನ, ಚಿಕ್ಕಮಗಳೂರು, ತುಮಕೂರು ಮತ್ತು ಮಂಡ್ಯದಲ್ಲಿ ಬಹುತೇಕ ಕೆರೆಗಳನ್ನು ನಿರ್ಮಿಸಿದ್ದು, ಅವು ನೀರಿನಿಂದ ಸಮೃದ್ಧವಾಗಿದ್ದವು. ಅವರುಗಳು ಕಟ್ಟುತ್ತಿದ್ದ ಕೆರೆಗಳ ವಿಸ್ತೀರ್ಣ ಎಷ್ಟು ಬೃಹತ್ತಾಗಿತ್ತೆಂದರೆ ಅವುಗಳನ್ನು ಸಮುದ್ರಕ್ಕೆ ಹೋಲಿಸಿ 'ಹೊಯ್ಸಳಸಮುದ್ರ', 'ವಿಷ್ಣುಸಮುದ್ರ' ಎಂದು ಕರೆಯಲಾಗುತ್ತಿತ್ತು. ಇವರುಗಳಲ್ಲದೇ ರಾಷ್ಟ್ರಕೂಟರು, ಗಂಗರು, ಚಾಲುಕ್ಯರು, ವಿಜಯನಗರದ ದೊರೆಗಳು ಮತ್ತು ಸುಲ್ತಾನರು ಆಯೋಜಿಸಿದ ಜಲವ್ಯವಸ್ಥೆಗಳಲ್ಲಿ ಕೆರೆ ನಿರ್ಮಾಣಕ್ಕೆ ಅಗ್ರಸ್ಥಾನವಿತ್ತು.[10]

ಕುಲಗೋತ್ರಗಳ ಭೇದ ಭಾವವಿಲ್ಲದೇ ಅನೇಕ ಸಾರ್ವಜನಿಕರು ಸ್ಥಳೀಯ ಜಲ ಸಂಪನ್ಮೂಲಗಳನ್ನು ನಿರ್ಮಿಸಿ ಸಮಾಜಕ್ಕೆ ಸೇವೆ ಸಲ್ಲಿಸಿದ ಭಾವನೆಯಿಂದ ಧನ್ಯರಾಗುತ್ತಿದ್ದ ಸಮಯದಲ್ಲೆ ಬೃಹತ್ ಗಾತ್ರದ ನೀರಾವರಿ ಕೆಲಸಗಳನ್ನು ಬಹುತೇಕ ದೊರೆಗಳು ತಮ್ಮ ಧಾರ್ಮಿಕ ಮತ್ತು ಸಾಮಾಜಿಕ ಕರ್ತವ್ಯವಾಗಿ ಕೈಗೊಳ್ಳುತ್ತಿದ್ದರು. ಹೊಸಗ್ರಾಮಗಳಲ್ಲಿ ಕೆರೆ ಕಟ್ಟಲು ಪ್ರೋತ್ಸಾಹಕಗಳು ಕೆರೆ ಕಟ್ಟಿದವರಿಗಾಗಿ ಭೂದಾನ ಅಥವಾ ಅದರ ಮೇಲಿನ ತೆರಿಗೆಯನ್ನು ಮನ್ನಾ ಮಾಡುವುದು, ಬ್ರಾಹ್ಮಣರಿಗೆ ಮತ್ತು ವಿದ್ವಾಂಸರಿಗೆ ಅಗ್ರಹಾರವನ್ನು ಕೊಡುವಾಗ ಕೆರೆಗಳು ಮತ್ತು ದೇವಾಲಯಗಳಿಗಾಗಿ ನಿಧಿ ಒದಗಿಸುವುದು ಮುಂತಾದ ಜನಪರ ಕ್ರಮಗಳನ್ನು ಕೈಗೆತ್ತಿಕೊಳ್ಳುತ್ತಿದ್ದರು. ಅಗ್ರಹಾರ ರಚನೆಯೊಂದಿಗೆ ಕೆರೆ ಕಟ್ಟಲಾಗುತ್ತಿತ್ತು ಮತ್ತು ಸಮೀಪದಲ್ಲೇ ದೇವಾಲಯ ಸಹ ನಿರ್ಮಿಸಲಾಗುತ್ತಿತು. ಒಟ್ಟಾರೆ ಜಲಸಂಗ್ರಹವಾದ ಕೆರೆ ಅಗ್ರಹಾರ ಮತ್ತು ದೇವಸ್ಥಾನಗಳಿಗೆ ಮೂಲವಾಗಿರುತ್ತಿತ್ತು.

ಒಂದು ಅಣೆಕಟ್ಟಿನ ಪ್ರತಿಷ್ಠಾಪನೆ ಮಾಡುವವನು ಒಂದುಸಾವಿರ ಅಶ್ವಮೇಧ ಯಾಗ ಮಾಡುವವನಿಗಿಂತಲೂ ಹತ್ತುಕೋಟಿ ಪಟ್ಟು ಪುಣ್ಯ ಪಡೆಯುತ್ತಾನೆಂದು 'ಅಗ್ನಿಪುರಾಣ' ಹೇಳುತ್ತದೆ. ಅಂತಹ ವ್ಯಕ್ತಿ ದಿವ್ಯ ರಥದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ ನರಕ ಎಂದೂ ಅವನನ್ನು ಕಾಡುವುದಿಲ್ಲ. ಕೆರೆಯ ನೀರನ್ನು ದನಕರುಗಳು ಮತ್ತು ಇತರ ಪ್ರಾಣಿಗಳು ಕುಡಿಯುವುದರಿಂದ ಕೆರೆ ಕಟ್ಟಿದವನಿಗೆ ಯಾವ ಪಾಪವೂ ತಗಲುವುದಿಲ್ಲ.

ಒಂದು ವಿಶ್ವಾಸರ್ಹ ಜಲಸಂಪನ್ಮೂಲವನ್ನು ಕಲ್ಪಿಸಿ ಜಲದಾನ ಮಾಡುವುದು. ಒಂದು ಸಾವಿರ ಪುತ್ರರನ್ನು ಪಡೆಯುವುದಕ್ಕಿಂತಲೂ ಅತಿ ಮುಖ್ಯವಾದ ಮತ್ತು ಅತಿ ಪುಣ್ಯದ ಕಾರ್ಯವೆಂದೂ ಸಹ ಭಾವಿಸಲಾಗುತ್ತಿತ್ತು.[11]

ಮೇಲುಕೋಟೆಯ ಪರಿಸರದಲ್ಲಿನ ಬಹುಪಾಲು ಕೆರೆಗಳು ಮಳೆ ಆಶ್ರಿತ ಕೆರೆಗಳಾಗಿವೆ. ಈ ಪ್ರದೇಶವು ಎತ್ತರವಾಗಿದ್ದು ಬೆಟ್ಟ-ಗುಡ್ಡಗಳಿಂದ ಕೂಡಿದ್ದು ಬಿದ್ದ ಮಳೆಯ ನೀರನ್ನು ಸಂಗ್ರಹಿಸುವ ಸಲುವಾಗಿ ಅಲ್ಲಿನ ಜನರು ಕೆರೆಗಳನ್ನು ನಿರ್ಮಿಸಿ ಕೊಂಡಿದ್ದಾರೆ. ಈ ಕೆರೆಗಳು ಅಲ್ಲಿನ ಜನರಿಗೆ ಬಹುಪಯೋಗಿಯಾಗಿವೆ.

ಅ) ದಳವಾಯಿ ಕೆರೆ:

ಮೇಲುಕೋಟೆಯಿಂದ ಹೊಸಳ್ಳಿ, ನಾರಾಯಣಪುರಕ್ಕೆ ಹೋಗುವ ರಸ್ತೆಯಲ್ಲಿ, ಮೇಲುಕೋಟೆಯ ಪಶ್ಚಿಮ ದಿಕ್ಕಿಗೆ ಬೆಟ್ಟದ ತಳಭಾಗದಲ್ಲಿ ನಿರ್ಮಾಣವಾಗಿರುವ ಕೆರೆಯೇ 'ದಳವಾಯಿಕೆರೆ'. ಈ ಕೆರೆಯು ಮೇಲುಕೋಟೆಯ ಜನರಿಗೆ ಜೀವನಾಡಿಯಂತಿದ್ದು, ಮೈಸೂರಿನ ಒಡೆಯರಾದ ಕೃಷ್ಣರಾಜಒಡೆಯರ್‌ರವರ ಕಾಲದಲ್ಲಿ ಸರ್ವಾಧಿಕಾರಿ ಪ್ರಧಾನ ದಂಡನಾಯಕರಾಗಿದ್ದ ದಳವಾಯಿ ನಂಜರಾಜಯ್ಯನು ನಿರ್ಮಿಸಿದನು.[12]

ಈ ಕೆರೆಯ ಪಶ್ಚಿಮ ದಿಕ್ಕಿಗೆ ಏರಿಯನ್ನು ನಿರ್ಮಿಸಲಾಗಿದ್ದು, ಇದು ನಾರಾಯಣಪುರಕ್ಕೆ ಹೋಗುವ ರಸ್ತೆಯಾಗಿದೆ. ಈ ಏರಿಗೆ ನಾಲ್ಕು ಕಂಬಗಳನ್ನು ಒಳಗೊಂಡ ಮತ್ತು ಎರಡು ಕಂಬಗಳನ್ನು ಒಳಗೊಂಡ ಎರಡು ತೂಬುಗಳನ್ನು ನಿರ್ಮಿಸಲಾಗಿದೆ. ಕೆರೆಯ ಪಶ್ಚಿಮ ದಿಕ್ಕಿನಲ್ಲಿ ಏರಿಗೆ ದಪ್ಪದಪ್ಪ ಕಲ್ಲುಗಳನ್ನು ಅಳವಡಿಸಿ ಅಚ್ಚುಕಟ್ಟಾಗಿ ಸೋಪಾನ ವನ್ನು ನಿರ್ಮಿಸಲಾಗಿದೆ. ಅಲ್ಲದೆ ಪೂರ್ವಕ್ಕೂ ಅಲ್ಲಲ್ಲಿ ಸ್ವಲ್ಪ ದೂರಕ್ಕೆ ಜನರಿಗೆ ಅನುಕೂಲ ವಾಗಲೆಂದು ಸೋಪಾನವನ್ನು ನಿರ್ಮಿಸಲಾಗಿದೆ.

ಈ ಕೆರೆಗೆ ನೀರನ್ನು ಸಂಗ್ರಹಿಸಲು ಬಳಿಘಟ್ಟದ ಕಡೆಯಿಂದ ಹರಿದು ಬರುವ ನೀರಿಗಾಗಿ ವಾಯುವ್ಯ ದಿಕ್ಕಿನಲ್ಲಿ ಕಾಲುವೆಯನ್ನು ತೋಡಿ ಮಳೆಯ ನೀರನ್ನು ಸಂಗ್ರಹಿಸಲಾಗುತ್ತಿದೆ. ಅಲ್ಲದೆ ಮೇಲುಕೋಟೆ ಬೆಟ್ಟದ ಮೇಲೆ ಬಿದ್ದ ನೀರು ಸಹ ಈ ಕೆರೆಗೆ ಬಂದು ಸಂಗ್ರಹವಾಗುತ್ತದೆ. ನೈರುತ್ಯ ದಿಕ್ಕಿನಲ್ಲಿ ಕೋಡಿಯನ್ನು ನಿರ್ಮಿಸಲಾಗಿದ್ದು, ಕೋಡಿಯ ನೀರು ಹೆಬ್ಬಳ್ಳವನ್ನು ಸೇರಿ ತೊಣ್ಣೂರುಕೆರೆ ಸೇರುವುದು. ಇಲ್ಲಿಯ ಜಲಸಂಗ್ರಹದಿಂದ ಮೇಲುಕೋಟೆಯ ಜನರಿಗೆ ಕೊಳವೆಯ ಮೂಲಕ ಕುಡಿಯಲು ನೀರನ್ನು ಪೂರೈಸಲಾಗುತ್ತಿದ್ದು, ಇತ್ತೀಚೆಗೆ ಕೆರೆಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದು ಕಲುಷಿತವಾಗಿರುವುದರಿಂದ ಅದರ ನೀರನ್ನು ಕುಡಿಯಲು ಬಳಸದೆ ಗೃಹೋಪಯೋಗಿ ಕೆಲಸಕ್ಕೆ ಬಳಸಲಾಗುತ್ತಿದೆ. ಈ ಕೆರೆಯು 2.11 ಎಕರೆ ಕೃಷಿ ಭೂಮಿಗೆ ನೀರನ್ನು ಪೂರೈಸುತ್ತಿದೆ.[13]

2. ಹೊಸಕೆರೆ.

ಜಕ್ಕನಹಳ್ಳಿಯಿಂದ ಮೇಲುಕೋಟೆಗೆ ಹೋಗುವಾಗ ಕದಲಗೆರೆಗೆ ಸುಮಾರು 1 ಕಿ.ಮೀ. ದೂರದಲ್ಲಿದ್ದು, ಮೇಲುಕೋಟೆಗೆ ಸುಮಾರು 2 ಕಿ.ಮೀ. ದೂರದಲ್ಲಿ ಎರಡು ಬೆಟ್ಟಗಳ ನಡುವಿನ ಕಣಿವೆಗೆ ಅಡ್ಡಲಾಗಿ ಏರಿಯನ್ನು ನಿರ್ಮಿಸಲಾಗಿರುವ ಕೆರೆಯೇ 'ಹೊಸಕೆರೆ'. ಈ ಕೆರೆಯು ಕದಲಗೆರೆ ಗ್ರಾಮದ ಪಕ್ಕದಲ್ಲಿ ಇರುವುದರಿಂದ 'ಕದಲಗೆರೆಕೆರೆ' ಎಂದು ಕರೆಯಲಾಗಿದೆ. ಮೇಲುಕೋಟೆಯ ಶಾಸನ ಒಂದರಲ್ಲಿ ಕ್ರಿ.ಶ. 1534ರಲ್ಲಿ ವಿಜಯನಗರದ ಅಚ್ಯುತದೇವರಾಯಮಹಾರಾಯನ ಕಾಲದಲ್ಲಿ ಕದಳಗೆರೆಯ ಹೊಸಕೆರೆ ಯು ವೊಡೆದು ಹೋಗಲಾಗಿ, ಆ ವೊಡೆದ ಕೆರೆಯನ್ನು ಧರ್ಮವಾಗಿ ಉದಯಗಿರಿ ನೀಲಅಬ್ಬರಾಜರ ಕುಮಾರರು ತಿರುಮಲರಾಜರು ಜೀರ್ಣೋದ್ಧಾರ ಮಾಡಿಸಿದರೆಂದು ಉಲ್ಲೇಖವಿದೆ.[14] ಈ ಅಂಶವನ್ನು ಗಮನಿಸಿ ಈ ಕೆರೆಯು ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಇಲ್ಲವೇ ಪೂರ್ವದಲ್ಲಿ ನಿರ್ಮಾಣವಾಗಿರಬಹುದು! ಈ ಕೆರೆ ವೊಡೆದು ಮತ್ತೆ ಹೊಸದಾಗಿ ಸರಿಪಡಿಸಿದ್ದರಿಂದ ಇದನ್ನು 'ಹೊಸಕೆರೆ' ಎಂದು ಕರೆಯುತ್ತಾರೆ.

ಈ ಕೆರೆಯ ದಕ್ಷಿಣಕ್ಕೆ ಯೋಗಾನರಸಿಂಹನಬೆಟ್ಟವು ಉತ್ತರಕ್ಕೆ ಮುದಿಬೆಟ್ಟವು ಇದ್ದು, ಇಲ್ಲಿ ಬಿದ್ದ ಮಳೆಯ ನೀರು ಈ ಕೆರೆಗೆ ಸಂಗ್ರಹವಾಗುತ್ತದೆ. ಅಲ್ಲದೆ, ಇದರ ನೈರುತ್ಯ ದಿಕ್ಕಿನಲ್ಲಿರುವ ಮೈತ್ರೇಯಹಳ್ಳ ಮತ್ತು ವಾಯುವ್ಯ ದಿಕ್ಕಿನಲ್ಲಿರುವ ತೊಟ್ಟಿಲಮಡುವಿನ ನೀರು ಸಹ ಬಂದು ಸೇರುತ್ತದೆ. ಈ ಕೆರೆಯ ಪೂರ್ವಕ್ಕೆ ಸುಮಾರು 1/2 ಕಿ.ಮೀ. ದೂರದವರೆಗೆ ಏರಿಯನ್ನು ನಿರ್ಮಿಸಲಾಗಿದ್ದು, ಎರಡುಕಂಬಗಳ ತೂಬನ್ನು ಅಳವಡಿಸಲಾಗಿದೆ. ಈ ತೂಬಿನಿಂದ ಹೊರಗೆ ಬರುವ ನೀರನ್ನು ಕೃಷಿಗೆ ಬಳಸಲು ಅನುಕೂಲವಾಗುವಂತೆ ಮೂರು ಅಡಿ ವಿಸ್ತಾರದ ಕಾಲುವೆಯನ್ನು ನಿರ್ಮಿಸಲಾಗಿದೆ. ಕೆರೆಯ ಈಶಾನ್ಯ ಭಾಗದಲ್ಲಿ ಕಲ್ಲುಗಳನ್ನು ಮತ್ತು ಗಾರೆಯನ್ನು ಬಳಸಿ ಕೋಡಿಯನ್ನು ನಿರ್ಮಿಸಲಾಗಿದೆ. ಕೋಡಿಯ ನೀರು ಅಣೆಹಳ್ಳವನ್ನು ಸೇರಿ ಖರಡ್ಯ ಕೆರೆಗೆ ಸೇರುತ್ತದೆ. ಈ ಕೆರೆಯು 18.291 ಎಂ.ಸಿ.ಎಫ್.ಟಿ. ಪ್ರಮಾಣದ ನೀರನ್ನು ಸಂಗ್ರಹಿಸುವ ಸಾಮರ್ಥ್ಯವಿದ್ದು, ಇದರಿಂದ 7.88–1.97 ಎಂ.ಸಿ.ಎಫ್.ಟಿ. ನೀರನ್ನು ಐವತ್ತು ಎಕರೆ ಭೂಮಿಗೆ ಬಳಸಬಹುದಾಗಿದೆ.[15]

3. ಹುಳಿಗೆರೆಕೆರೆ (ದೊಡ್ಡಕೆರೆ):

ಮೇಲುಕೋಟೆಗೆ ಸು. 5 ಕಿ.ಮೀ. ದೂರದಲ್ಲಿರುವ ಹುಳಿಗೆರೆ ಎಂಬ ಗ್ರಾಮದಲ್ಲಿ ಈ ಕೆರೆ ನಿರ್ಮಾಣವಾಗಿದೆ. ಇದು ಬಹು ವಿಶಾಲವಾದ ಕೆರೆಯಾಗಿರುವುದರಿಂದ ಈ ಕೆರೆಯನ್ನು 'ದೊಡ್ಡಕೆರೆ' ಎಂತಲೂ, ಹುಳಿಗೆರೆ ಗ್ರಾಮದ ಪಕ್ಕದಲ್ಲಿ ಇರುವುದರಿಂದ 'ಹುಳಿಗೆರೆಕೆರೆ' ಎಂತಲೂ ಕರೆಯಲಾಗಿದೆ. ಇದರ ಪೂರ್ವಕ್ಕೆ ಮೇಲುಕೋಟೆ ಬೆಟ್ಟವು ಪಶ್ಚಿಮಕ್ಕೆ ಕರಿಕಲ್ಲು(ಗರಿಗಲ್ಲು) ಬೆಟ್ಟವೂ ಇದ್ದು ಇವುಗಳ ನಡುವೆ ಅರ್ಧಚಂದ್ರಾಕಾರದ ಮತ್ತೊಂದು ಬೆಟ್ಟಸರಣಿ ಇದ್ದು ಈ ಸರಣಿಗಳಿಗೆ ಅಡ್ಡಲಾಗಿ ಏರಿಯನ್ನು ನಿರ್ಮಿಸಿ ನೀರನ್ನು ಸಂಗ್ರಹ ಮಾಡಲಾಗಿದೆ. ಏರಿಯು ದಕ್ಷಿಣಕ್ಕೆ ಸುಮಾರು 1/2 ಕಿ.ಮೀ. ದೂರದವರೆಗೆ ಅಂಕುಡೊಂಕಾಗಿ ನಿರ್ಮಾಣವಾಗಿದೆ. ಇದರ ಜಲಸಂಗ್ರಹದ ಆಶ್ರಯದಿಂದ ಸುಮಾರು ಎಂಭತ್ತು ಎಕರೆ ಭೂಮಿಗೆ ನೀರುಪೂರೈಕೆಯಾಗುತ್ತಿದೆ. ಇಲ್ಲಿನ ಏರಿಯ ಎರಡು

ತುದಿಗಳಲ್ಲಿ ತೂಬುಗಳನ್ನು ನಿರ್ಮಿಸಲಾಗಿದ್ದು, ಅವುಗಳಿಂದ ಕೃಷಿ ಭೂಮಿಗೆ ನೀರು ಸಾಗಿಸಲು ಕಾಲುವೆಯನ್ನು ತೋಡಲಾಗಿದೆ. ಒಂದು ತೂಬು ಇತ್ತೀಚೆಗೆ ನಿರ್ಮಾಣವಾಗಿದೆ. ಮತ್ತೊಂದು ಕೆರೆಯ ನಿರ್ಮಾಣದ ಸಂದರ್ಭದಲ್ಲೇ ಇದ್ದು ಅದು ಶಿಥಿಲವಾಗಿರುವುದರಿಂದ ಅಲ್ಲಿಯೇ ಮತ್ತೊಂದು ಹೊಸ ತೂಬನ್ನು ನಿರ್ಮಿಸಲಾಗಿದೆ. ಇಲ್ಲಿನ ಬೆಟ್ಟ ಸರಣಿಗಳು ಕಾಡುಪ್ರದೇಶವಾಗಿದ್ದು, ಇದನ್ನು 'ನಾರಾಯಣದುರ್ಗ ಫಾರೆಸ್ಟ್' ಎಂದು ಕರೆಯಲಾಗಿದೆ.[16] ಈ ಕೆರೆಯ ಆಗ್ನೇಯಕ್ಕೆ ಕೋಡಿಯನ್ನು ನಿರ್ಮಿಸಲಾಗಿದ್ದು, ಇಲ್ಲಿ ಕೋಡಿಬಿದ್ದ ನೀರು ಹೊಸಳ್ಳಿ ಬಳಿ ಹೆಬ್ಬಳ್ಳವನ್ನು ಸೇರಿ ತೊಣ್ಣೂರುಕೆರೆ ಸೇರುತ್ತದೆ.

4. ಕಾಡೇನಹಳ್ಳಿ ಕೆರೆ:

ಮೇಲುಕೋಟೆಗೆ ಸುಮಾರು 4 ಕಿ.ಮೀ. ದೂರದಲ್ಲಿರುವ ಈ ಕೆರೆಯು ಕಾಡೇನಹಳ್ಳಿ ಗ್ರಾಮದಲ್ಲಿರುವುದರಿಂದ 'ಕಾಡೇನಹಳ್ಳಿಕೆರೆ' ಎಂದು ಕರೆಯುವರು. ಈ ಕೆರೆಗೆ ಆಗ್ನೇಯ ದಿಕ್ಕಿಗೆ ಏರಿಯನ್ನು ನಿರ್ಮಿಸಲಾಗಿದ್ದು, ಎರಡುಕಲ್ಲಿನ ಒಂದು ತೂಬನ್ನು ಕೆರೆಯ ನಿರ್ಮಾಣ ಕಾಲದಲ್ಲಿ ಅಳವಡಿಸಲಾಗಿದ್ದು, ಪ್ರಸ್ತುತದಲ್ಲಿ ಅದು ಶಿಥಿಲವಾಗಿ ರುವುದರಿಂದ ಕಾಂಕ್ರೀಟ್ ಸಹಾಯದಿಂದ ಹೊಸ ತೂಬನ್ನು ನಿರ್ಮಾಣ ಮಾಡಲಾಗಿದೆ. ಈ ಕೆರೆಗೆ ಕದಲಗೆರೆಯ ನಿಂಗನಕಟ್ಟೆಯಲ್ಲಿ ಕೋಡಿ ಬಿದ್ದ ನೀರು ಹಾಗೂ ಮೇಲುಕೋಟೆ ಬೆಟ್ಟದ ನೀರು ಬಂದು ಸಂಗ್ರಹವಾಗುತ್ತದೆ. ಇದರ ದಕ್ಷಿಣ ದಿಕ್ಕಿಗೆ ಕೋಡಿಯನ್ನು ನಿರ್ಮಿಸಿದ್ದು ಕೋಡಿ ಬಿದ್ದ ನೀರು ದೇವರಹಳ್ಳಿ ಕೆರೆಗೆ ಸೇರುತ್ತದೆ. ಈ ಕೆರೆಯು ಸುಮಾರು 30 ಎಕರೆ ಕೃಷಿ ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ.

5. ಎಂಜಲಗೆರೆ:

ಮೇಲುಕೋಟೆಯ ಆಗ್ನೇಯ ದಿಕ್ಕಿಗೆ ಕೀಳುಚಿಕ್ಕಯ್ಯನ ಕೊಳದ ಸಮೀಪದಲ್ಲಿ ಹಾಗೂ ಚಿಟ್ಟನಹಳ್ಳಿಗೆ ಹೋಗುವ ರಸ್ತೆಯಲ್ಲಿ ನಿರ್ಮಾಣವಾಗಿರುವ ಕೆರೆಯೇ 'ಎಂಜಲಗೆರೆ'. ಇದು ಬೆಟ್ಟದ ತಗ್ಗಾದ ಭಾಗದಲ್ಲಿದ್ದು ಬೆಟ್ಟದ ಮೇಲೆ ಬಿದ್ದ ಮಳೆಯ

ನೀರು ಇಲ್ಲಿಗೆ ಬಂದು ಸಂಗ್ರಹವಾಗುತ್ತದೆ. ಈ ಕೆರೆಯ ಏರಿಯನ್ನು ದಕ್ಷಿಣಕ್ಕೆ ನಿರ್ಮಿಸಲಾಗಿದ್ದು, ಸುಮಾರು 20 ಎಕರೆ ಭೂಮಿಗೆ ನೀರನ್ನು ಪೂರೈಸುತ್ತದೆ. ಕೆರೆಯ ವಿಸ್ತೀರ್ಣ ಚಿಕ್ಕದಾಗಿದ್ದರೂ ಸದಾ ನೀರು ಇರುತ್ತದೆ. ಇಲ್ಲಿ ಕೋಡಿಬಿದ್ದ ನೀರು ದೇವರಹಳ್ಳಿ ಕೆರೆಗೆ ಹೋಗಿ ಸೇರುತ್ತದೆ.

6. ತೊಣ್ಣೂರು ಕೆರೆ ಅಥವಾ ಮುತ್ತಿನ ಕೆರೆ;

ತೊಣ್ಣೂರು ಗ್ರಾಮದ ಸುತ್ತಮುತ್ತಲಿನ ಜನತೆಗೆ ಜೀವನಾಡಿಯು, ಪ್ರವಾಸಿಗರಿಗೆ ಪ್ರೇಕ್ಷಣೀಯವೂ ಆದ ಈ ಕೆರೆಯು ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿದೆ. ಈ ಕೆರೆಯನ್ನು ರಾಮಾನುಜರೇ ಕಟ್ಟಿಸಿ 'ತಿರುಮಲಸಾಗರ'ವೆಂದು ಹೆಸರಿಟ್ಟರು.[17] ತೊಣ್ಣೂರು ಶಾಸನದಲ್ಲಿ "ಶ್ರೀಯಾದವನಾರಾಯಣ ಚತುರ್ವೇದಿ ಮಂಗಲದ ಯಾದವ ಸಮುದ್ರದ ಏರಿಯ ಮೇಗಣ ಹೊಯ್ಸಳೇಶ್ವರ ದೇವರ" ಎಂದು ಇರುವುದರಿಂದ ಇದರ ಹೆಸರು ಅವರ ಕಾಲದಲ್ಲಿ ತಿರುಮಲಸಾಗರವಲ್ಲ, 'ಯಾದವಸಮುದ್ರ' ಎಂದು ಇದ್ದಿತು ಎನ್ನಬಹುದು. ಪ್ರಾಯಶಃ ಈ ಹೆಸರನ್ನು ವಿಜಯನಗರದ ಕಾಲದಲ್ಲಿ 'ತಿರುಮಲಸಾಗರ' ಎಂದು ಬದಲಾಯಿಸಿರಬೇಕು.[18] ಇದರ ಪಾಚಿರಹಿತ ಶುಭ್ರಜಲ ಸಂಗ್ರಹವನ್ನು ಕಂಡು ಉಲ್ಲಾಸಿತಗೊಂಡ ಹೈದರಬಾದಿನ ನಿಜಾಮ ನಾಸಿರ್‌ಜಂಗನು ಕ್ರಿ.ಶ. 1766ರಲ್ಲಿ ಅದಕ್ಕೆ "ಮೋತಿತಲಾಬ"(ಮುತ್ತಿನ ಕೆರೆ) ಎಂದು ನಾಮಕರಣ ಮಾಡಿದನಂತೆ, ಅದೇ ಹೆಸರು ಈಗಲೂ ರೂಢಿಯಲ್ಲಿದೆ.[19]

ಕೆರೆಗಳಿಗೆ ಪೌರಾಣಿಕ ಹಿನ್ನೆಲೆ ಇರುವುದು ಅಪರೂಪ, ಆದರೆ ಈ ಕೆರೆಗೆ ಅದೂ ಉಂಟು. ಇಂದ್ರನು ಅಪ್ಸರೆಯರೊಡಗೂಡಿ ಅಲ್ಲಿಗೆ ಬಂದು ಜಲ ಕ್ರೀಡೆಯಾಡುತ್ತಾನೆ. ಆದ್ದರಿಂದಲೇ ಅದು ಪಂಚ ಅಪ್ಸರತಟಾಕ; ಗ್ರಾಮಸ್ಥರ ಬಾಯಲ್ಲಿ ಅಪ್ಸರನಕಟ್ಟೆ.[20] ಈ ಕೆರೆಯ ತಳಭಾಗದಲ್ಲಿ ದೇವಾಲಯವಿದೆ ಎಂಬುದು ಸ್ಥಳೀಯರ ಹೇಳಿಕೆ. ಆದರೆ ಈ ಕೆರೆಯಲ್ಲಿ ಸದಾ ನೀರು ತುಂಬೇ ಇರುವುದರಿಂದ ಇದನ್ನು ಪತ್ತೆಹಚ್ಚಲಾಗಿಲ್ಲ!

ನದಿಯ ನೀರಿನಂತೆ ಈ ಕೆರೆಯ ನೀರು ನಿರ್ಮಲವಾಗಿದೆ. ಸಮೀಪದಲ್ಲಿಯೇ ಇರುವ ಮೇಲುಕೋಟೆ ಬೆಟ್ಟವೇ ಮೊದಲಾದ ನಾಲ್ಕಾರು ಗುಡ್ಡಗಳಿಂದ ಮಳೆಗಾಲದಲ್ಲಿ ಹರಿದು ಬರುವ ಹೆಬ್ಬಳ್ಳದ ನೀರು ಈ ಕೆರೆಯನ್ನು ಬಂದು ಸೇರುತ್ತದೆ. ಹೀಗೆ ಬರುವಾಗ ಕಲ್ಮಶ ವಸ್ತುಗಳು ಬಂದು ಕೆರೆಯಲ್ಲಿ ಸೇರುತ್ತವೆ. ಈ ಕಲ್ಮಶ ವಸ್ತುಗಳು ಹೊರಗೆ ಹೋಗಲು ಬಚ್ಚಲನ್ನು ಅಳವಡಿಸಲಾಗಿದೆ. ಈ ಬಚ್ಚಲಿನಿಂದ ಬಂದ ನೀರನ್ನು ವ್ಯವಸಾವಯಕ್ಕೆ ಉಪಯೋಗಿಸಲಾಗಿದೆ. ಬಚ್ಚಲಿನಲ್ಲಿ ನೀರು ಜಲಪಾತದಂತೆ ದುಮುಕುತ್ತದೆ. ಇದನ್ನು 'ರಾಮಾನುಜಗಂಗೆ', 'ತೊಣ್ಣೂರುಮದಗ', ಸ್ಥಳೀಯರ ಬಾಯಲ್ಲಿ 'ದೈಬಚ್ಚಲು' ಎಂದೆಲ್ಲಾ ಕರೆಯುತ್ತಾರೆ. ಈ ಮದಗ ಕೆರೆಯ ಆಕರ್ಷಣೀಯ ಕೇಂದ್ರ ಬಿಂದುವಾಗಿದೆ.

ಕೆರೆಯ ಪೂರ್ವದಿಕ್ಕಿಗೆ ಇರುವ ಬಂಡೆಗಳ ನಡುವೆ ಕಾಲುವೆಯೊಂದನ್ನು ನಿರ್ಮಿಸಿ ಕೃಷಿ ಭೂಮಿಗೆ ನೀರನ್ನು ಒದಗಿಸಲಾಗುತ್ತದೆ. ಈ ಕೆರೆಯ ನೀರು ಸುಮಾರು 2100 ಎಕರೆ ಪ್ರದೇಶಕ್ಕೆ ನೀರುಣಿಸುತ್ತದೆ. ಕೆರೆಯ ಕಟ್ಟೆ 390 ಅಡಿ ಉದ್ದ, 80 ಅಡಿ ಎತ್ತರ ಹಾಗೂ 5 ಅಡಿ ಅಗಲವಾಗಿದ್ದು, 0.462 ಟಿ.ಎಮ್.ಸಿ.ಯಷ್ಟು ಜಲಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿದೆ.[21] ಈ ಕೆರೆ ಟಿಪ್ಪುಸುಲ್ತಾನನ ಕಾಲದಲ್ಲಿ ಜೀರ್ಣೋದ್ಧಾರವಾಗಿ ಪ್ರಸಿದ್ಧತೆಯನ್ನು ಪಡೆದುಕೊಂಡಿತು. ಆದರೆ ಈತನೇ 1788ರಲ್ಲಿ ಶ್ರೀರಂಗಪಟ್ಟಣ ಮುತ್ತಲು ಬರುವ ಆಂಗ್ಲ ಪಡೆ ಉಪಯೋಗ ಪಡೆದುಕೊಳ್ಳುವುದೆಂದು ಕೆರೆಯನ್ನು ಒಡೆಸಿ ಹಾಕಿ, ನಂತರ ಅದನ್ನು ಸರಿಪಡಿಸಿದನೆಂದು ಹೇಳಲಾಗಿದೆ.[22]

4.2 ಕಟ್ಟೆಗಳು:

ಕಟ್ಟೆಗಳು ಸಹ ಜಲಸಂಗ್ರಹಗಳ ವಿಧಗಳಲ್ಲಿ ಒಂದಾಗಿದೆ. ಇವು ಕೆರೆಗಳಿಗಿಂತ ಚಿಕ್ಕದಾದ ವಿಸ್ತೀರ್ಣವನ್ನು ಹೊಂದಿವೆ. ತಗ್ಗಾದ ಪ್ರದೇಶಗಳಲ್ಲಿ ಮಳೆಯ ನೀರನ್ನು ಸಂಗ್ರಹಿಸುವ ಸಲುವಾಗಿ ಒಡ್ಡುಗಳನ್ನು ನಿರ್ಮಿಸಿ ನಿರ್ಮಾಣವಾಗಿರುತ್ತವೆ. ಫ್ರಾನ್ಸಿಸ್

ಬುಕಾನಾನ್ ದನಕರುಗಳಿಗೆ ಕುಡಿಯಲು ನೀರು ಒದಗಿಸುವ ಸಣ್ಣ ಜಲಾಶಯವೇ 'ಕಟ್ಟೆ' ಎಂದು ಅರ್ಥೈಸಿದ್ದಾನೆ.[23] ಇವುಗಳ ಮುಖ್ಯ ಉದ್ದೇಶ ಜಾನುವಾರುಗಳ ಉಪಯೋಗಕ್ಕಾಗಿ ನಿರ್ಮಾಣ. ಅಷ್ಟೇ ಅಲ್ಲದೆ ಜನರಿಗೆ ಗೃಹೋಪಯೋಗಿ ಕೆಲಸಕ್ಕೂ, ತರಕಾರಿ ಬೆಳೆಗಳಿಗೂ ಸಹಾಯಕವಾಗುತ್ತವೆ. ಇಂತಹ ಹಲವಾರು ಕಟ್ಟೆಗಳನ್ನು ಮೇಲುಕೋಟೆಯ ಪರಿಸರದಲ್ಲಿ ಕೊಳಗಳಂತೆಯೇ ಕಾಣಬಹುದಾಗಿದೆ.

ಇಲ್ಲಿನ ಕೆಲವು ಕಟ್ಟೆಗಳು ಯಾರ ಯಾರ ಸ್ಥಳೀಯ ಜಮೀನ್ದಾರರ ವ್ಯಾಪ್ತಿಗೆ ಒಳಪಟ್ಟ ಭೂಮಿಯಲ್ಲಿ ನಿರ್ಮಾಣ ಮಾಡಲಾಗಿದೆಯೋ ಅವರವರ ಹೆಸರುಗಳಿಂದ ಕರೆಯಲಾದರೆ, ಮತ್ತೆ ಕೆಲವು ಕಟ್ಟೆಗಳು ನಿರ್ಮಾಣ ಮಾಡಿದ ವ್ಯಕ್ತಿಯ ಹೆಸರಿನಿಂದ ಕರೆಯಲಾಗುತ್ತದೆ. ಇವುಗಳ ರಚನಾಕಾರರ ಬಗೆಯಾಗಲಿ, ನಿರ್ಮಾಣದ ಕಾಲವಾಗಲಿ ತಿಳಿಯಲು ನಿಖರವಾದ ದಾಖಲೆಗಳಿಲ್ಲ.

ಅಧ್ಯಯನದ ಅನುಕೂಲಕ್ಕಾಗಿ ಕಟ್ಟೆಗಳನ್ನು ಮೇಲುಕೋಟೆಯ ಕಟ್ಟೆಗಳು, ಕದಲಗೆರೆಯ ಕಟ್ಟೆಗಳು ಹಾಗೂ ಹೊಸಳ್ಳಿ ಗ್ರಾಮದ ಕಟ್ಟೆಗಳು ಎಂಬುದಾಗಿ ವಿಭಾಗಿಸಿಕೊಳ್ಳಲಾಗಿದೆ.

1. ಮೇಲುಕೋಟೆಯ ಕಟ್ಟೆಗಳು

ಅ) ಗೌರಿಕಟ್ಟೆ:

ಇದು ಮೇಲುಕೋಟೆಯಿಂದ ಕೆ.ಆರ್.ಪೇಟೆಗೆ ಹೋಗುವ ರಸ್ತೆಯ ಮಾರ್ಗ ಮಧ್ಯದಲ್ಲಿದೆ. ಇಲ್ಲಿ ಮೊದಲು ಗೌರಮ್ಮ ಎಂಬಾಕೆ ಪುಣ್ಯ ಸಂಪಾದನೆಗಾಗಿ ಕೊಳವನ್ನು ನಿರ್ಮಾಣ ಮಾಡಿದಳು, ಅದಕ್ಕಾಗಿ ಈ ಕೊಳವನ್ನು 'ಗೌರಿಕೊಳ'ವೆಂದು ಕರೆಯಲಾಯಿತು. ಇತ್ತೀಚೆಗೆ ಇದರ ಸುತ್ತುಲು ಇದ್ದ ತಗ್ಗಾದ ಭಾಗದಲ್ಲಿ ಇನ್ನಷ್ಟು ಮಣ್ಣನ್ನು ತೆಗೆಸಿ

ಕಟ್ಟೆಯನ್ನು ನಿರ್ಮಾಣ ಮಾಡಿಕೊಂಡಿದ್ದರಿಂದ 'ಗೌರಿಕಟ್ಟೆ' ಎಂದಾಯಿತು. ಈ ಕಟ್ಟೆಯ ಏರಿಯು ಪೂರ್ವಕ್ಕೆ ನಿರ್ಮಾಣವಾಗಿದ್ದು, ಒಂದು ತೂಬನ್ನು ಒಳಗೊಂಡಿದೆ. ಅಲ್ಲಿನ ಸುಮಾರು 15 ಎಕರೆ ಪ್ರದೇಶಕ್ಕೆ ಕೃಷಿಗಾಗಿ ನೀರನ್ನು ಪೂರೈಸುತ್ತಿದ್ದು, ಅಲ್ಲಿನ ಸುತ್ತಮುತ್ತಲಿನ ಜನರಿಗೆ ಗೃಹೋಪಯೋಗಿ ಕೆಲಸಕ್ಕೆ, ದನಕರುಗಳಿಗೆ ತುಂಬಾ ಉಪಯೋಗವಾಗುತ್ತಿದೆ. ಇದು ಮಳೆ ಆಶ್ರಯದಿಂದಲೇ ತುಂಬ ಬೇಕು. ಇತ್ತೀಚೆಗೆ ಮಳೆಯ ಪ್ರಮಾಣ ಕಡಿಮೆ ಆಗಿರುವುದರಿಂದ ಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಸಂಗ್ರಹವಾಗುತ್ತಿಲ್ಲ. ಆದರೆ ಅದರ ಒಳಗೆ ಇರುವ ಕೊಳದಲ್ಲಿ ಮಾತ್ರ ಮಳೆ ಇಲ್ಲದಿದ್ದರು ಅಂತರ್ಜಲ ಮೂಲದಿಂದ ನೀರು ಸ್ವಲ್ಪ ಪ್ರಮಾಣದಲ್ಲಿ ಇದ್ದೇ ಇರುತ್ತದೆ.

ಆ) ರಾಮ ಸಿಂಗನ ಕಟ್ಟೆ :

ರಾಮಸಿಂಗ ಎಂಬುವನು ನಿರ್ಮಿಸಿದ್ದರಿಂದ 'ರಾಮಸಿಂಗನಕಟ್ಟೆ' ಎಂದು ಕರೆಯುತ್ತಾರೆ. ಇದು ಮೇಲುಕೋಟೆಯ ಪಶ್ಚಿಮ ದಿಕ್ಕಿನಲ್ಲಿ ಕಣಿವೆಯಂತಹ ಪ್ರದೇಶದಲ್ಲಿ ನಿರ್ಮಿತವಾಗಿದೆ. ಇಲ್ಲಿ ನೀರನ್ನು ಸಂಗ್ರಹಿಸುವ ಉದ್ದೇಶದಿಂದ ದಕ್ಷಿಣಕ್ಕೆ ಅಡ್ಡಲಾಗಿ ಕಟ್ಟೆಯನ್ನು ಕಟ್ಟಲಾಗಿದೆ. ಬೆಟ್ಟದ ಮೇಲೆ ಬಿದ್ದ ಮಳೆಯ ನೀರು ಇಲ್ಲಿ ಸಂಗ್ರಹವಾಗುತ್ತದೆ. ಇದು ದನಕರುಗಳ ಉಪಯೋಗಕ್ಕಾಗಿ ನಿರ್ಮಿತವಾಗಿದೆ.

ಇ) ಸಿಹಿನೀರಿನ ಕಟ್ಟೆ :

ಇದು ಸಿಹಿನೀರಿನಕೊಳದ ಮೇಲ್ಭಾಗದಲ್ಲಿ ನಿರ್ಮಾಣವಾಗಿರುವುದರಿಂದ ಇದನ್ನು 'ಸಿಹಿನೀರಿನಕಟ್ಟೆ' ಎಂದು ಕರೆಯುವರು. ಅಲ್ಲದೆ ಈ ಕಟ್ಟೆಯನ್ನು 'ಉತ್ತದಕೊಳ' ಎಂತಲೂ ಕರೆಯುವರು. ಕಾರಣ ರಾಮಾನುಜಾಚಾರ್ಯರು ಉತ್ತದಲ್ಲಿ ಮುಳುಗಿದ್ದ ಚಲುವನಾರಾಯಣನನ್ನು ಹೊರಗೆ ತೆಗೆದಾಗ ಆ ಉತ್ತದಮಣ್ಣನ್ನು ತೆಗೆದು ಈ ಸ್ಥಳದಲ್ಲಿ ಹಾಕಿದ್ದರಿಂದ ಇದನ್ನು 'ಉತ್ತದಕೊಳ' ಎನ್ನುವರು.[24] ಆದರೆ ವಾಸ್ತವವಾಗಿ ಇದು ಕೊಳವಲ್ಲ ಇದೊಂದು ಕಟ್ಟೆಯಾಗಿದೆ. ಇದರ ಹಿಂಭಾಗದಲ್ಲಿ ದೊಡ್ಡ ಬಂಡೆ

ಇದ್ದು ಅದಕ್ಕೆ ಅಡ್ಡಲಾಗಿ ಈ ಕಟ್ಟೆಯನ್ನು ನಿರ್ಮಿಸಲಾಗಿದೆ. ಬೆಟ್ಟದ ಇಳಿಜಾರಿನಿಂದ ಬಂದ ಮಳೆಯ ನೀರು ಈ ಕಟ್ಟೆಯಲ್ಲಿ ಸಂಗ್ರಹವಾಗುತ್ತದೆ. ಇದರ ಸುತ್ತ ಕೃಷಿಗೆ ಒಳಪಟ್ಟ ಯಾವುದೇ ಭೂಮಿ ಇಲ್ಲ. ಆದರೂ ಸಹ ಇದರ ನಿರ್ಮಾಣದ ಉದ್ದೇಶವೆಂದರೆ ಬೆಟ್ಟದ ಮೇಲೆ ಬಿದ್ದ ನೀರು ಮೈತ್ರೇಯತೀರ್ಥ ಮತ್ತು ಸಿಹಿನೀರಿನ ಕೊಳಗಳು ತುಂಬಿ ಹರಿದು ಹಳ್ಳಕ್ಕೆ ವ್ಯರ್ಥವಾಗಿ ಹೋಗುತ್ತಿದ್ದರಿಂದ ಜಲ ಸಂಗ್ರಹಕ್ಕಾಗಿ ಈ ಕಟ್ಟೆಯನ್ನು ನಿರ್ಮಿಸಲಾಗಿದೆ. ಇದರಿಂದಾಗಿ ಸಿಹಿನೀರಿನ ಕೊಳ ಮತ್ತು ಮೈತ್ರೇಯ ಕೊಳದ ನೀರಿನ ಮಟ್ಟವನ್ನು ಕಾಯ್ದಿರಿಸಲಾಗಿದ್ದು, ಜೊತೆಗೆ ಜಾನುವಾರುಗಳಿಗೆ ಉಪಯೋಗವಾಗುತ್ತಿದೆ.

ಈ) ಸಿಡ್ಲುಕಟ್ಟೆ:

ವರನಂದಮ್ಮನ ದೇವಸ್ಥಾನಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ಈ ಕಟ್ಟೆಯು ಸಿಗುತ್ತದೆ. ಇದರ ಪಕ್ಕದಲ್ಲಿಯೇ ಪುಟ್ಟದಾದ ಎರಡು ಅವಳಿ ಕೊಳಗಳಿವೆ ಈ ಕಟ್ಟೆಯ ಪಕ್ಕದಲ್ಲಿ ದಪ್ಪದಾದ ಬಂಡೆಗಲ್ಲೊಂದು ಇದೆ. ಈ ಕಲ್ಲು ಸಿಡಿಲು ಬಡಿದು ಬೆಟ್ಟದಿಂದ ಬಂದು ಬಿದ್ದಿದೆ ಆದ್ದರಿಂದ ಇದರ ಪಕ್ಕದಲ್ಲಿರುವ ಈ ಕಟ್ಟೆಯನ್ನು ಸ್ಥಳೀಯರು 'ಸಿಡ್ಲುಕಟ್ಟೆ' ಅಥವಾ 'ಸಿಡ್ಲುಕಲ್ಲುಕಟ್ಟೆ'ಎಂದು ಕರೆಯುತ್ತಾರೆ. ಇದು ಬೆಟ್ಟದ ಕೆಳಭಾಗದಲ್ಲಿರುವುದರಿಂದ ಬೆಟ್ಟದ ಮೇಲೆ ಬಿದ್ದ ಮಳೆಯ ನೀರು ಇಲ್ಲಿ ಬಂದು ಶೇಖರವಾಗುತ್ತದೆ. ಇದು ತನ್ನ ಸುತ್ತಲಿನ ಜಮೀನಿನ ತರಕಾರಿ ಬೆಳೆಗಳಿಗೆ ಮತ್ತು ಜಾನುವಾರುಗಳಿಗೆ ಉಪಯೋಗವಾಗತ್ತಿದೆ.

2. ಕದಲಗೆರೆಯಲ್ಲಿನ ಕಟ್ಟೆಗಳು:

ಕದಲಗೆರೆ ಗ್ರಾಮವು ಮೇಲುಕೋಟೆಯ ಪೂರ್ವಕ್ಕೆ ಸು. 3 ಕಿ.ಮೀ. ದೂರದಲ್ಲಿದ್ದು, ಈ ಗ್ರಾಮದ ಮುಖಾಂತರವೇ ಮುಖ್ಯ ರಸ್ತೆಯನ್ನು ನಿರ್ಮಾಣ ಮಾಡಿದ್ದಾರೆ. ಈ ಗ್ರಾಮದಲ್ಲಿ ಮಳೆ ಆಶ್ರಿತವಾದ ನಿಂಗನಕಟ್ಟೆ, ಕುಂಚನಕಟ್ಟೆ, ಸೀಗಡಿಕಟ್ಟೆ, ಪೂಜಾರಿಕಟ್ಟೆ, ಕೆಂಪನಕಟ್ಟೆ, ಸಾಲುಕಟ್ಟೆ, ನಾರಣಪ್ಪನಕಟ್ಟೆ ಮತ್ತು ಸಿಂಗಮ್ಮನಕಟ್ಟೆ

ಎಂಬುವುಗಳು ಪ್ರಮುಖ ಕಟ್ಟೆಗಳಿವೆ. ಇಲ್ಲಿಯ ಗ್ರಾಮದ ವಿಶೇಷತೆಯೆಂದರೆ ಬಹುತೇಕ ಜಮೀನಿನಲ್ಲಿ ಸಣ್ಣ ಸಣ್ಣ ಖಾಸಗಿ ಬಾವಿಗಳನ್ನು ತಮ್ಮ ಕೃಷಿ ಸೌಕರ್ಯಕ್ಕಾಗಿ ಮತ್ತು ಕುಡಿಯಲು ಕಾಣಬಹುದಾಗಿದೆ. ಇಲ್ಲಿನ ಎಲ್ಲಾ ಕಟ್ಟೆಗಳು ಬಹಳ ವಿಸ್ತಾರವಾಗಿ, ಸ್ವಚ್ಛವಾಗಿದ್ದು ಯೋಗನರಸಿಂಹನಬೆಟ್ಟ ಮತ್ತು ಮುದಿಬೆಟ್ಟಗಳ ಮೇಲೆ ಬಿದ್ದ ಮಳೆಯ ನೀರಿನಿಂದ ಸಂಗ್ರಹವಾಗುತ್ತವೆ. ಈ ಕಟ್ಟೆಗಳೆಲ್ಲಾ ವ್ಯವಸಾಯಕ್ಕೆ ತುಂಬಾ ಉಪಯುಕ್ತವಾಗಿದ್ದು, ಇಲ್ಲಿನ ಜನರಿಗೆ ಯಾವುದೆ ನಾಲೆಯ ನೀರು ಇಲ್ಲದಿದ್ದರೂ ಸಹ ಕಟ್ಟೆಗಳಲ್ಲಿನ ನೀರನ್ನೇ ಬಳಸಿ ಉತ್ತಮವಾಗಿ ಭತ್ತದ ಬೆಳೆ ಮತ್ತು ತರಕಾರಿಯನ್ನು ಬೆಳೆಯುತ್ತಿದ್ದಾರೆ.

1. ನಿಂಗನ ಕಟ್ಟೆ:

ಈ ಕಟ್ಟೆಯು ಕದಲಗರೆಯ ಪಶ್ಚಿಮಕ್ಕೆ, ಮೇಲುಕೋಟೆಯ ಪೂರ್ವಕ್ಕಿದ್ದು, ಯೋಗನರಸಿಂಹನಬೆಟ್ಟದಲ್ಲಿ ಬಿದ್ದ ಮಳೆಯ ನೀರು ಇಲ್ಲಿ ಸಂಗ್ರಹವಾಗುತ್ತದೆ. ಈ ಕಟ್ಟೆಯು ಗಾತ್ರದಲ್ಲಿ ಬಹಳ ವಿಸ್ತಾರವಾಗಿದ್ದು, ಅಚ್ಚುಕಟ್ಟಾಗಿದ್ದು ಇದರ ಪೂರ್ವಕ್ಕೆ ಅರ್ಧಚಂದ್ರಾಕಾರದಲ್ಲಿ ಏರಿಯನ್ನು ನಿರ್ಮಿಸಲಾಗಿದ್ದು, ತೂಬನ್ನು ಏರಿಯ ಬಲ ಭಾಗದಲ್ಲಿ ಅಳವಡಿಸಲಾಗಿದೆ. ಇದರ ಆಗ್ನೇಯ ಭಾಗದಲ್ಲಿ ಕೋಡಿಯನ್ನು ನಿರ್ಮಿಸಲಾಗಿದ್ದು, ಕಟ್ಟೆ ತುಂಬಿ ಹೆಚ್ಚಾದ ನೀರು ಹರಿದು ಒದೆಹಳ್ಳವನ್ನು ಸೇರಿ ಕಾಡೇನಹಳ್ಳಿಕೆರೆಗೆ ಸೇರುತ್ತದೆ. ಈ ಕಟ್ಟೆಗೆ ಈಶಾನ್ಯ ಭಾಗದಲ್ಲಿ ಗಾಡಿ ಜಾಡನ್ನು ನಿರ್ಮಿಸಿದ್ದು ಊರಿನ ಕಾರ್ಯಗಳಿಗೆ ನೀರನ್ನು ಗಾಡಿಗಳಿಂದ ತೆಗೆದುಕೊಂಡು ಹೋಗಲು, ಕಟ್ಟೆಯಲ್ಲಿ ತೆಗೆದ ಹೂಳನ್ನು ಹೊರಗೆ ಸಾಗಿಸಲು ಹಾಗೂ ದನಕರುಗಳು ಬಂದು ನೀರನ್ನು ಕುಡಿಯಲು ಬಳಸಲಾಗುತ್ತಿದೆ. ಈ ಕಟ್ಟೆಯ ಒಳಗೆ ಒಂದು ಚಿಕ್ಕ ಕೊಳವನ್ನು ಸಹ ನಿರ್ಮಿಸಿದ್ದು, ಇದರಿಂದ ಬೇಸಿಗೆ ಕಾಲದಲ್ಲಿ ದನಕರುಗಳಿಗೆ ಕುಡಿಯಲು ಉಪಯೋಗವಾಗುತ್ತಿದೆ. ಈ ಕಟ್ಟೆಯು ಸುಮಾರು 15 ಎಕರೆ ಭೂ ಪ್ರದೇಶಕ್ಕೆ ನೀರನ್ನು ಒದಗಿಸುತ್ತಿದ್ದು, ಇದರ ನೀರಿನ ಮಟ್ಟವನ್ನು ಅನುಸರಿಸಿ ಬೆಳೆಯನ್ನು ಬೆಳೆಯಲಾಗುತ್ತದೆ. ಈ ಕಟ್ಟೆಯು ವಿಸ್ತಾರವಾಗಿದ್ದರೂ ಸಹ ಇತ್ತೀಚೆಗೆ ಅದರ

ವಿಸ್ತಾರಕ್ಕೆ ತಕ್ಕಂತೆ ನೀರು ಸಂಗ್ರಹವಾಗುತ್ತಿಲ್ಲ. ಕಾರಣ ಬೆಟ್ಟದ ಮೇಲೆ ಬಿದ್ದ ಮಳೆಯ ನೀರು ಈ ಕಟ್ಟೆಗೆ ಬಂದು ಸೇರಲು ನಿರ್ಮಿಸಿದ ದೋಣೆಗಳು ಶಿಥಿಲವಾಗಿದ್ದು ನೀರು ವ್ಯರ್ಥವಾಗುತ್ತಿರುವುದರಿಂದ ಮತ್ತು ಇತ್ತೀಚೆಗೆ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ನೀರಿನ ಮಟ್ಟ ಕಡಿಮೆಯಾಗಿದೆ.

2. ಕುಂಚನ ಕಟ್ಟೆ:

ಇದು ಮೇಲುಕೋಟೆಯ ಈಶಾನ್ಯ ದಿಕ್ಕಿಗಿದೆ. ಈ ಕಟ್ಟೆಯು ಮುದಿಬೆಟ್ಟದ ಪಕ್ಕದಲ್ಲಿರುವ ಹಂದಿಗುಡ್ಡದಲ್ಲಿ ಬಿದ್ದ ಮಳೆಯ ನೀರಿನಿಂದ ಸಂಗ್ರಹವಾಗುತ್ತದೆ. ಕಟ್ಟೆಯ ದಕ್ಷಿಣ ದಿಕ್ಕಿಗೆ ಅರ್ಧ ಚಂದ್ರಾಕಾರದ ಏರಿಯನ್ನು ನಿರ್ಮಿಸಲಾಗಿದ್ದು ಇದೊಂದು ಚಿಕ್ಕ ಕಟ್ಟೆಯಾಗಿದೆ. ಈ ಕಟ್ಟೆಯ ಏರಿಗೆ ಯಾವುದೇ ತೂಬನ್ನು ಅಳವಡಿಸದೇ ಜಳುಗಿನ (ತೇವಾಂಶ) ನೀರಿನಿಂದ ಇಲ್ಲಿನ ಸುಮಾರು 10 ಎಕರೆ ಕೃಷಿ ಭೂಮಿಗೆ ನೀರು ಪೂರೈಸಬಹುದಾಗಿದೆ. ಇಲ್ಲಿಯ ಕೃಷಿ ಭೂಮಿಯಲ್ಲಿ ಭತ್ತವನ್ನು ಬೆಳೆಯಬಹುದಾಗಿದೆ. ಈ ಕಟ್ಟೆಯು ಇತ್ತೀಚೆಗೆ ಶಿಥಿಲವಾಗಿದ್ದು ಏರಿಯ ಮೇಲೆಲ್ಲ ಗಿಡಗಂಟೆಗಳು ಬೆಳೆದುಕೊಂಡಿವೆ.

3. ಸೀಗಡಿಕಟ್ಟೆ (ಸಿಗ್ಡಗಟ್ಟೆ):

ಈ ಕಟ್ಟೆಯು ಕುಂಚನ ಕಟ್ಟೆ ಪಶ್ಚಿಮಕ್ಕೂ ಪೂಜಾರಿ ಕಟ್ಟೆಯ ಪೂರ್ವಕ್ಕೂ ಮಧ್ಯದಲ್ಲಿದೆ. ಇದು ಮುದಿಬೆಟ್ಟದ ತಳಭಾಗದಲ್ಲಿದ್ದು ಬಲಭಾಗದಲ್ಲಿ ಹಂದಿಮಂಟಿ ಗುಡ್ಡವು ಎಡಭಾಗದಲ್ಲಿ ಹಿಮ್ಮಡಿದಾಸನ ಗುಡ್ಡವು ಇದ್ದು ಇಲ್ಲಿ ಬಿದ್ದ ಮಳೆಯ ನೀರು ಈ ಕಟ್ಟೆಯಲ್ಲಿ ಸಂಗ್ರಹವಾಗುತ್ತದೆ. ಈ ಕಟ್ಟೆಯು ತುಂಬಾ ವಿಸ್ತಾರವಾಗಿದ್ದು ದಕ್ಷಿಣಕ್ಕೆ ಅಂಕುಡೊಂಕಾದ ಏರಿಯನ್ನು ಒಂದು ತೂಬನ್ನು ನಿರ್ಮಿಸಲಾಗಿದೆ. ಕಟ್ಟೆಯ ನೈರುತ್ಯಭಾಗದಲ್ಲಿ ಸಿಮೆಂಟ್ ಕಾಂಕ್ರೀಟ್ ಮತ್ತು ಕಲ್ಲು ಬಂಡೆಗಳನ್ನು ಅಳವಡಿಸಿ ದೊಡ್ಡದಾದ ಇಳಿಜಾರಿನಿಂದ ಕೂಡಿದ ಕೋಡಿಯನ್ನು ನಿರ್ಮಿಸಲಾಗಿದೆ. ಕೋಡಿಯಲ್ಲಿ ಹರಿಯುವ ನೀರು ಅಣೆಹಳ್ಳವನ್ನು ಸೇರುತ್ತದೆ. ಕಟ್ಟೆಯ ಆಗ್ನೇಯದಲ್ಲಿ ಗಾಡಿಜಾಡನ್ನು

ನಿರ್ಮಿಸಲಾಗಿದೆ. ಇದು ಸುಮಾರು 15–20 ಎಕರೆ ಭೂಮಿಗೆ ನೀರನ್ನು ಪೂರೈಸುತ್ತದೆ. ಇದರ ನೀರಿನ ಮಟ್ಟವನ್ನು ಅನುಸರಿಸಿ ಒಂದು ಅಥವಾ ಎರಡು ಫಸಲು ಭತ್ತದ ಬೆಳೆಯನ್ನು ಬೆಳೆಯುತ್ತಾರೆ. ಈ ಕಟ್ಟೆಯು ವಿಸ್ತಾರವಾಗಿದ್ದು ಅಚ್ಚುಕಟ್ಟಾಗಿದ್ದು ಹೆಚ್ಚು ನೀರು ಇಲ್ಲಿ ಸಂಗ್ರಹವಾಗುತ್ತದೆ. ಈ ಕಟ್ಟೆಯಲ್ಲಿ ಇನ್ನಷ್ಟು ಹೂಳನ್ನು ತೆಗೆಸಿದರೆ ಮತ್ತಷ್ಟು ಹೆಚ್ಚಿನ ನೀರನ್ನು ಸಂಗ್ರಹ ಮಾಡಬಹುದಾಗಿದೆ.

4. ಪೂಜಾರಿ ಕಟ್ಟೆ;

ಒಂದು ರೀತಿ ವಿಶೇಷ ಮಾದರಿಯಲ್ಲಿರುವ ಈ ಕಟ್ಟೆಯು ಸಿಗಡಿ ಕಟ್ಟೆಯ ಪಶ್ಚಿಮಕ್ಕಿದೆ. ಇದು ಮುದಿಬೆಟ್ಟದ ಕೆಳಗೆ ಅದಕ್ಕೆ ಚಾಚಿಕೊಂಡಂತಿದೆ. ಇಲ್ಲಿಗೆ ಹಿಮ್ಮಡಿದಾಸನ ಗುಡ್ಡದ ಮೇಲ್ಭಾಗದಲ್ಲಿ ಬಿದ್ದ ಮಳೆಯ ನೀರು ಬಂದು ಸೇರುತ್ತದೆ. ಇದು ಎರಡು ಹಂತದಲ್ಲಿ ನಿರ್ಮಾಣವಾಗಿದೆ. ಮೊದಲು ಚಿಕ್ಕದಾಗಿ ಕಟ್ಟೆಯನ್ನು ನಿರ್ಮಿಸಿ ದಕ್ಷಿಣಕ್ಕೆ ಏರಿಯನ್ನು ತೂಬನ್ನು ಸಹ ಅಳವಡಿಸಲಾಗಿತ್ತು. ನಂತರದ ದಿನಗಳಲ್ಲಿ ನೀರಿನ ಸಾಮರ್ಥ್ಯ ಹೆಚ್ಚಾಗಿದ್ದರಿಂದ ಮತ್ತೆ ಕಟ್ಟೆಯನ್ನು ಏರಿಯಿಂದ ಮುಂಭಾಗಕ್ಕೆ ಅಂದರೆ ದಕ್ಷಿಣಕ್ಕೆ ವಿಸ್ತರಿಸಿ ಮತ್ತೆ ದಕ್ಷಿಣಕ್ಕೆ ಏರಿಯನ್ನು ತೂಬನ್ನು ನಿರ್ಮಿಸಲಾಗಿದೆ. ಇದೊಂದು ದೊಡ್ಡ ಕಟ್ಟೆಯಾಗಿದ್ದು ಹಳೆಯ ಏರಿಯನ್ನು ಹೊಡೆಯದೆ ಹಾಗೆಯೇ ಬಿಟ್ಟಿರುವುದರಿಂದ ಇದೊಂದು ವಿಶೇಷ ಮಾದರಿಯಲ್ಲಿದ್ದು ಅವಳಿಕಟ್ಟೆಯಂತಿದೆ. ಈ ಕಟ್ಟೆಯ ಆಗ್ನೇಯ ದಿಕ್ಕಿಗೆ ಕೋಡಿ ಇದ್ದು ಇಲ್ಲಿ ತುಂಬಿ ಹರಿದ ನೀರು ಹಣೆಹಳ್ಳವನ್ನು ಸೇರುತ್ತದೆ. ಈ ಕಟ್ಟೆಯ ನೀರಿನ ಆಶ್ರಯದಿಂದ ಸುಮಾರು 10 ಎಕರೆ ಭೂಮಿಯಲ್ಲಿ ಭತ್ತವನ್ನು ಬೆಳೆಯುತ್ತಾರೆ. ಇಲ್ಲಿನ ನೀರಿನ ಮಟ್ಟಕ್ಕೆ ಅನುಗುಣವಾಗಿ ಒಂದು ಅಥವಾ ಎರಡು ಫಸಲು ಬೆಳೆಯನ್ನು ಬೆಳೆಯುತ್ತಾರೆ.

5. ಹುಚ್ಚಿಕಟ್ಟೆ:

ಇದು ಕುಂಚನಕಟ್ಟೆ ಮತ್ತು ಸಿಗಡಿಕಟ್ಟೆಯಿಂದ ಉತ್ತರಕ್ಕೆ ಸ್ವಲ್ಪ ದೂರ ಮುಂದೆ ಹೋದರೆ ಸಿಗುತ್ತದೆ. ಈ ಕಟ್ಟೆಯು ಹುಚ್ಚಮ್ಮ ಎಂಬಾಕೆಯ ಜಮೀನಿನಲ್ಲಿ ಇರುವುದರಿಂದ

'ಹುಚ್ಚಿಕಟ್ಟೆ' ಎಂದು ಕರೆಯುತ್ತಾರೆ. ಈ ಕಟ್ಟೆಯ ಏರಿಯನ್ನು ದಕ್ಷಿಣಕ್ಕೆ ನಿರ್ಮಿಸಲಾಗಿದೆ. ಈ ಕಟ್ಟೆಯ ಹಿಂಭಾಗದಲ್ಲಿರುವ ಗುಡ್ಡಗಳ ಮೇಲೆ ಬಿದ್ದ ಮಳೆಯ ನೀರು ಇಲ್ಲಿ ಬಂದು ಸಂಗ್ರಹವಾಗುತ್ತದೆ. ಈ ನೀರಿನ ಆಶ್ರಯದಿಂದ ಇಲ್ಲಿ ಭತ್ತವನ್ನು ಬೆಳೆಯುತ್ತಾರೆ.

6. ನಾರಣಪ್ಪನಕಟ್ಟೆ:

ಇದು ಕದಲಗೆರೆಯಿಂದ ಮೇಲುಕೋಟೆಗೆ ಹೋಗುವ ಮಾರ್ಗದಲ್ಲಿ ರಸ್ತೆಯ ಪಕ್ಕದಲ್ಲೇ ರಸ್ತೆಗೆ ಹೊಂದಿಕೊಂಡು ಎಡಭಾಗಕ್ಕೆ ಸಿಕ್ಕುತ್ತದೆ. ಇದಕ್ಕೆ ಯೋಗಾನರಸಿಂಹನ ಬೆಟ್ಟದ ಮೇಲೆ ಬಿದ್ದ ಮಳೆಯ ನೀರು ಮತ್ತು ತನ್ನ ಸುತ್ತಲಿನ ಎತ್ತರವಾದ ಪ್ರದೇಶದಲ್ಲಿ ಬಿದ್ದ ಮಳೆಯ ನೀರು ಈ ಕಟ್ಟೆಗೆ ಬಂದು ಸೇರುತ್ತದೆ. ಈ ಕಟ್ಟೆಯ ಪೂರ್ವಕ್ಕೆ ರಸ್ತೆ ಇದ್ದು, ಇದಕ್ಕೆ ತೂಬನ್ನು ಅಳವಡಿಸದೆ ರಸ್ತೆಯ ಮಧ್ಯದಲ್ಲಿ ಕೊಳವೆಯನ್ನು ಅಳವಡಿಸಿ, ಅದರ ಮುಖಾಂತರ ಕೆಳಗಿನ ಕೃಷಿ ಭೂಮಿಗೆ ನೀರನ್ನು ಒದಗಿಸಲಾಗುತ್ತದೆ. ಇಲ್ಲಿಯ ನೀರಿನ ಸಾಮರ್ಥ್ಯಕ್ಕೆ ಅನುಗುಣವಾಗಿ ಇದರ ವ್ಯಾಪ್ತಿಯ ಕೃಷಿ ಭೂಮಿಯಲ್ಲಿ ಬೆಳೆಗಳನ್ನು ಬೆಳೆಯುತ್ತಾರೆ.

7. ಸಿಂಗಮ್ಮನ ಕಟ್ಟೆ:

ಈ ಕಟ್ಟೆಯು ನಾರಣಪ್ಪನಕಟ್ಟೆಯ ಪಶ್ಚಿಮಕ್ಕೆ ಮೇಲ್ಭಾಗದಲ್ಲಿದೆ. ಈ ಕಟ್ಟೆಯು ಬಹಳ ವಿಸ್ತಾರವಾಗಿದ್ದು ಯೋಗಾನರಸಿಂಹನ ಬೆಟ್ಟದ ಮೇಲೆ ಬಿದ್ದ ಮಳೆಯ ನೀರಿನ ಆಶ್ರಯದಿಂದ ತುಂಬುತ್ತದೆ. ಈ ಕಟ್ಟೆಯ ಪೂರ್ವಕ್ಕೆ ಏರಿಯನ್ನು ನಿರ್ಮಿಸಲಾಗಿದೆ. ಇದರ ಆಗ್ನೇಯ ಭಾಗಕ್ಕೆ ಕೋಡಿಯನ್ನು ನಿರ್ಮಿಸಲಾಗಿದ್ದು, ಇಲ್ಲಿ ಕೋಡಿ ಬಿದ್ದ ನೀರು ನಾರಣಪ್ಪನಕಟ್ಟೆಗೆ ಸೇರುತ್ತಿತ್ತು. ಮೊದಲು ಕಟ್ಟೆಯು ಸಂಪೂರ್ಣವಾಗಿ ತುಂಬುತ್ತಿದ್ದು ಇತ್ತೀಚಿನ ಎಂಟು ವರ್ಷಗಳಿಂದ ಕಟ್ಟೆ ಕಾಲುಭಾಗ ಮಾತ್ರ ತುಂಬುತ್ತಿದ್ದು ದನಕರುಗಳ ಉಪಯೋಗಕ್ಕೆ ಮಾತ್ರ ಸೀಮಿತವಾಗಿದೆ. ಈ ಕಟ್ಟೆಯು ಸುತ್ತಲೂ ತೋಪುಗಳಿಂದ ಕೂಡಿರುವುದರಿಂದ 'ತೋಪಿನಕಟ್ಟೆ' ಎಂತಲೂ ಕರೆಯುತ್ತಾರೆ. ಇದರ ಸುತ್ತಲೂ ಮಾವು,

ಹಿಪ್ಪೆ, ತೆಂಗು, ನೇರಳೆ, ಹುಣಸೆ ಮತ್ತು ಬೇವು ಮೊದಲಾದ ಮರಗಳನ್ನು ಕಾಣಬಹುದಾಗಿದೆ. ಈ ಕಟ್ಟೆಯ ನೀರಿನ ಆಶ್ರಿತ ಜಮೀನು ಸುಮಾರು 20 ಎಕರೆ ಇದೆ. ಈ ಕಟ್ಟೆಯು ವಿಸ್ತಾರವಾಗಿದ್ದರೂ ಸಹ ಇತ್ತೀಚೆಗೆ ಅದರ ವಿಸ್ತಾರಕ್ಕೆ ತಕ್ಕಂತೆ ನೀರು ಸಂಗ್ರಹವಾಗುತ್ತಿಲ್ಲ. ಕಾರಣ ಬೆಟ್ಟದ ಮೇಲೆ ಬಿದ್ದ ಮಳೆಯ ನೀರು ಈ ಕಟ್ಟೆಗೆ ಬಂದು ಸೇರಲು ನಿರ್ಮಿಸಿದ ದೋಣೆಗಳು ಶಿಥಿಲವಾಗಿದ್ದು ನೀರು ವ್ಯರ್ಥವಾಗುತ್ತಿರುವುದರಿಂದ ಮತ್ತು ಇತ್ತೀಚೆಗೆ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ನೀರಿನ ಮಟ್ಟ ಕಡಿಮೆಯಾಗಿದೆ.

3. ಹೊಸಳ್ಳಿ ಗ್ರಾಮದ ಕಟ್ಟೆಗಳು:

ಅ) ಚಾಮನಕಟ್ಟೆ:

ಇದು ಮೇಲುಕೋಟೆಗೆ ಸುಮಾರು 5 ಕಿ.ಮೀ. ದೂರದಲ್ಲಿರುವ ಹೊಸಳ್ಳಿ ಎಂಬ ಗ್ರಾಮದಲ್ಲಿದೆ. ಪೂರ್ವಕ್ಕೆ ಏರಿಯನ್ನು ಆಗ್ನೇಯಕ್ಕೆ ಕೋಡಿಯನ್ನು ಒಳಗೊಂಡಿದೆ. ಈ ಕಟ್ಟೆಗೆ ಭದ್ರವಾದ ಏರಿಯನ್ನು ನಿರ್ಮಿಸಲಾಗಿದ್ದು ಎರಡು ಕಲ್ಲಿನ ತೂಬನ್ನು ಅಳವಡಿಸ ಲಾಗಿದೆ. ಈ ಕಟ್ಟೆಗೆ ಹಿಂದೆ ಇರುವ ಕರಿಕಲ್ಲುಗುಡ್ಡ ಮತ್ತು ಪುರದಮಂಟಿಯಿಂದ ಮಳೆಯ ನೀರು ಸಂಗ್ರಹವಾಗುತ್ತದೆ. ಇದು ಬೆಟ್ಟದ ತಪ್ಪಲಿನಲ್ಲಿಯೇ ಇದ್ದು, ಇದರ ಹಿಂದೆ ಯಾವುದೇ ಜಲಸಂಗ್ರಹಗಳು ಇಲ್ಲದೇ ಇರುವುದರಿಂದ ಇದಕ್ಕೆ ಹೆಚ್ಚಿನ ನೀರು ಬಂದು ಸಂಗ್ರಹವಾಗುತ್ತದೆ. ಕೋಡಿ ಬಿದ್ದ ನೀರು ಇದರ ಕೆಳಗಿರುವ ಶ್ಯಾನುಭೋಗನಕಟ್ಟೆಗೆ ಸೇರುತ್ತದೆ. ಇಲ್ಲಿಯ ನೀರನ್ನು ಬಳಸಿ ಸುಮಾರು 30 ಎಕರೆ ಭೂಪ್ರದೇಶದಲ್ಲಿ ಭತ್ತವನ್ನು ಬೆಳೆಯಲಾಗುತ್ತದೆ. ನೀರಿನ ಮಟ್ಟವನ್ನು ಅನುಸರಿಸಿ ಒಂದು ಅಥವಾ ಎರಡು ಫಸಲು ಬೆಳೆ ತೆಗೆಯುತ್ತಾರೆ.

ಆ) ಶ್ಯಾನುಭೋಗನ ಕಟ್ಟೆ:

ಚಾಮನಕಟ್ಟೆಯ ಪೂರ್ವಕ್ಕೆ ತಗ್ಗಾದ ಭಾಗದಲ್ಲಿ ಇರುವ ಕಟ್ಟೆಯೇ 'ಶ್ಯಾನುಭೋಗನ ಕಟ್ಟೆ'. ಈ ಕಟ್ಟೆಗೆ ಪೂರ್ವದಲ್ಲಿ ಏರಿಯನ್ನು, ಈಶಾನ್ಯ ಭಾಗದಲ್ಲಿ ಕೋಡಿಯನ್ನು ನಿರ್ಮಿಸಲಾಗಿದೆ. ಈ ಏರಿಗೆ ಎರಡು ಕಂಬಗಳುಳ್ಳ ತೂಬನ್ನು ನಿರ್ಮಿಸಲಾಗಿದೆ. ಈ ಕಟ್ಟೆಗೆ ಚಾಮನಕಟ್ಟೆಯಲ್ಲಿ ಕೋಡಿ ಬಿದ್ದ ನೀರು ಮತ್ತು ಸುತ್ತಲಿನ ಎತ್ತರ ಪ್ರದೇಶದ ನೀರು ಬಂದು ಸಂಗ್ರಹವಾಗುತ್ತದೆ. ಇದರ ಏರಿಯ ಕೆಳಗೆ ಹೇಮಾವತಿ ಕಾಲುವೆ ಬಂದಿರುವುದರಿಂದ ಈ ಕಟ್ಟೆಯ ಕೆಳಗಿನ ಜಮೀನಿಗೆ ಇದರಿಂದ ಯಾವುದೇ ಉಪಯೋಗವಿಲ್ಲ ಇದರ ನೀರೆಲ್ಲಾ ಕಾಲುವೆ ಸೇರುತ್ತದೆ.

ಅಡಿಟಿಪ್ಪಣಿಗಳು:

1. ಫ್ರಾನ್ಸಿಸ್ ಬುಕಾನಾನ್ : 'ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್ ಅಂಡ್ ಮಲಬಾರ್' ಸಂಪುಟ 1. ಪು. 49
2. ಸಿ.ಎಸ್.ವಾಸುದೇವನ್ : 'ಹಂಪಿ ಪರಿಸರದ ಕೆರೆಗಳು' ಪು. 34
3. ನೀಲತ್ತಳ್ಳಿ ಕಸ್ತೂರಿ : 'ಕರ್ನಾಟಕದಲ್ಲಿ ಕೆರೆ ನಿರಾವರಿ' ಪು. 12
4. ಅದೇ, ಪು. 12
5. ಅದೇ, ಪು. 12
6. ಡಾ.ಚನ್ನಕ್ಕ ಪಾವಟೆ : 'ಶಾಸನ ಸಂಜೀವಿನಿ' ಪು. 155
7. ಧ್ರುವನಾರಾಯಣ ಎಂ.(ಅನು), ಕೊಟ್ರಯ್ಯ ಸಿ.ಟಿ.ಎಂ. : 'ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ' ಪು. 74–75
8. ವತ್ಸಲ ಅಯ್ಯಂಗಾರ್ : 'ಕರ್ನಾಟಕದಲ್ಲಿನ ಕೆರೆಗಳು–ಐತಿಹಾಸಿಕ ದೃಷ್ಟಿಕೋನ', ಮಲ್ಲಿಕಾರ್ಜುನ ಹೊಸಪಾಳ್ಯ (ಸಂ), ನಶಿಸುತ್ತಿರುವ ನೀರಿನ ಜ್ಞಾನ, ಪು. 7

9. ಸಿ.ಎಸ್. ವಾಸುದೇವನ್ : ಪೂರ್ವೋಕ್ತ, ಪು. 9

10. ವತ್ಸಲ ಅಯ್ಯಂಗಾರ್ : ಪೂರ್ವೋಕ್ತ, ಪು. 9

11. ನಿಲತ್ತಳ್ಳಿ ಕಸ್ತೂರಿ : ಪೂರ್ವೋಕ್ತ, ಪು. 12

12. ಪ್ರೋ.ಪ್ರಭಾಕರ ಪಿ.ಆಪ್ಟೆ, ರವೀಂದ್ರನಾಥ್ ಆರ್.ಕರ್ಣಿಕ್ (ಸಂ) : 'ಮೇಲುಕೋಟೆ ಥ್ರೂ ದ ಏಜಸ್' ಪು. 85

13. ನೀರಾವರಿ ಇಲಾಖೆ

14. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 6 ಪಾಂ.ಪು. ಶಾಸನ ಸಂಖ್ಯೆ 138

15. ನೀರಾವರಿ ಇಲಾಖೆ

16. ಟೋಪೋಗ್ರಾಫಿ ಸೀಟ್ಸ್ 57 D/10

17. ಕೆ. ಅನಂತರಾಮು : 'ಸಕ್ಕರೆ ಸೀಮೆ' ಪು. 78

18. ಚಿಕ್ಕಮರಳಿ ಬೋರೇಗೌಡ : 'ಮುತ್ತಿನ ಕೆರೆ' ಪು 49–50

19. ಪಾರ್ಥಸಾರತಿ (ಸಂ) : 'ಮಂಡ್ಯ ಗೆಜೆಟಿಯರ್' ಪು. 915

20. ಕೆ.ಅನಂತರಾಮು : ಪೂರ್ವೋಕ್ತ, ಪು. 78–79

21. ಪಾರ್ಥಸಾರತಿ(ಸಂ) : ಪೂರ್ವೋಕ್ತ, ಪು. 915

22. ಕೆ.ಅನಂತರಾಮು : ಪೂರ್ವೋಕ್ತ, ಪು. 78

23. ಫ್ರಾನ್ಸಿಸ್ ಬುಕಾನಾನ್ : ಪೂರ್ವೋಕ್ತ. ಪು. 49

24. ಹರೆಹರ ಶ್ರೀರಾಮಶರ್ಮರವರ ಹೇಳಿಕೆ.

--------------o---------------

ಅಧ್ಯಾಯ – 5

ಉಪಸಂಹಾರ

ಗ್ರಂಥಸೂಚಿ

ಉಪಸಂಹಾರ:

ಎಲ್ಲಾ ಜೀವರಾಶಿಗಳಿಗೆ ನೀರು ಜೀವನಾಧಾರ. ಹಾಗೆಯೇ ನೀರು ವ್ಯವಸಾಯಕ್ಕೂ ಬೇಕಾದ ಅಗತ್ಯ ವಸ್ತು. ಅದಿಲ್ಲದಿದ್ದರೆ ವ್ಯವಸಾಯವೇ ಇಲ್ಲ ವ್ಯವಸಾಯವಿಲ್ಲದಿದ್ದರೆ ಆಹಾರವೂ ಇಲ್ಲ. ಜಲಸಂಪತ್ತು ಮುಗಿಯದ ಸಂಪತ್ತಾದರೂ ಭೂಮಿಯ ಮೇಲೆ ಸಿಹಿನೀರಿನ ಒಟ್ಟು ಪ್ರಮಾಣ 32 ದಶಲಕ್ಷ ಘನ ಕಿ.ಮೀ.ಗಳು ಮಾತ್ರ. ಬೆಳೆಯುತ್ತಿರುವ ಜನಸಂಖ್ಯೆ ಮತ್ತು ವಾಯುಗುಣದ ವೈಪರೀತ್ಯದಿಂದಾಗಿ ಇದರ ಕೊರತೆ ಈಗೀಗ ಹೆಚ್ಚಾಗುತ್ತಿದೆ. ಜೊತೆಗೆ ಬೆಳೆಯುತ್ತಿರುವ ನಗರಗಳ ಕೊಳಚೆ ನೀರು ಕೈಗಾರಿಕೆಗಳ ಕೆಟ್ಟ ರಾಸಾಯನಿಕ ವಸ್ತುಗಳು ನೀರನ್ನು ಕಲುಷಿತಗೊಳಿಸುತ್ತಿವೆ. ಕಲುಷಿತಗೊಂಡ ಈ ನೀರನ್ನು ಸಂಸ್ಕರಿಸಿ ಜಲಸಂರಕ್ಷಣೆ ಮಾಡಬೇಕು, ಸಾಧ್ಯವಾದೆಡೆ ಅಂರ್ಜಲದ ಪೂರ್ಣ ಉಪಯೋಗ ಪಡೆಯಬೇಕು.

ಇಂದು ಅಂತರ್ಜಲ ಮಟ್ಟ ಕುಸಿಯುತ್ತಿರುವುದರಿಂದ ನೀರಿನ ಅಭಾವಕ್ಕೆ ಪ್ರಮುಖ ಕಾರಣವಾಗಿದೆ. ಭೂಮಿಯೊಳಗೆ ಇಂಗುವ ನೀರಿನ ಪ್ರಮಾಣವು ಅತಿಕಡಿಮೆ ಇದಕ್ಕೆ ಪ್ರತಿಯಾಗಿ ನೀರಾವರಿ ಮುಂತಾದ ಉದ್ದೇಶಗಳಿಗೆ ಅಂತರ್ಜಲವನ್ನು ಹೊರತೆಗೆಯುವ ಪ್ರಮಾಣವು ಅತಿಹೆಚ್ಚು. ಇದಕ್ಕೆ ಹಲವು ಕಾರಣಗಳಿವೆ. ಉದಾಹರಣೆಗೆ ಜನಸಂಖ್ಯೆ ಹೆಚ್ಚಳ ಮತ್ತು ನಗರೀಕರಣ, ಸಾರ್ವಜನಿಕ ಕೆರೆಗಳ ಅದೃಶ್ಯ, ಕೊಳವೆ ಬಾವಿಗಳ ಹೆಚ್ಚಳ, ಕೃಷಿ ಹಾಗೂ ಮತ್ತಿತರ ಉದ್ದೇಶಗಳಿಗಾಗಿ ನೀರನ್ನು ಅತಿಯಾಗಿ ಬಳಸುವುದು ಮತ್ತು ಪೋಲುಮಾಡುವುದು ಮೊದಲಾದವು.

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಜನರು ಆದಷ್ಟು ಅಂತರ್ಜಲದ ಬಳಕೆಯನ್ನು ಕಡಿಮೆ ಮಾಡಿ, ಬಿದ್ದ ಮಳೆಯ ನೀರು ಸುಮ್ಮನೆ ವ್ಯರ್ಥವಾಗಿ ಹೋಗುವುದನ್ನು ತಡೆದು ಅಂತರ್ಜಲವನ್ನು ಪುನರುದ್ಧಿಗೊಳಿಸುವ ಸಲುವಾಗಿ ಕೊಳ, ಬಾವಿ, ಕಟ್ಟೆ, ಹಾಗೂ ಕೆರೆ ಮೊದಲಾದ ವಿಧಾನಗಳಿಂದ ಸಂಗ್ರಹಿಸಲು ಮುಂದಾಗಬೇಕು. ಪ್ರಾಚೀನ ಕಾಲದಲ್ಲಿ ಕೆರೆ, ಕಾಲುವೆ, ಕೊಳಗಳನ್ನು ನಿರ್ಮಿಸುವುದು ಬಾವಿಗಳನ್ನು

ತೋಡಿಸುವುದು, ಒಂದು ಧಾರ್ಮಿಕ ಕಾರ್ಯವಾಗಿದ್ದು, ಇಂತಹ ಕಾರ್ಯಗಳನ್ನು ಕೈಗೊಂಡ ವ್ಯಕ್ತಿ ಹಾಗೂ ವಂಶಸ್ಥರು ಪುಣ್ಯಕ್ಕೆ ಅರ್ಹರಾಗುತ್ತಾರೆ ಎಂಬ ನಂಬಿಕೆ ಗಾಢವಾಗಿದ್ದಿತು, ಹಾಗೂ ಇಂತಹ ಮಹೋನ್ನತ ಕಾರ್ಯಗಳಲ್ಲಿ ಭಾಗಿಯಾದವರಿಗೆ ಸಾಮಾಜಿಕ ಹಾಗೂ ರಾಜಕೀಯ ಮನ್ನಣೆ ದೊರಕುತ್ತಿದ್ದವು. ಹೀಗಾಗಿ ಧಾರ್ಮಿಕ ಮಹೋನ್ನತಿಯ ನಂಬಿಕೆಯ, ಸಮಾಜದ ಸುಭಿಕ್ಷೆಯ ಹಿನ್ನೆಲೆಯಲ್ಲಿ ಮೇಲುಕೋಟೆಯಲ್ಲಿ ಹಲವು ಜಲಸಂಗ್ರಹಗಳು ನಿರ್ಮಾಣವಾದವು ಹಾಗೂ ಮಾನ್ಯತೆ ಪಡೆದವು.

ಮೊದಲು ಇಲ್ಲಿನ ಕೊಳಗಳನ್ನು ವೀಕ್ಷಣೆ ಮಾಡಿದಾಗ ಬಹುತೇಕ ಕೊಳಗಳು ವಾಸ್ತುಶಿಲ್ಪ ದೃಷ್ಟಿಯಿಂದ ಅತ್ಯದ್ಭುತವಾದವುಗಳಾಗಿರುವುದರ ಜೊತೆಗೆ ಕೇವಲ ಧಾರ್ಮಿಕ ಮಹೋನ್ನತಿಯ ಉದ್ದೇಶಕ್ಕಾಗಿ ನಿರ್ಮಿಸಿ, ನಿರ್ವಹಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಹಾಗೂ ಹಲವು ಐತಿಹ್ಯಗಳು ಇಲ್ಲಿನ ಕೊಳಗಳೊಡನೆ ತಳುಕು ಹಾಕಿಕೊಂಡು ಧಾರ್ಮಿಕ ಆಚರಣೆಗಳ ಮಹತ್ವವನ್ನು ಹೆಚ್ಚಿಸಿ ಗಮನ ಸೆಳೆಯುತ್ತಿವೆ. ಇದೊಂದು ಎತ್ತರ ಪ್ರದೇಶವಾಗಿದ್ದು ತನ್ನ ಇಳಿಜಾರಿನ ತಗ್ಗಾದ ಭಾಗದ ಅಲ್ಲಲ್ಲಿ ಕೊಳಗಳನ್ನು ನಿರ್ಮಿಸಿ ಅವುಗಳಿಗೆ ನೀರು ಬಂದು ಸೇರಲು ಕಾಲುವೆಗಳನ್ನು ನಿರ್ಮಿಸುವುದರ ಜೊತೆಗೆ, ಶುದ್ಧೀಕರಣ ಹೊಂಡಗಳನ್ನು ಮಾಡಿದ್ದಾರೆ. ಇದರಿಂದಾಗಿ ಕೊಳಗಳ ನೀರು ಎಲ್ಲಿಯೂ ವ್ಯರ್ಥವಾಗದೆ ಅಂತಿಮವಾಗಿ ಕೆರೆಗಳನ್ನು ಸೇರುತ್ತದೆ. ಇಲ್ಲಿನ ಕೊಳಗಳು ಧಾರ್ಮಿಕ ಹಿನ್ನೆಲೆಯಲ್ಲಿ ರಚನೆಯಾಗಿದ್ದು ನೀರಾವರಿಗೆ ಯಾವುದೇ ಉಪಯೋಗವಿಲ್ಲ. ಕೆಲವು ಕೊಳಗಳು ಕಾಯಿಫಲ್ಯಗಳನ್ನು ಬೆಳೆಯಲು ಮಾತ್ರ ಅನುಕೂಲವಾಗಿವೆ. ಇಲ್ಲಿ ಬಹುತೇಕ ಕೊಳಗಳಿದ್ದರೂ ಕುಡಿಯುವ ನೀರಿಗಾಗಿ ಉಪಯೋಗಿಸುತ್ತಿರುವವು ಬೆರಳೆಣಿಕೆಯಷ್ಟು ಮಾತ್ರ. ಹಿಂದಿನ ಜನರು ನೈರ್ಮಲ್ಯತೆಗೆ ಹೆಚ್ಚು ಗಮನ ಕೊಟ್ಟು ಕುಡಿಯುವ ನೀರಿಗಾಗಿ ಒಂದು ಕೊಳ ನಿರ್ಮಿಸಿಕೊಂಡಿದ್ದರೆ ಪಕ್ಕದಲ್ಲಿ ಗೃಹೋಪಯೋಗಕ್ಕಾಗಿ, ದನಕರುಗಳಿಗಾಗಿ ಮತ್ತೊಂದು ಕೊಳವನ್ನು ಪಕ್ಕದಲ್ಲಿಯೇ ನಿರ್ಮಿಸಿಕೊಂಡು ನೀರಿನ ಸದ್ಬಳಕೆ ಮಾಡಿಕೊಳ್ಳುತ್ತಿದ್ದರು. ಆದರೆ ಇಂದೂ ಅಲ್ಲಿನ ಜನರು ನೈರ್ಮಲ್ಯತೆಗೆ ಹೆಚ್ಚಿನ ಗಮನ ಕೊಡದೆ ಕುಡಿಯುವ ನೀರಿನ

ಕೊಳಗಳಲ್ಲೂ ಬಟ್ಟೆ–ಪಾತ್ರೆ ತೊಳೆದು, ದನಕರುಗಳಿಗೆ ನೀರನ್ನು ಕುಡಿಸಿ ಕೊಳಗಳ ನೀರನ್ನು ಕಲುಷಿತಗೊಳಿಸುತ್ತಿದ್ದಾರೆ. ಮೇಲುಕೋಟೆಯಲ್ಲಿ 'ಹೊಸಬಾವಿ' ಮತ್ತು 'ಕಾಟೇರಿಬಾವಿ' ಎರಡು ಅಕ್ಕಪಕ್ಕದಲ್ಲಿದ್ದು, ಹೊಸಬಾವಿಯ ನೀರು ಕುಡಿಯಲು ಉಪಯೋಗವಾಗಿದ್ದು, ಇತರೆ ಕೆಲಸಗಳಿಗೆ ನಿಷೇಧಿಸಲಾಗಿದೆ. ಬಾವಿಯಿಂದ ನೀರನ್ನು ಹೊರತಂದು ದಡದ ಮೇಲೆ ಬಟ್ಟೆ ಪಾತ್ರೆ ತೊಳೆಯುತ್ತಾರೆ. ಪಕ್ಕದ ಕಾಟೇರಿಬಾವಿಯಲ್ಲಿ ನೀರಿದ್ದು, ಇದು ತುಂಬಾ ಕಲುಷಿತವಾಗಿರುವುದರಿಂದ ಬಳಕೆಯಾಗುತ್ತಿಲ್ಲ, ಅಲ್ಲಿನ ಜನರು ಇದನ್ನು ಸ್ವಚ್ಛಗೊಳಿಸಿ ಕೊಂಡು ಇಲ್ಲಿಯೇ ಗೃಹೋಪಯೋಗಿ ಕೆಲಸಕ್ಕೆ ಬಳಸಬಹುದಿತ್ತು.

ಇಲ್ಲಿನ ಜಲಸಂಗ್ರಹಗಳಿಗೆ ನೀರು ಬಂದು ಸೇರಲು ದೊಣೆಗಳನ್ನು ವೈಶಿಷ್ಟ್ಯಪೂರ್ಣವಾಗಿ ಹಿಂದಿನವರು ನಿರ್ಮಿಸಿದ್ದರು, ಆದರೆ ಇಂದು ಅಲ್ಲಿನ ಜನ ಅದರ ಮಹತ್ವವನ್ನು ಅರಿಯದೇ ದೊಣೆಗಳನ್ನು ನಾಶಮಾಡಿ ನೀರು ಪೋಲಾಗುವಂತೆ ಮಾಡುತ್ತಿರುವುದು ಬೇಸರದ ಸಂಗತಿಯಾಗಿದೆ. ಕೆಲವು ಕೊಳಗಳು ಸೋಪಾನಗಳು ಶಿಥಿಲಾವಸ್ಥೆಯನ್ನು ತಲುಪುತ್ತಿವೆ, ಬಹುಪಾಲು ಕೊಳಗಳು ಮುಚ್ಚಿ ಹೋಗಿವೆ. ಇಂದು ಕಾಡುತ್ತಿರುವ ನೀರಿನ ಸಮಸ್ಯೆಯ ಪರಿಹಾರಕ್ಕಾಗಿ ಮಳೆಕೊಯ್ಲು ನಡೆಯುತ್ತಿದ್ದರೆ, ಅಂದು ರಚಿತವಾದ ಮಳೆ ಕೊಯ್ಲಿನಂತಹ ಪ್ರಾಚೀನ ಜಲಸಂಗ್ರಹಗಳ ಮಹತ್ವ ಜನತೆ ಅರಿಯದಾಗಿದ್ದಾರೆ. ಇದಕ್ಕೆ ಸಂಬಂಧಪಟ್ಟವರು ಆದಷ್ಟು ಬೇಗನೆ ಕಾಳಜಿವಹಿಸಿ ಇವುಗಳನ್ನು ಜೀರ್ಣೋದ್ಧಾರ ಮಾಡುವುದರ ಜೊತೆಗೆ ನೈರ್ಮಲ್ಯತೆಯನ್ನು ಕಾಪಡಿದರೆ ಪ್ರಾಚ್ಯವಸ್ತುಗಳನ್ನು ಕಾಪಾಡಿದಂತಾಗುತ್ತದೆ. ಅಲ್ಲದೆ ಹಿಂದಿನ ಜನರ ಪರಿಶ್ರಮಕ್ಕೆ ಬೆಲೆ ಕೊಟ್ಟಂತಾಗುತ್ತದೆ.

ಮೇಲುಕೋಟೆಯಲ್ಲಿನ ಪ್ರತಿಯೊಬ್ಬ ಬ್ರಾಹ್ಮಣರು ಮನೆಯಲ್ಲಿಯೂ ಮಡಿವಂತಿಕೆ ಹಿನ್ನೆಲೆಯಲ್ಲಿ ಒಂದು ಅಥವಾ ಎರಡು ಬಾವಿಗಳಿದ್ದು ದಿನನಿತ್ಯದ ನೀರಿನ ಬಳಕೆಯನ್ನು ಪೂರೈಸುತ್ತಿವೆ. ಮಡಿವಂತಿಕೆಯ ಹಿನ್ನೆಲೆಯಲ್ಲಿ ರಚನೆಯಾಗಿದ್ದರೂ ಸಹ ವೈಜ್ಞಾನಿಕವಾಗಿ ಬಾವಿಯ ನೀರು ಶುಭ್ರವಾಗಿದ್ದು, ಕುಡಿಯಲು ಯೋಗ್ಯವಾದ ನೀರಾಗಿದೆ.

ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಚಂದ್ರಗುಪ್ತಮೌರ್ಯನ ಕಾಲದಿಂದಲೂ ಸಹ ಕೆರೆಗಳ ನಿರ್ಮಾಣ ಕಾರ್ಯವು ಇತ್ತೆಂದು ಶಾಸನಗಳ ಆಧಾರದಿಂದ ತಿಳಿದುಬರುತ್ತದೆ. ಹಾಗೆಯೇ ಈ ಕೆರೆಗಳ ನಿರ್ಮಾಣ ಕಾರ್ಯವನ್ನ ಅನೇಕ ಅರಸು ಮನೆತನದವರು ಸಹ ನಿರ್ವಹಿಸುತ್ತಾ ಬಂದಿರುವುದನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಬದಲಾಗುತ್ತಿರುವ ಹವಾಮಾನ ಹಾಗೂ ಧಾರ್ಮಿಕ, ಸಾಮಾಜಿಕ ನಂಬಿಕೆಗಳಿಂದಾಗಿ ಕೆರೆ–ಕಟ್ಟೆಗಳು ನಿರ್ಮಾಣವಾಗುತ್ತಾ ಬಂದಿವೆ. ದೇವಾಲಯಕ್ಕೆ ಬರುವ ಭಕ್ತರಿಗೆ, ಕುಡಿಯಲು, ಸ್ನಾನಕ್ಕೆ, ಶುಚಿಕಾರ್ಯಕ್ಕೆ ದೇವರ ಜಮೀನಿಗೆ, ಮೂಕ ಪ್ರಾಣಿ–ಪಕ್ಷಿಗಳಿಗೆ ಹಾಗೂ ಜನರೆಲ್ಲರ ಉಪಯೋಗಕ್ಕೆ ಕೆರೆ–ಕಟ್ಟೆಗಳನ್ನು ನಿರ್ಮಿಸುವುದು ಪುಣ್ಯದ ಕಾರ್ಯವೆಂದು ಹಿಂದಿನವರು ಭಾವಿಸಿದ್ದರಿಂದ ಧಾರ್ಮಿಕ ಮೂಲನೆಲೆಯಾಗಿ ಪರಿಭಾವಿಸಬಹುದು. ಅಲ್ಲದೆ ಬಹಳ ಮುಖ್ಯವಾಗಿ ಸಮಾಜದ ಬೆನ್ನೆಲುಬಿನಂತಿರುವ ರೈತರಿಗೆ ನೀರಾವರಿ ಸೌಕರ್ಯ ಒದಗಿಸುವುದು ಪಾರಮಾರ್ಥಿಕ ಕಾರ್ಯವೆಂದು ಪರಿಗಣಿಸಿ ಅರಸರು, ಅರಸಿಯರು ಹಾಗೂ ಶ್ರೀಸಾಮಾನ್ಯರು ಮೊದಲಾದವರು ಕೆರೆ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಮೇಲುಕೋಟೆಯ ಪರಿಸರದಲ್ಲಿ ಹಲವು ಕೆರೆ–ಕಟ್ಟೆಗಳು ಬಿದ್ದ ಮಳೆಯ ನೀರನ್ನು ಸಂಗ್ರಹ ಮಾಡಿ ಅಲ್ಲಿನ ಜನರಿಗೆ ಜೀವನಾಡಿಯಂತೆ ಕಾರ್ಯನಿರ್ವಹಿಸುತ್ತಿವೆ. ಕೆಲವು ಕೆರೆ–ಕಟ್ಟೆಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದು, ವ್ಯವಸಾಯಕ್ಕೆ ಒಳಪಡುವ ಭೂಮಿ ಹೆಚ್ಚಾಗಿದ್ದರೆ, ಕೆಲವು ಕೆರೆ–ಕಟ್ಟೆಗಳು ಹೆಚ್ಚಿನ ಪ್ರಮಾಣದ ನೀರನ್ನು ಹೊಂದಿದ್ದು, ವ್ಯವಸಾಯಕ್ಕೆ ಒಳಪಡುವ ಭೂಮಿ ಮಾತ್ರ ಕಡಿಮೆ ಇದೆ. ಇಲ್ಲಿನ ಹೊಸಕೆರೆ ಎಂಬ ಕೆರೆಯು ಹೆಚ್ಚು ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿದ್ದು, ಅದರ ಏರಿಯನ್ನು ವಿಸ್ತರಿಸಿ ನೀರಿನ ಸಂಗ್ರಹ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಬಹುದಾಗಿದೆ. ಇದರಿಂದಾಗಿ ಅಲ್ಲಿನ ಕೃಷಿಕರಿಗೆ ಉಪಯೋಗವಾಗಿ ಆರ್ಥಿಕ ಪ್ರಗತಿ ಸಾಧಿಸಬಹುದಾಗಿದೆ. ಹಾಗೆಯೇ ತೊಣ್ಣೂರು ಕೆರೆಯ ನಿರ್ಮಾಣ ವಿಶಿಷ್ಟವೂ, ಅದ್ಭುತರಚನಾ ಕೌಸಲ್ಯದಿಂದ ಕೂಡಿದ್ದಾಗಿದ್ದು ಇದೊಂದು ಪ್ರಾಚೀನ ಕೆರೆಯಾಗಿದೆ. ಇದು ಬಹುವಿಸ್ತಾರವಾಗಿದ್ದು ಅಲ್ಲಿನ ಸುತ್ತಮುತ್ತಲಿನ ಜನರಿಗೆ ಜೀವನಾಡಿಯಂತಿದೆ.

ಕೆಲವು ಕೆರೆ–ಕಟ್ಟೆಗಳಿಗೆ ನೀರಿನ ದೋಣೆಗಳು ಮುಚ್ಚಿ ಹೋಗಿದ್ದು, ನೀರಿನ ಸಂಗ್ರಹ ಸಾಮರ್ಥ್ಯ ಕಡಿಮೆಯಾಗಿದೆ. ಕೆಲವು ಕೆರೆ–ಕಟ್ಟೆಗಳು ಹೂಳು ತುಂಬಿದ್ದು ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಕೆಲವು ಕೆರೆ–ಕಟ್ಟೆಗಳ ಏರಿಯ ಮೇಲೆ ಮುಳ್ಳಿನ ಪೊದೆಗಳು ಏರಿಯೇ ಕಾಣದಷ್ಟು ಮುಚ್ಚಿಕೊಂಡಿವೆ. ಕೆಲವು ಕೆರೆ–ಕಟ್ಟೆಗಳ ತೂಬುಗಳು ಮುಚ್ಚಿಹೋಗಿ ನಿಷ್ಕ್ರಿಯವಾಗಿದೆ. ಕೆರೆಗಳ ನಿರ್ವಹಣೆಯಲ್ಲಿ ಅಂದಿನ ಗ್ರಾಮಸಭೆಗಳು ಹಾಗೂ ಮಹಾಜನರು ವಹಿಸಿದ ಪಾತ್ರ ಪ್ರಧಾನವಾದುದಾಗಿದೆ. ಆದರೆ ಇಂದು ಕೆರೆ–ಕಟ್ಟೆ, ಬಾವಿ, ಕೊಳ ಮೊದಲಾದ ಜಲಸಂಗ್ರಹಗಳ ನಿರ್ವಹಣೆಯಲ್ಲಿ ಜನತೆ ಮತ್ತು ಸರ್ಕಾರದ ಅಧೀನಕ್ಕೆ ಒಳಪಟ್ಟ ಜಲಸಂಗ್ರಹ ನಿರ್ವಹಣಾ ಕಛೇರಿಗಳ ನಿರ್ಲಕ್ಷ್ಯ ಪ್ರಧಾನವಾಗಿ ಕಂಡು ಬರುತ್ತದೆ.

ಧಾರ್ಮಿಕ ಕೇಂದ್ರವಾಗಿ ಪ್ರವೃದ್ಧಮಾನಕ್ಕೆ ಬಂದ ಮೇಲುಕೋಟೆ ಕ್ರಮೇಣ ಜನವಸತಿಗಳು ವಿಸ್ತಾರಗೊಂಡುದುದರ ಪರಿಣಾಮವಾಗಿ, ಜಲಸಂಗ್ರಹಗಳು ಹೆಚ್ಚಾಗಿ ನಿರ್ಮಾಣಗೊಳ್ಳಬೇಕಾದ ಅಗತ್ಯತೆಯೂ ಸೇರಿದಂತೆ, ವ್ಯಾಪಕ ಸಂಖ್ಯೆಯಲ್ಲಿ ಕಂಡು ಬಂದವು.

ಜಲಸಂಗ್ರಹಗಳು ಆ ಕಾಲಘಟ್ಟದ ತಂತ್ರಜ್ಞಾನ ಕಚ್ಚಾವಸ್ತುಗಳ ಲಭ್ಯತೆ, ಬಳಕೆಯಲ್ಲಿ ಕುಶಲತೆ ಹಾಗೂ ಜಲಪರಿಜ್ಞಾನದ ಅಂಶಗಳು ಮೇಲುಕೋಟೆ ಮತ್ತು ಪರಿಸರದ ಜಲಸಂಗ್ರಹಾರಗಳಲ್ಲಿ ಪರಿಣಾಮಕಾರಿಯಾಗಿ ಬಳಕೆಯಾಗಿರುವುದು ಕಂಡು ಬರುತ್ತದೆ. ಮಳೆಕೊಯ್ಲು ಪರಿಜ್ಞಾನ ಸಂಪೂರ್ಣ ಬಳಕೆ ಮೇಲುಕೋಟೆ ಮತ್ತು ಪರಿಸರದ ಜಲಸಂಗ್ರಹಗಳ ಅಧ್ಯಯನದಿಂದ ಕಂಡುಬರುತ್ತದೆ.

ಇಂತಹ ಪಾರಂಪರಿಕ ಜಲಸಂಗ್ರಹಗಳ ಸ್ಥಿತಿಗತಿ ಶೋಚನೀಯವಾಗಿದ್ದು, ನೀರಿನ ಸಂಪನ್ಮೂಲಗಳ ಮೇಲಿನ ಅವಲಂಬನೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಅವುಗಳ ಸಂರಕ್ಷಣೆ ಮತ್ತು ಪುನಶ್ಚೇತನ ಪ್ರಸ್ತುತ ಅಗತ್ಯಗಳ ಆದ್ಯತೆಯಲ್ಲಿ ಪ್ರಾಶಸ್ತ್ಯ ನೀಡಬೇಕಾದುದು ಅಗತ್ಯವೆನಿಸುತ್ತದೆ.

ಸಾಮಾನ್ಯವಾಗಿ ರಾಜ್ಯ ಪ್ರಾಯೋಜಕತ್ವದ ನೀರಾವರಿ ಕಾಮಗಾರಿಗಳು, ರಾಜಧಾನಿ ಅಥವಾ ಕೇಂದ್ರಸ್ಥಾನಗಳಲ್ಲಿ ಮತ್ತು ಅದರ ಸುತ್ತಲೇ ಕೇಂದ್ರೀಕೃತಗೊಳ್ಳುತ್ತವೆ. ಅಧೀನ ಪ್ರದೇಶಗಳಲ್ಲಿ ಇಂತಹ ಕಾಮಗಾರಿಗಳು ವಿರಳ. ಆದರೆ ಮೇಲುಕೋಟೆ ಮತ್ತು ಅದರ ಪರಿಸರದಲ್ಲಿ ನೀರಾವರಿ ಕಾಮಗಾರಿಗಳು ವ್ಯಾಪಕವಾಗಿ ಕಂಡುಬರುವುದೇ ವಿಶೇಷವಾಗಿದೆ.

ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪೂರಕವಾಗಿ ಇಲ್ಲಿನ ಜಲಸಂಗ್ರಹಗಳು ರೂಪುಗೊಂಡಿವೆ. ಇವುಗಳಲ್ಲಿ ರಾಜರು, ರಾಣಿಯರು, ಮಂತ್ರಿ-ಸಾಮಂತರು ಸಹಜವಾಗಿ ಆಸಕ್ತಿ ತೋರುವುದು ಕಂಡು ಬರುತ್ತದೆ. ಜನಸಮುದಾಯದ ವ್ಯಕ್ತಿಗಳು, ವ್ಯಾಪಾರಿಗಳು, ವೃದ್ಧರು, ಮಹಿಳೆಯರಾದಿಯಾಗಿ ಸಾಮಾನ್ಯವರ್ಗದ ಜನರೂ ಸಹ ಈ ತೆರನಾದ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ, ದುರಸ್ತಿಗಳಲ್ಲಿ ಸಹಜವಾಗಿ ಆಸಕ್ತಿ ತೋರಿ ತಮ್ಮನ್ನು ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ.

ಅದೇನೆ ಇದ್ದರೂ ಮೇಲುಕೋಟೆ ಪರಿಸರದ ಜನಸಮುದಾಯಗಳು ತಮ್ಮ ಪ್ರದೇಶದಲ್ಲಿ ಬೀಳುವ ಮಳೆಯ ನೀರನ್ನು ಸಂಗ್ರಹಿಸಲು ಮಾಡಿಕೊಂಡಿರುವ ಜಲಸಂಗ್ರಹಗಳು ಧಾರ್ಮಿಕ ಹಾಗೂ ಐತಿಹಾಸಿಕ ದೃಷ್ಟಿಯಿಂದ ತುಂಬಾ ಗಮನಾರ್ಹವಾಗಿವೆ. ಆ ಕಾಲದ ಪಾರಂಪರಿಕ 'ಜ್ಞಾನ ಸಂಪತ್ತು' ಎಲ್ಲಾ ಕಾಲಕ್ಕೂ ಕಣ್ಮರೆಯಾಗದೆ ಪುನಶ್ಚೇತನಗೊಳ್ಳಬೇಕಾದುದು ಅಗತ್ಯವಷ್ಟೇ ಅಲ್ಲ ಅನಿವಾರ್ಯವೂ ಆಗಿದೆ.

ಗ್ರಂಥಸೂಚಿ:

ಪ್ರಾಥಮಿಕ ಆಕರಗಳು:

1. ಎಫಿಗ್ರಾಫಿ ಆಫ್ ಕರ್ನಾಟಿಕ : ಸಂಪುಟ 6, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

2. "ಕರ್ನಾಟಕ ರಾಜ್ಯ ಗ್ಯಾಸೆಟಿಯರ್", ಸೂರ್ಯನಾಥ್ ಕಾಮತ್ (ಸಂ), ಮೂರು ಸಂಪುಟಗಳು, ಕರ್ನಾಟಕ ಸರ್ಕಾರ, ಬೆಂಗಳೂರು.

3. ಭಾರತ ಸರ್ಕಾರದ ಕಾರ್ಯದರ್ಶಿಯವರಿಗೆ ಮೈಸೂರು ಚೀಫ್ ಕಮೀಷನರ್ ಬರೆದ ದಿನಾಂಕ: 04–03–1871 ಪತ್ರಕ್ಕೆ ಲಗತ್ತಿಸಿದ ಮೇಜರ್ ಸ್ಯಾಂಕಿಯವರ ಟಿಪ್ಪಣಿ. ನಂ.6 ಪ್ಯಾರ–3.

4. ಫ್ರಾನ್ಸಿಸ್ ಬುಕಾನಾನ್ : 'ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್ ಅಂಡ್ ಮಲಬಾರ್' ಸಂಪುಟ 1.

5. "ಮಂಡ್ಯ ಜಿಲ್ಲಾ ಗೆಜೆಟಿಯರ್", ಪಾರ್ಥಸಾರಥಿ (ಸಂ), ಕರ್ನಾಟಕ ಸರ್ಕಾರ, ಬೆಂಗಳೂರು.

6. ಟೋಫೋಸೀಟ್ಸ್, 57 D/10, ದ್ವಿತೀಯ ಮುದ್ರಣ.

ಅನುಷಂಗಿಕ ಆಕರಗಳು:

1. ಅನಂತರಾಮು. ಕೆ : "ಸಕ್ಕರೆ ಸೀಮೆ", ಅನಂತ ಪ್ರಕಾಶನ, ಮೈಸೂರು.

2. ಅಸೂರಿತಿರುನಾರಾಯಣಯ್ಯಂಗಾರ್, ಅಸೂರಿಶ್ರೀನಿವಾಸಯ್ಯಂಗಾರ್: "ಜೀರ್ಣೋದ್ಧಾರ ಮತ್ತು ಶಾಸನಗಳು" ವೈ.ಬಿ.ಸುಬ್ಬಯ್ಯ ಅಂಡ್ ಸನ್ಸ್,ಬೆಂಗಳೂರು

3. ಅಸೂರಿಸಂಪತ್ಕುಮಾರಾಚಾರ್ಯರು, ಅಸೂರಿ ಶ್ರೀನಿವಾಸಯ್ಯಂಗಾರ್ :
"ಯಾದವಗಿರಿ ಜೀರ್ಣೋದ್ಧಾರ"

4. ಆಂಧ್ರಪೂರ್ಣರು : "ಪ್ರಪನ್ನಾಂಮೃತ"

5. ಗರುಡಾಚಾರ್. ಸಿ.ವಿ : "ತಿರುನಾರಾಯಣ ವೈರಮುಡಿ ಮಹತ್ವ", ಪ್ರಕಾಶಕರು, ಟಿ.ಶೇಷಾದ್ರಿ ಅಯ್ಯಂಗಾರ್, ಬೆಂಗಳೂರು.

6. ಚನ್ನಕ್ಕ ಪಾವಟೆ : "ಶಾಸನ ಸಂಜೀವಿನಿ"

7. ಚಿಕ್ಕಮರಳಿ ಬೋರೇಗೌಡ (ಸಂ) : "ಮುತ್ತಿನಕೆರೆ", ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಪಾಂಡವಪುರ.

8. ಧೃವ ನಾರಾಯಣ್. ಎಂ (ಅನು) : 2001 'ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ', ಕನ್ನಡ ವಿಶ್ವವಿದ್ಯಾಲಯ, ಹಂಪಿ.

9. ದೀಕ್ಷಿತ್. ಜಿ.ಎಸ್ (ಮೂಲ), ನೀಲತ್ತಳ್ಳಿ ಕಸ್ತೂರಿ(ಅನು) : "ಕರ್ನಾಟಕದಲ್ಲಿ ಕೆರೆ ನೀರಾವರಿ", ಕನ್ನಡ ವಿಶ್ವವಿದ್ಯಾಲಯ, ಹಂಪಿ.

10. ದೇ.ಜ.ಗೌ.(ಸಂ) : "ಸಿರಿಯೊಡಲು", ಸ್ವಾಗತ ಸಮಿತಿ, 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ.

11. ನಾಗರಾಜು. ಹೆಚ್.ಎಂ : "ಯದುಗಿರಿಯ ನಾಡು", ಹೇಮಾಶ್ರೀ ಪ್ರಕಾಶನ, ಮೈಸೂರು

12. ಪ್ರಭಾಕರ ಪಿ.ಆಪ್ಟೆ, ರವೀಂದ್ರನಾಥ್ ಆರ್.ಕರ್ಣಿಕ್ (ಸಂ) : "ಮೇಲುಕೋಟೆ ಥ್ರೂ ದ ಏಜಸ್", ಸಂಸ್ಕೃತ ಸಂಶೋಧನ ಅಕಾಡೆಮಿ, ಮೇಲುಕೋಟೆ.

13. ಪು.ತಿ.ನ. : "ಮೇಲುಕೋಟೆ", ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು.

14. ಬಾ.ರಾ. ಗೋಪಾಲ್ : "ಕರ್ನಾಟಕದಲ್ಲಿ ರಾಮಾನುಜಾಚಾರ್ಯರು", ಪ್ರಸಾರಂಗ, ಮೈಸೂರು.

15. ಮಲ್ಲಿಕಾರ್ಜುನ ಹೊಸಪಾಳ್ಯ (ಸಂ) : "ನಶಿಸುತ್ತಿರುವ ನೀರಿನ ಜ್ಞಾನ", ಕಮ್ಯುನಿಕೇಷನ್ ಫಾರ್ ಡೆವಲಪ್‌ಮೆಂಟ್ ಲರ್ನಿಂಗ್, ಬೆಂಗಳೂರು.

16. ಮಂಜಪ್ಪಶೆಟ್ಟಿ. ಎಂ.ಪಿ (ಸಂ) : "ಯಾದವಗಿರಿ ಮಾಹಾತ್ಮ್ಯಂ", ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

17. ರಾಜಾರಾಮ್ ಹೆಗಡೆ (ಸಂ) : "ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ", ಕನ್ನಡ ವಿಶ್ವವಿದ್ಯಾಲಯ, ಹಂಪಿ.

18. ರತ್ನಮ್ಮ ಕೆ.ಎಸ್, ಸ. ನ. ಗಾಯತ್ರಿ: "ವರನಂದಿ ಕಲ್ಯಾಣ", ಸಂವಹನ ಪ್ರಕಾಶನ, ಮೈಸೂರು.

19. ವಸಂತ. ಆರ್ : "ದ ನಾರಾಯಣಸ್ವಾಮಿ ಟೆಂಪಲ್ ಅಟ್ ಮೇಲುಕೋಟೆ", ಪ್ರಾಚ್ಯವಸ್ತುಸಂಗ್ರಹಾಲಯ ಮತ್ತು ನಿರ್ದೇಶನಾಲಯ, ಮೈಸೂರು.

20. ವಾಸುದೇವನ್. ಸಿ.ಎಸ್ : "ಹಂಪಿ ಪರಿಸರದ ಕೆರೆಗಳು", ಕನ್ನಡ ವಿಶ್ವವಿದ್ಯಾಲಯ, ಹಂಪಿ.

21. ಹರಿಪ್ರಿಯ : "ಮೇಲುಕೋಟೆ ಪರಿಚಯ", ಸಂಸ್ಕೃತಿ ಪ್ರಕಾಶನ, ಮೈಸೂರು.

22. ಹರಿಶಂಕರ್.ಹೆಚ್.ಎಸ್ : "ತಿರುಮಲಾರ್ಯ", ಉದಯರವಿ ಪ್ರಕಾಶನ, ಮೈಸೂರು.

ಸಂದರ್ಶನಾರ್ಥಿಗಳು :

1. ಕೇಶವಶೆಟ್ಟಿ – ತೋಟಗಾರಿಕೆ ಮೇಲ್ವಿಚಾರಕರು (ಸಂ.ಸಂ.ಸಂಸತ್)

2. ಕುಮಾರ– ಸ್ಥಳೀಯರು

3. ಜಯರಾಮೇಗೌಡ– ಸ್ಥಳೀಯರು

4. ಪ್ರೋ.ತಾತಾಚಾರ್ಯ

5. ಧನಂಜಯ– ಸ್ಥಳೀಯರು

6. ನಾರಾಯಣ್.ಎಸ್ – ಸಂಶೋಧನಾಧಿಕಾರಿ (ಸಂ.ಸಂ.ಸಂಸತ್)

7. ನಾರಾಯಣ್.ಆರ್.ಕೆ – ಸಂಶೋಧನಾಧಿಕಾರಿ (ಸಂ.ಸಂ.ಸಂಸತ್)

8. ಬೆಟ್ಟೇಗೌಡ– ಸ್ಥಳೀಯರು

9. ಬೆಟ್ಟಸ್ವಾಮಿಗೌಡ– ನಿವೃತ್ತ ಮುಖ್ಯೋಪಾಧ್ಯಾಯರು

10. ಭೈರಶೆಟ್ಟಿ – ಯದುಶೈಲ ಪ್ರೌಢಶಾಲೆಯ ಗುಮಾಸ್ತರು

11. ರಾಜು– ಸ್ಥಳೀಯರು

12. ರಾಜೇಗೌಡ– ಸ್ಥಳೀಯರು

13. ವೆಂಕಟರಾಮೇಗೌಡರು – ಮುಖ್ಯೋಪಾಧ್ಯಾಯರು

14. ವಾಸುದೇವ –ಪುಸ್ತಕ ಮಳಿಗೆಯ ಮಾಲಿಕರು

15. ಸಂತಾನ್‌ರಾಮ್ – ಶಿಕ್ಷಕರು

16. ಸಂಪತ್ – ಅಕ್ಕ–ತಂಗಿ ಕೊಳದ ಕಾವಲುಗಾರ

17. ಸಂಪತ್ಕುಮಾರ್ ಭಟ್ – ದೇವಸ್ಥಾನದ ಪ್ರಧಾನ ಅರ್ಚಕರು

18. ಸರೋಜಮ್ಮ– ಸ್ಥಳೀಯರು

19. ಸಿಂಹ – ಪರಿಸರವಾದಿ

20. ಸ್ಥಾನಿಕಂ ನಾಗರಾಜಯ್ಯಂಗಾರ್ – ದೇವಸ್ಥಾನದ ಅರ್ಚಕರು

21. ಸುರೇಂದ್ರ ಕೌಲಗಿ – ಸ್ವತಂತ್ರ ಹೋರಾಟಗಾರು

22. ಸುಬ್ಬಣ್ಣಶೆಟ್ಟಿ – ಕುಮಾರವ್ಯಾಸ ಭಾರತ ವಾಚನಕಾರರು

23. ಸೆಲ್ವಪಿಳ್ಳೆ – ಉಪನ್ಯಾಸಕರು

24. ಶ್ರೀಕಾಂತ

25. ಹರಿಹರ ಶ್ರೀರಾಮಶರ್ಮ – ನಿವೃತ್ತ ಪ್ರಾಂಶುಪಾಲರು

ಲೇಖನಗಳು, ನಿಯತಕಾಲಿಕೆಗಳು, ವೃತ್ತ ಪತ್ರಿಕೆಗಳು:

1. ಟಿ.ವಿ.ನಾಗರಾಜ, 'ಗುಲ್ಬರ್ಗ ಜಿಲ್ಲೆಯ ನೀರಾವರಿ ಪದ್ಧತಿ'; ಗುಲ್ಬರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಆರ್. ಗೋಪಾಲ್ (ಸಂ), ಪ್ರಾಚ್ಯವಸ್ತುಸಂಗ್ರಹಾಲಯ ಮತ್ತು ನಿರ್ದೇಶನಾಲಯ, ಮೈಸೂರು.
2. ಟಿ.ವಿ.ನಾಗರಾಜ, 'ಶಾಸನಗಳ ಹಿನ್ನೆಲೆಯಲ್ಲಿ ನೀರಾವರಿ', ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ - ಆರ್.ಗೋಪಾಲ್ (ಸಂ), ಪ್ರಾಚ್ಯವಸ್ತುಸಂಗ್ರಹಾಲಯ ಮತ್ತು ನಿರ್ದೇಶನಾಲಯ, ಮೈಸೂರು.
3. ಯದುಗಿರಿ ಮಾಸ ಪತ್ರಿಕೆಗಳು, ಜೂನ್–2004, ಫೆಬ್ರವರಿ–2005.
4. ವೈರಮುಡಿ ವಿಶೇಷ ಸಂಚಿಕೆ, ವಿಜಯ ಕರ್ನಾಟಕ ಪತ್ರಿಕೆ.

ಇಲಾಖಾ ವರದಿಗಳು

1. ಕಂದಾಯ ಇಲಾಖೆ, ಪಾಂಡವಪುರ.
2. ಗ್ರಾಮ ಪಂಚಾಯ್ತಿ ಮೇಲುಕೋಟೆ
3. ಸಣ್ಣ ನೀರಾವರಿ ಇಲಾಖೆ, ಮೈಸೂರು.
4. ಲೋಕೋಪಯೋಗಿ ಇಲಾಖೆ, ಪಾಂಡವಪುರ


ನಕ್ಷೆಗಳು:

ಛಾಯಾಚಿತ್ರಗಳು.


ಮಂಡ್ಯ ಜಿಲ್ಲೆ

ಕರ್ನಾಟಕ

೨೦೦೩




PANDAVAPURA TALUK




ಕಸಬಾ ಮೇಲುಕೋಟೆ
ತಾಲ್ಲೂಕು ಪಾಂಡವಪುರ
ಜಿಲ್ಲೆ ಮಂಡ್ಯ

ಮೇಲುಕೋಟೆ ಪರಿಸರದಲ್ಲಿನ ಜಲಸಂಗ್ರಹಗಳ ಒಂದು ಪಕ್ಷಿ ನೋಟ





ಕಲ್ಯಾಣಿ



ಚಲುವೆಅರಸಿನ ಕೊಳಗಳು



ವೇದಪುಷ್ಕರಣಿ



ಧನುಷ್ಕೋಟಿ



ಯಾದವತೀರ್ಥ




ಪಲಾಶತೀರ್ಥ



ದರ್ಭತೀರ್ಥ



ಪದ್ಮತೀರ್ಥ
















ಮೈತ್ರೇಯತೀರ್ಥ



ನಾರಾಯಣತೀರ್ಥ



ವೈಕುಂಟಗಂಗೆ (ತೊಟ್ಟಿಲುಮಡು)




ಚಕ್ರಕಟ್ಟೆ



ಹೊಸಬಾವಿ



ಕಾಟೇರಿಬಾವಿ



ಒಕ್ಕರಣೆ



ದಳವಾಹಿ ಕೆರೆ



ಹೊಸಕೆರೆ



ಹುಳಿಗೆರೆ



ತೊಣ್ಣೂರು ಕೆರೆ ಹಿನ್ನೀರಿನ ಒಂದು ನೋಟ



ರಾಮಸಿಂಗನಕಟ್ಟೆ



ಸಿಗಡಿಕಟ್ಟೆ